ಶುಕ್ರವಾರ, ಆಗಸ್ಟ್ 13, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಶಾಸಕರ ಅನುದಾನ’ ಜಿಲ್ಲಾವಾರು ಬಿಡುಗಡೆ • ಕ್ಷೇತ್ರ ಅಭಿವೃದ್ಧಿಗೆ ಪೈಪೋಟಿ

ಕೆಲಸ ಮಾಡಿದರೆ ತಕ್ಷಣ ನಿಧಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಇನ್ನು ಮುಂದೆ ಕ್ರಿಯಾ ಯೋಜನೆಗೆ ತ್ವರಿತವಾಗಿ ಅನುಮೋದನೆ ಪಡೆದು ಅನುಷ್ಠಾನಗೊಳಿಸುವ ಶಾಸಕರಿಗೆ ‘ಶಾಸಕರ ನಿಧಿ’ಯ ₹ 2 ಕೋಟಿ ವೆಚ್ಚ ಮಾಡುವ ಅವಕಾಶ ಆದ್ಯತೆ ಮೇರೆಗೆ ಸಿಗಲಿದೆ.

ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗಳ ಅನುಷ್ಠಾನ ಮತ್ತು ಅನುದಾನ ವೆಚ್ಚದ ಪ್ರಗತಿಯನ್ನು ಕ್ಷೇತ್ರವಾರು ಪರಿಶೀಲಿಸಲು ಮತ್ತು ಈ ನಿಧಿ ಬಳಕೆಯಲ್ಲಿ ಶಾಸಕರ ಸಾಧನೆ ಅಳೆಯಲೂ ಸಾಧ್ಯವಾಗಲಿದೆ. ಇದಕ್ಕಾಗಿ, ಈ ಯೋಜನೆಯ ಅನುದಾನವನ್ನು ಇನ್ನು ಮುಂದೆ ಕ್ಷೇತ್ರವಾರು ಬದಲು ಜಿಲ್ಲಾವಾರು ಬಿಡುಗಡೆ ಮಾಡುವಂತೆ ಯೋಜನಾ ಇಲಾಖೆಗೆ ಆರ್ಥಿಕ ಇಲಾಖೆ ಸೂಚಿಸಿದೆ.

ಮೊದಲು ₹ 2 ಕೋಟಿಯ ಕಾಮಗಾರಿಗಳನ್ನು ಪೂರ್ಣಗೊಳಿಸುವ ಶಾಸಕರಿಗೆ ಆದ್ಯತೆಯಲ್ಲಿ ಪೂರ್ಣ ನಿಧಿ ಲಭ್ಯವಾಗಲಿದೆ. ಈ ವ್ಯವಸ್ಥೆ ಅನುದಾನ ಬಳಕೆ ಮತ್ತು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಶಾಸಕರ ಮಧ್ಯೆ ಪೈಪೋಟಿಗೂ ವೇದಿಕೆಯಾಗಲಿದೆ. ಆಯಾ ವರ್ಷದ ನಿಧಿಯನ್ನು ವೆಚ್ಚ ಮಾಡಲು ಜೂನ್ ಅಂತ್ಯದೊಳಗೆ ಕ್ರಿಯಾ ಯೋಜನೆಯನ್ನು ಶಾಸಕರು ಅಂತಿಮಗೊಳಿಸಬೇಕು. ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ವೆಚ್ಚದ ಹಣವನ್ನು ಜಿಲ್ಲಾಧಿಕಾರಿ ಬಿಡುಗಡೆ ಮಾಡಲಿದ್ದಾರೆ.

ಶಾಸಕರ ನಿಧಿ ಬಿಡುಗಡೆ ಕುರಿತಂತೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಪರಿಷತ್ ಸದಸ್ಯರು ಸಭೆ ಸೇರಿ ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೆ, ಅನುದಾನ ಮತ್ತು ವೆಚ್ಚ ಕುರಿತು ಆರ್ಥಿಕ ಇಲಾಖೆ ನಿರ್ದೇಶನ ನೀಡಿದೆ. ಪ್ರಸಕ್ತ ಸಾಲಿನಲ್ಲಿ (2021–22) ₹ 2 ಕೋಟಿಯ ಕ್ರಿಯಾ ಯೋಜನೆ ತಯಾರಿಸಲು ಕೂಡಾ ಇಲಾಖೆ ಒಪ್ಪಿಗೆ ನೀಡಿದೆ.

ಪ್ರಜಾವಾಣಿ ವಿಶೇಷ

ಶಾಸಕರ ಬೇಡಿಕೆಯಂತೆ, ಈ ಯೋಜನೆಯಡಿ ಹಿಂದಿನ ವರ್ಷಗಳ ಬಾಕಿ ಅನುದಾನ ಬಿಡುಗಡೆ ಮಾಡುವಂತೆ ಯೋಜನಾ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಉತ್ತರಿಸಿದ್ದ ಆರ್ಥಿಕ ಇಲಾಖೆ, 2020–21ನೇ ಸಾಲಿನಲ್ಲಿ ಸರ್ಕಾರ ಕೋವಿಡ್ ಕಾರಣ ಪ್ರತಿ ಕ್ಷೇತ್ರಕ್ಕೆ ₹2 ಕೋಟಿ ಬದಲು ₹ 1 ಕೋಟಿ ಮಾತ್ರ ಬಿಡುಗಡೆ ಮಾಡಿದೆ. ಆದರೆ, ಯೋಜನಾ ಇಲಾಖೆ ಪ್ರತಿ ಕ್ಷೇತ್ರಕ್ಕೆ ₹ 2 ಕೋಟಿ ಬಿಡುಗಡೆ ಮಾಡಿದೆ. ಹೀಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ₹ 300 ಕೋಟಿಯನ್ನು 2019–20ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಬಾಕಿ ಇದ್ದ ₹ 300 ಕೋಟಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸೂಚಿಸಿದೆ. ಅಲ್ಲದೆ, ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಪ್ರಸಕ್ತ ಲಭ್ಯವಿರುವ ಅನುದಾನ ಪೂರ್ಣವಾಗಿ ವೆಚ್ಚವಾದ ಬಳಿಕ ಪ್ರಸ್ತಾವನೆ ಸಲ್ಲಿಸಿದರೆ 2018–19ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಬಾಕಿ ಇದ್ದ ₹ 127.69 ಕೋಟಿ ಬಿಡುಗಡೆ ಮಾಡಲು ಒಪ್ಪಿದೆ.

ನೋಡಲ್ ಜಿಲ್ಲೆಗೆ ಅನುದಾನ: ವಿಧಾನ ಪರಿಷತ್ ಸದಸ್ಯರು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ಪ್ರತಿನಿಧಿಸುವುದರಿಂದ, ಅವರು ಆಯ್ಕೆ ಮಾಡಿಕೊಂಡ ಜಿಲ್ಲೆಯ ಜಿಲ್ಲಾಧಿಕಾರಿಯ ಖಾತೆಗೆ ಶಾಸಕರ ನಿಧಿ ಬಿಡುಗಡೆ ಮಾಡಲಾಗುವುದು. ಕ್ರಿಯಾ ಯೋಜನೆಗೆ ನೋಡಲ್ ಜಿಲ್ಲೆಯ ಜಿಲ್ಲಾಧಿಕಾರಿಯಿಂದ ಅನುಮೋದನೆ ಪಡೆಯಬೇಕು. ಕಾಮಗಾರಿ ಅನುಷ್ಠಾನಗೊಳಿಸಿದ ಏಜೆನ್ಸಿಯ ಖಾತೆಗೆ ವೆಚ್ಚದ ಹಣವನ್ನು ವರ್ಗಾವಣೆ ಮಾಡಲಾಗುವುದು ಎಂದು ಯೋಜನಾ ಇಲಾಖೆ ತಿಳಿಸಿದೆ.

2 ವರ್ಷಕ್ಕೂ ಹೆಚ್ಚು ಅವಧಿಯಿಂದ ₹ 295.30 ಕೋಟಿ ಬಾಕಿ!

‘ಶಾಸಕರ ನಿಧಿ’ಯಡಿ ವಿಧಾನಸಭೆ ಸದಸ್ಯರಿಗೆ ಬಿಡುಗಡೆ ಮಾಡಿದ್ದ ಅನುದಾನದಲ್ಲಿ ₹ 241.97 ಕೋಟಿ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಬಿಡುಗಡೆ ಮಾಡಿದ್ದ ಅನುದಾನದಲ್ಲಿ ₹ 53.33 ಕೋಟಿ ಸೇರಿ ಒಟ್ಟು 295.30 ಕೋಟಿ, ಕಾಮಗಾರಿಗಳು ಆರಂಭವಾಗದ ಕಾರಣ ಎರಡು ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಿಂದ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ಉಳಿದಿದೆ.

ಆ ಹಣವನ್ನು ವಾಪಸ್ ಪಡೆಯಲು ಅಥವಾ ವೆಚ್ಚ ಮಾಡಲು ಅವಕಾಶ ಇರಲಿಲ್ಲ. ಹೀಗಾಗಿ, ಬಾಕಿ ಮೊತ್ತವನ್ನು ರಾಜ್ಯಮಟ್ಟದಲ್ಲಿ ಕೇಂದ್ರೀಕೃತ ಬ್ಯಾಂಕ್ ಖಾತೆ ತೆರೆದು ಜಮೆ ಮಾಡಬೇಕು ಎಂದು ಆರ್ಥಿಕ ಇಲಾಖೆ ಸಲಹೆ ನೀಡಿದೆ. ಈ ಮೊತ್ತವನ್ನು ಎಲ್ಲ ಶಾಸಕರು ಮತ್ತು ಪರಿಷತ್ ಸದಸ್ಯರಿಗೆ ಮರುಹಂಚಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಯೋಜನಾ ಇಲಾಖೆಯ ಪ್ರದೇಶಾಭಿವೃದ್ಧಿ ಮಂಡಳಿಯ ನಿರ್ದೇಶಕ ಡಿ. ಚಂದ್ರಶೇಖರಯ್ಯ ಮಾಹಿತಿ ನೀಡಿದರು.

ಶಾಸಕರ ನಿಧಿ– ಹಿಂದಿನ ಬಾಕಿ

ವರ್ಷ	ಬಿಡುಗಡೆ	ಬಾಕಿ (₹ ಕೋಟಿಗಳಲ್ಲಿ)
2018-19	481.69	127.69
2019-20	299.67	303.91

‘ಚಂದ್ರನ ಮೇಲ್ಮೈನಲ್ಲಿ ನೀರಿನ ಕಣ ಪತ್ತೆ’

ನವದೆಹಲಿ (ಪಿಟಿಐ): ಚಂದ್ರನ ಮೇಲ್ಮೈನಲ್ಲಿ ನೀರಿನ ಕಣಗಳು ಇರುವುದನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಚಂದ್ರಯಾನ-2 ಚಂದ್ರ ಪರಿಭ್ರಮಣ ಉಪಗ್ರಹವು ಪತ್ತೆ ಮಾಡಿದೆ ಎಂದು ಅಧ್ಯಯನ ವರದಿ ಹೇಳಿದೆ.



ಚಂದ್ರಯಾನ-2 ಕಾರ್ಯಕ್ರಮದ ಲ್ಯಾಂಡರ್ ನೌಕೆಯು ಚಂದ್ರನ ಮೇಲ್ಮೈನಲ್ಲಿ ಇಳಿಯಲು ವಿಫಲವಾಗಿತ್ತು. ಆದರೆ ಆರ್ಬಿಟರ್ ಉಪಗ್ರಹವು ಯಶಸ್ವಿಯಾಗಿ ಕಕ್ಷೆ ಸೇರಿತ್ತು. ಈ ಉಪಗ್ರಹವು ಪೂರ್ವಯೋಜನೆಯಂತೆ ಕೆಲಸ ಮಾಡುತ್ತಿದ್ದು, ದತ್ತಾಂಶಗಳನ್ನು ರವಾನೆ ಮಾಡುತ್ತಿದೆ. ಈ ದತ್ತಾಂಶಗಳನ್ನು ಆಧರಿಸಿ ನಡೆಸಲಾದ ಅಧ್ಯಯನವು, ‘ಚಂದ್ರನ ಮೇಲ್ಮೈನಲ್ಲಿ ನೀರಿನ ಕಣಗಳನ್ನು ಪತ್ತೆಮಾಡಲಾಗಿದೆ’ ಎಂದು ಹೇಳಿದೆ.

‘ಆರ್ಬಿಟರ್ ಉಪಗ್ರಹದಲ್ಲಿ ಇನ್ಫ್ರಾ ರೆಡ್ ಸ್ಪೆಕ್ಟ್ರೋಮೀಟರ್ ಇದ್ದು, ಅದು ಕಳುಹಿಸುವ ದತ್ತಾಂಶವನ್ನು ವಿಶ್ಲೇಷಿಸಲಾಗಿದೆ. ಚಂದ್ರನ ಮೇಲ್ಮೈನ ಕೆಲವು ಶಿಲೆಗಳಲ್ಲಿ ನೀರಿನ ಕಣಗಳು ಇರುವುದು ಪತ್ತೆಯಾಗಿದೆ’ ಎಂದು ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಅವರು ಹೇಳಿದ್ದಾರೆ.

ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಎಂಟು ಹೊಸ ಕೋರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಆಟೋಮೇಷನ್, ರೊಬಾಟಿಕ್ಸ್, ಸೈಬರ್ ಸೆಕ್ಯುರಿಟಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನಂತಹ ಉದಯೋನ್ಮುಖ ಕ್ಷೇತ್ರಗಳ ಕೌಶಲ ಕಲಿಸುವ ಎಂಟು ಹೊಸ ಕೋರ್ಸ್‌ಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆ ಆರಂಭಿಸಿದೆ.

ರಾಜ್ಯದ ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಈ ಕೋರ್ಸ್‌ಗಳು ಲಭ್ಯ ಇವೆ. ಇಂದಿನ ತಂತ್ರಜ್ಞಾನ ಯುಗಕ್ಕೆ ಸರಿ ಹೊಂದುವ ಮತ್ತು ಜಾಗತಿಕವಾಗಿ ರಾಜ್ಯದ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕವಾಗಿಸುವ ನಿಟ್ಟಿನಲ್ಲಿ ಈ ಕೋರ್ಸ್‌ಗಳು ಸಹಾಯಕವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಸೈಬರ್ ಸೆಕ್ಯುರಿಟಿಯಲ್ಲಿ ಇಸ್ರೇಲ್, ಫಿಲ್ಮ್ ಅಂಡ್ ಎಂಟರ್‌ಟೈನ್‌ಮೆಂಟ್‌ನಲ್ಲಿ ಕೊರಿಯಾ ದೇಶಗಳ ಜಾಗತಿಕ ಮಟ್ಟದ ಸಾಧನೆ ಬೆರಗಾಗುವಂತಹದ್ದು. ಆ ದೇಶಗಳಿಗೆ ಹಲವು ಶತಕೋಟಿ ಡಾಲರ್‌ಗಳ ಆದಾಯ ಸಿಗುತ್ತಿದೆ. ನಮ್ಮ ರಾಜ್ಯದಲ್ಲೂ ಪ್ರತಿಭೆಗಳಿವೆ. ಸಾಂಪ್ರದಾಯಿಕ ಕೋರ್ಸ್‌ಗಳಿಗೆ ಪರ್ಯಾಯವಾಗಿ ಆಧುನಿಕ ಕೋರ್ಸ್‌ಗಳಲ್ಲಿ ಅವಕಾಶ ನೀಡಿದರೆ ಉದ್ಯೋಗವೂ ಸಿಗುತ್ತದೆ’ ಎಂದು ಅವರು ಹೇಳಿದರು.

‘ನಾವು ಈಗ ಆರಂಭಿಸುತ್ತಿರುವ ಕೋರ್ಸ್‌ಗಳು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯಂತ ದುಬಾರಿ ಕೋರ್ಸ್‌ಗಳು ಎನಿಸಿವೆ’ ಎಂದರು.

ಹೊಸ ಕೋರ್ಸ್‌ಗಳು

ಪರ್ಯಾಯ ಇಂಧನ ತಂತ್ರಜ್ಞಾನ, ಕ್ಲೌಡ್ ಕಂಪ್ಯೂಟಿಂಗ್ ಮತ್ತು ಬಿಗ್ ಡೇಟಾ, ಲಾಜಿಸ್ಟಿಕ್ ಟೆಕ್ನಾಲಜಿ, ಡೈರೆಕ್ಷನ್, ಸ್ಕ್ರೀನ್ ಪ್ಲೇ ಮತ್ತು ಟಿ.ವಿ ಪ್ರೊಡಕ್ಷನ್, ಆಟೋಮೇಷನ್ ಮತ್ತು ರೋಬಾಟಿಕ್ಸ್, ಸೈಬರ್ ಸೆಕ್ಯುರಿಟಿ, ಟ್ರಾವೆಲ್ ಟೂರಿಸಂ, ಫುಡ್ ಪ್ರೊಸೆಸಿಂಗ್ ಮತ್ತು ಪ್ರಿಸರ್ವೇಷನ್.

ಅಲ್ಲದೆ, ಸಂವಹನ ಕೌಶಲಗಳು, ಯೋಜನಾ ನಿರ್ವಹಣೆ ಕೌಶಲಗಳು, ಸಾಮಾನ್ಯ ಮಾಹಿತಿ ತಂತ್ರಜ್ಞಾನ ಕೌಶಲಗಳು, ಅಂಕಿ–ಅಂಶಗಳು ಮತ್ತು ವಿಶ್ಲೇಷಣಾ ಕೌಶಲಗಳು, ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ಸ್‌ನ ಮೂಲಭೂತ ಕೌಶಲಗಳನ್ನು ಕಲಿಸಲಾಗುತ್ತದೆ ಎಂದರು.

6ನೇ ಪುಟ ನೋಡಿ

ಪಂಚಮಸಾಲಿ ಮೀಸಲಾತಿ: ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ

ಬೇಡಿಕೆ ಈಡೇರಿಸದಿದ್ದರೆ ಮತ್ತೆ ಹೋರಾಟ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಬೇಡಿಕೆಯನ್ನು ಆರು ತಿಂಗಳೊಳಗೆ ಈಡೇರಿಸುವುದಾಗಿ ರಾಜ್ಯ ಸರ್ಕಾರ ನೀಡಿದ್ದ ಗಡುವು, ಸೆಪ್ಟೆಂಬರ್ 15ಕ್ಕೆ ಮುಗಿಯಲಿದೆ. ಅಷ್ಟರೊಳಗೆ ಮಾತು ಉಳಿಸಿಕೊಳ್ಳಬೇಕು. ಇಲ್ಲದಿದ್ದರೆ, ಮತ್ತೆ ಧರಣಿ ಆರಂಭಿಸಲಾಗುವುದು' ಎಂದು ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಮೀಸಲಾತಿ ಹೋರಾಟ ಕುರಿತು ಹುಬ್ಬಳ್ಳಿಯಲ್ಲಿ ಗುರುವಾರ ನಡೆದ ಚಳವಳಿಗಾರರ ದುಂಡು ಮೇಜಿನ ಸಭೆಯ ನಿರ್ಣಯಗಳನ್ನು ಸುದ್ದಿಗೋಷ್ಠಿಯಲ್ಲಿ ಹಂಚಿಕೊಂಡ ಅವರು, 'ಸರ್ಕಾರ ಕೊಟ್ಟಿದ್ದ ಮಾತನ್ನು ನೆನಪಿಸಲು ರಾಜ್ಯದಾದ್ಯಂತ ಆ.26ರಿಂದ ಸೆ.30ರ ವರೆಗೆ 'ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್' ಅಭಿಯಾನ ಹಮ್ಮಿಕೊಳ್ಳಲಾಗುವುದು' ಎಂದರು.

ಸಿ.ಸಿ ಪಾಟೀಲ ಸಂಧಾನಕಾರ: 'ಮೀಸಲಾತಿ ಹೋರಾಟ ಕುರಿತು ಸರ್ಕಾರದ ಜೊತೆ ಸಂಧಾನಕಾರರಾಗಿ ಮಾತುಕತೆ ನಡೆಸಲು ಸಚಿವ ಸಿ.ಸಿ. ಪಾಟೀಲ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಅಲ್ಲದೆ ಮೀಸಲಾತಿಗೆ ಸಂಬಂಧಿಸಿದ ಕುರುಬ, ವಾಲ್ಮೀಕಿ, ಮಡಿವಾಳ, ಗಂಗಾಮತ, ಆದಿ ಬಣಜಿಗ, ಕುಡು ಒಕ್ಕಲಿಗ ಹಾಗೂ ಇತರ ಸಮಾಜಗಳ ಬೇಡಿಕೆಗಳನ್ನು ಸಹ ಸರ್ಕಾರ ಈಡೇರಿಸಬೇಕು ಎಂದು ಸಮುದಾಯ ಒತ್ತಾಯಿಸುತ್ತದೆ' ಎಂದು ತಿಳಿಸಿದರು.

'ಒಬಿಸಿಗಳನ್ನು ಗುರುತಿಸುವ ಮತ್ತು ಪ್ರತ್ಯೇಕ ಪಟ್ಟಿ ರೂಪಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಡುವ ಮಸೂದೆ ಲೋಕಸಭೆಯಲ್ಲಿ ಅಂಗೀಕಾರವಾಗಿದೆ. ರಾಜ್ಯ ಸರ್ಕಾರಕ್ಕೆ ನಮ್ಮ ಬೇಡಿಕೆ ಈಡೇರಿಸುವ ಹಾದಿ ಈಗ ಸುಗಮವಾಗಿದೆ. ಇದಕ್ಕೆ ಪೂರಕವಾಗಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಶೀಘ್ರ ವರದಿ ನೀಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೀಸಲಾತಿಯೇ ಗುರಿ: 'ಕೆಲ ಮಠಾಧೀಶರು ತಮ್ಮ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಿ, ಸಚಿವರನ್ನಾಗಿ ಮಾಡಿ ಎಂದು ಒತ್ತಾಯಿಸುತ್ತಾರೆ. ನಮ್ಮ ಗುರಿ ಸಮುದಾಯಕ್ಕೆ ಮೀಸಲಾತಿ ಕೊಡಿಸುವುದಷ್ಟೇ. ನಂಬಿಕೆ ಇದ್ದವರು ಹೋರಾಟದಲ್ಲಿ ಪಾಲ್ಗೊಳ್ಳಬಹುದು' ಎಂದು ಸ್ವಾಮೀಜಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, 'ಇನ್ನೂ ಹತ್ತು ಪಂಚಮಸಾಲಿ ಪೀಠಗಳು ಸ್ಥಾಪನೆಯಾದರೂ, ಯಾವ ಪೀಠದ ಅಂತರಂಗದಲ್ಲಿ ಏನಿದೆ ಎಂಬುದು ಸಮುದಾಯದವರಿಗೆ ಗೊತ್ತಾಗಿದೆ' ಎಂದರು.

ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಸಭೆ ಆರಂಭಕ್ಕೂ ಮುಂಚೆ, ಸ್ವಾಮೀಜಿಯನ್ನು ಭೇಟಿ ಮಾಡಿದರು. 'ಸಭೆಯಲ್ಲಿ ಭಾಗವಹಿಸುವುದಿಲ್ಲ' ಎಂದು ಹೊರಟರು.



ಹುಬ್ಬಳ್ಳಿಯಲ್ಲಿ ಗುರುವಾರ ನಡೆದ ಪಂಚಮಸಾಲಿ ಮೀಸಲಾತಿ ಚಳವಳಿಗಾರರ ದುಂಡು ಮೇಜಿನ ಸಭೆಯಲ್ಲಿ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು. ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಮೀಸಲಾತಿ ಚಳವಳಿ ಸ್ವಾಗತ ಸಮಿತಿ ಅಧ್ಯಕ್ಷ ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಕೀಲ ದಿನೇಶ ಪಾಟೀಲ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಶಿವಶಂಕರ ಇದ್ದಾರೆ

ಪಂಚಮಸಾಲಿ ಹೋರಾಟದ ಬಗ್ಗೆ ಸರ್ಕಾರ ಸಕಾರಾತ್ಮಕ ಹೆಜ್ಜೆ ಇಡಲಿದೆ. ಆ. 15ರ ಬಳಿಕ ಸ್ವಾಮೀಜಿ ಮತ್ತು ಮುಖ್ಯಮಂತ್ರಿ ಭೇಟಿಗೆ ವ್ಯವಸ್ಥೆ ಮಾಡುವೆ

ಸಿ.ಸಿ. ಪಾಟೀಲ, ಲೋಕೋಪಯೋಗಿ ಸಚಿವ

'ಮಲೆ ಮಹದೇಶ್ವರ ಬೆಟ್ಟದಿಂದ ಅಭಿಯಾನ ಆರಂಭ'

'ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಿಂದ ಅಭಿಯಾನ ಆರಂಭವಾಗಲಿದೆ. ಪಂಚಮಸಾಲಿ ಗೌಡ ಹಾಗೂ ದೀಕ್ಷಾ ಪಂಚಮಸಾಲಿ ಸಮಾಜದವರನ್ನು ಒಗ್ಗೂಡಿಸಿಕೊಂಡು, ಪ್ರತಿ ತಾಲ್ಲೂಕಿನಲ್ಲೂ ಹೋರಾಟ ಕುರಿತು ಜಾಗೃತಿ ಮೂಡಿಸಲಾಗುವುದು'.

'ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಜನ್ಮ ದಿನವಾದ ಅಕ್ಟೋಬರ್ 1ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಕೂರಲಾಗುವುದು' ಎಂದು ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಚಿವುಟಲು ಬಂದರೆ ಕಪಾಳಕ್ಕೆ ಹೊಡೆವೆ: ಶಾಸಕ ಯತ್ನಾಳ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪಕ್ಷದೊಳಗೆ ಯಾರೂ ನನ್ನನ್ನು ಚಿವುಟಿಲ್ಲ. ಯಾರಾದರೂ ಚಿವುಟಲು ಬಂದರೆ ಕಪಾಳಕ್ಕೆ ಹೊಡೆಯುವ ಮಗ ನಾನು. ನನ್ನ ವಿರೋಧ ಕಟ್ಟಿಕೊಂಡಿದ್ದಕ್ಕೆ ಬಿ.ಎಸ್. ಯಡಿಯೂರಪ್ಪ ಅವರು ಸಿ.ಎಂ ಹುದ್ದೆಯಿಂದ ಕೆಳಗಿಳಿದರು. ಅವರಿಗೆ ವಿರುದ್ಧವಾಗಿದ್ದಕ್ಕೆ ಸಚಿವನಾಗಲಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಹುಬ್ಬಳ್ಳಿಯಲ್ಲಿ ಗುರುವಾರ ನಡೆದ ಪಂಚಮಸಾಲಿ ಮೀಸಲಾತಿ ಚಳವಳಿಗಾರರ ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ನಾಲಿಗೆ ಸರಿ ಇಲ್ಲ. ಅದಕ್ಕಾಗಿ ಸಚಿವ ಸ್ಥಾನ ಸಿಗಲಿಲ್ಲ ಎಂದು ಕೆಲವರು ಹೇಳುತ್ತಾರೆ. ನಾಲಿಗೆ ಸರಿ ಇದ್ದಿದ್ದಕ್ಕಾಗಿಯೇ ರಾಜ್ಯದಲ್ಲಿ ಇಷ್ಟೆಲ್ಲಾ ಬದಲಾವಣೆಗಳಾಗಿವೆ' ಎಂದರು.

'ಯಡಿಯೂರಪ್ಪ ಅವರ ಷರತ್ತು ಮತ್ತು ಒತ್ತಡವೇ ಬೊಮ್ಮಾಯಿ ಸಿ.ಎಂ ಆಗಲು ಮಾನದಂಡ. ಹಾಗಂತ ಅವರು, ಬಿಎಸ್‌ವೈ ನೆರಳು ಎಂದು ನಿರ್ಣಯಿಸಲಾಗದು. ನಾಯಕ ವೈಯಕ್ತಿಕ ಛಾಪು ಇಟ್ಟುಕೊಳ್ಳಬೇಕು. ಬೊಮ್ಮಾಯಿ ಬದಲಾಗಲೇಬೇಕು. ಮೇಲಿನವರ ಮಾತು ಕೇಳಲೇಬೇಕು. ಅದರ ಭಾಗವಾಗಿಯೇ ಯಡಿಯೂರಪ್ಪ ಅವರು ಇದ್ದಾಗಿನ ಅಧಿಕಾರಿಗಳನ್ನು ಬದಲಾವಣೆ ಮಾಡಲಾಗಿದೆ' ಎಂದರು.

'ಖಾತೆ ಬದಲಾಯಿಸಿ ಹಾಗೂ ನಮ್ಮವರನ್ನು ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿ ಮೇಲೆ ಒತ್ತಡ ಹಾಕಬಾರದು. ರಾಜ್ಯದಲ್ಲಿ ಪ್ರವಾಹ ಸೇರಿದಂತೆ ಹಲವು ಸಮಸ್ಯೆಗಳಿವೆ. ಹಿಂದಿನ ಸಿ.ಎಂ ಮನೆ ಕಳೆದುಕೊಂಡವರಿಗೆ ₹5 ಲಕ್ಷ ಕೊಡುತ್ತೇನೆ ಎಂದು, ₹1 ಲಕ್ಷ ಕೊಟ್ಟು ಕೈ ತೊಳೆದುಕೊಂಡರು. ಇವುಗಳ ಹಿಂದಿರುವ ಸೂತ್ರಧಾರರು ಮಗು ಚಿವುಟಿ, ತೊಟ್ಟಿಲನ್ನೂ ತೂಗುತ್ತಾರೆ. ಬಳಿಕ, ಅರವಿಂದ ಬೆಲ್ಲದ ಮತ್ತು ನನ್ನತ್ತ ಕೈ ತೋರಿಸುತ್ತಾರೆ. ರಮೇಶ ಜಾರಕಿಹೊಳಿ ಅವರನ್ನೂ ಹೀಗೆಯೇ ಸಿಲುಕಿಸಿದರು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ನೆರೆ ಸಂತ್ರಸ್ತರ ಕೈಸೇರದ 'ತುರ್ತು ಪರಿಹಾರ'

• ಎಂ. ಮಹೇಶ

ಬೆಳಗಾವಿ: 'ನೆರೆ ಮತ್ತು ಅತಿವೃಷ್ಟಿಯಿಂದಾಗಿ ಮನೆ ಕಳೆದುಕೊಂಡವರಿಗೆ ತುರ್ತು ಪರಿಹಾರವಾಗಿ ₹10 ಸಾವಿರ ಬಿಡುಗಡೆ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿ 11 ದಿನಗಳಾದರೂ ಸಂತ್ರಸ್ತರ ಕೈಗೆ ಹಣ ಸೇರಿಲ್ಲ.

'ಮನೆಯನ್ನು ಸಂಪೂರ್ಣ ಕಳೆದುಕೊಂಡವರಿಗೆ ₹ 5 ಲಕ್ಷ, ಭಾಗಶಃ ಹಾನಿಯಾಗಿದ್ದರೆ ₹ 3 ಲಕ್ಷ, ಅಲ್ಪ ಹಾನಿಯಾಗಿದ್ದರೆ ₹ 50 ಸಾವಿರ ನೀಡಲಾಗುತ್ತದೆ. ಕಳೆದ ವರ್ಷ ಮನೆ ಕಳೆದುಕೊಂಡು, ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದರೆ ಅದಕ್ಕೆ ಬಾಕಿ ಇರುವ ಹಣ ಪಾವತಿಗೂ ಆದೇಶಿಸಲಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದ್ದರು. ಮೊದಲ ಕಂತಿನ ಪರಿಹಾರ ನೀಡುವ ಪ್ರಕ್ರಿಯೆ ಆರಂಭವಾಗದೇ, ಸಂತ್ರಸ್ತರು ಅತಂತ್ರ ಸ್ಥಿತಿಯಲ್ಲಿದ್ದಾರೆ.

ಪಟ್ಟಿಯೇ ಸಿದ್ಧವಾಗಿಲ್ಲ: ಜಿಲ್ಲಾಡಳಿತದ ಮಾಹಿತಿ ಪ್ರಕಾರ, ಜಿಲ್ಲೆಯೊಂದರಲ್ಲೇ 14 ತಾಲ್ಲೂಕುಗಳ 201 ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿವೆ. ನೆರೆಯಲ್ಲಿ ಸಿಲುಕಿದ್ದ 1,50,015 ಜನರನ್ನು ಹಾಗೂ 67,329 ಜಾನುವಾರುಗಳನ್ನು ರಕ್ಷಿಸಲಾಗಿದೆ. 1,19,422 ಹೆಕ್ಟೇರ್ ಕೃಷಿ ಹಾಗೂ ತೋಟಗಾರಿಕಾ ಪ್ರದೇಶದ ಬೆಳೆ ಹಾನಿಯಾಗಿದೆ. ಅಲ್ಲಲ್ಲಿ 324 ಮನೆಗಳು ಪೂರ್ಣ ಪ್ರಮಾಣದಲ್ಲಿ ಹಾಗೂ 5,003 ಭಾಗಶಃ ಹಾನಿಗೊಳಗಾಗಿವೆ. ₹ 2,800 ಕೋಟಿ ಹಾನಿ ಅಂದಾಜಿಸಲಾಗಿದೆ. ಇಲ್ಲಿ ನಷ್ಟ ಅನುಭವಿಸಿದವರ ಪಟ್ಟಿ ಸಿದ್ಧಪಡಿಸಿ ₹10 ಸಾವಿರ ತುರ್ತು ಪರಿಹಾರ ನೀಡುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೂ ವಿಳಂಬ ಮಾಡಲಾಗುತ್ತಿದೆ.

ಅಧಿಕಾರಿಗಳು, ಸಂತ್ರಸ್ತರ ವಿವರ ಪಡೆಯುವ ಕಾರ್ಯವನ್ನೇ ಮುಗಿಸಿಲ್ಲ. ಅಥಣಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯಿಂದ ಸಂತ್ರಸ್ತರಾದ 22 ಹಳ್ಳಿಗಳ ಜನರು ತಾತ್ಕಾಲಿಕ ಶೆಡ್‌ನಲ್ಲಿ, ಕೆಲವರು ಸಂಬಂಧಿಕರ ಮನೆಗಳಲ್ಲಿದ್ದಾರೆ. ಅಥಣಿಯಲ್ಲಿ ಕಾಳಜಿ ಕೇಂದ್ರಗಳನ್ನು ಮುಂದುವರಿಸಲಾಗಿದೆ.

ಖಾತೆಗಳಿಗೆ ಜಮಾ ಮಾಡ್ತೀವಿ: 'ಪರಿಹಾರ ವಿತರಣೆಯಲ್ಲಿ ಅಕ್ರಮ ತಡೆಯಲು, ಸಂತ್ರಸ್ತರ ಖಾತೆಗಳಿಗೆ ಆರ್‌ಟಿಜಿಎಸ್ ಮೂಲಕ ನೇರವಾಗಿ ಹಣ ಹಾಕಲಾಗುವುದು. ಪೂರ್ಣ ಮನೆ ಬಿದ್ದಿದ್ದರೆ ಮಾತ್ರ ₹ 10 ಸಾವಿರ ತುರ್ತು ಪರಿಹಾರ ಸಿಗಲಿದೆ. ಅವರ ಪಟ್ಟಿಯನ್ನು ಸಮರ್ಪಕ ಮಾಹಿತಿಯೊಂದಿಗೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ತಿಳಿಸಿದರು.

'ಚಿಕ್ಕೋಡಿ ವಿಭಾಗದಲ್ಲಿ ಮತ್ತು ಗೋಕಾಕ ಹಾಗೂ ಹುಕ್ಕೇರಿ ತಾಲ್ಲೂಕುಗಳಲ್ಲಿ ಹೆಚ್ಚು ಹಾನಿಯಾಗಿದೆ. ಮನೆ ಕಳೆದುಕೊಂಡವರ ಬ್ಯಾಂಕ್ ಖಾತೆ, ಆಧಾರ್ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಸಹಿತ ಸಂಪೂರ್ಣ ಮಾಹಿತಿ ಪಡೆದು ವರದಿ ಸಲ್ಲಿಸುವಂತೆ ತಿಳಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಇನ್ನೂ ನಡೆಯುತ್ತಿದೆ ಸಮೀಕ್ಷೆ
- ಅತಿವೃಷ್ಟಿಯಿಂದ 13 ಜಿಲ್ಲೆಗಳಲ್ಲಿ ಅಪಾರ ಹಾನಿ
- ಪಟ್ಟಿ ಸಿದ್ಧಪಡಿಸಲು ಸೂಚನೆ

ಸಂತ್ರಸ್ತರಿಗೆ ಪರಿಹಾರ ಪಾವತಿಸಲು ಪೂರ್ವ ತಯಾರಿ ನಡೆಸಲಾಗುತ್ತಿದೆ. ಅರ್ಹರ ಖಾತೆಗಳಿಗೆ ಶೀಘ್ರದಲ್ಲೇ ಪರಿಹಾರ ಜಮಾ ಮಾಡಲಾಗುವುದು

ಎಂ.ಜಿ. ಹಿರೇಮಠ, ಜಿಲ್ಲಾಧಿಕಾರಿ

ಗ್ರಾಮ ಪಂಚಾಯ್ತಿಯವರಾಗಲಿ ಅಧಿಕಾರಿಗಳಾಗಲಿ ಸಮೀಕ್ಷೆಯನ್ನೂ ನಡೆಸಿಲ್ಲ. ₹ 10ಸಾವಿರ ಪರಿಹಾರವೂ ಸಿಕ್ಕಿಲ್ಲ

ರಾವಸಾಬ ಶಂಕರ ಕೋರೆ, ಮಾಂಜರಿ, ಚಿಕ್ಕೋಡಿ ತಾಲ್ಲೂಕು



ಬೆಳಗಾವಿ ತಾಲ್ಲೂಕಿನ ಹುದಲಿ ಗ್ರಾಮದ ಜನತಾ ಪ್ಲಾಟ್‌ನ ಬಾಳಪ್ಪ ಬಸಪ್ಪ ನೆಲಗಂಟಿ ಅವರ ಮನೆ ಗೋಡೆಗಳು ಮಳೆಯಿಂದಾಗಿ ಕುಸಿದಿರುವುದು

ಮಳೆಯಿಂದಾದ ಹಾನಿ (ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾಹಿತಿ)

2.03 ಲಕ್ಷ ಹೆಕ್ಟೇರ್ ಬೆಳೆ ಹಾನಿ	794 ಸೇತುವೆಗಳಿಗೆ ಹಾನಿ	33,548 ಬಿದ್ದಿರುವ ವಿದ್ಯುತ್ ಕಂಬಗಳು	7,581 ದುರಸ್ತಿಗೀಡಾಗಿರುವ ಪರಿವರ್ತಕಗಳು	1,228 ಮನೆಗಳು ಪೂರ್ಣ ಕುಸಿತ
9,310 ಮನೆಗಳು ಭಾಗಶಃ ಹಾನಿಗೊಳಗಾದ ಮನೆಗಳು	385 ಶಾಲಾ ಕೊಠಡಿಗಳು ಜಖಂ	43 ಆರೋಗ್ಯ ಕೇಂದ್ರಗಳಿಗೆ ಹಾನಿ	7,705 ಕಿ.ಮೀ ರಸ್ತೆ ಜಖಂ	

ಮೋದಿ ಸರ್ಕಾರದ ವಿರುದ್ಧ ಮುಖಂಡರ ಆಕ್ರೋಶ

ಕಾಂಗ್ರೆಸ್ ಪಕ್ಷ, ನಾಯಕರ ಖಾತೆಗೆ ಟ್ವಿಟರ್ ತಡೆ

ನವದೆಹಲಿ (ಪಿಟಿಐ): 'ಸರ್ಕಾರದ ಒತ್ತಡಕ್ಕೆ ಮಣಿದು, ನಿಯಮ ಉಲ್ಲಂಘನೆ ಆರೋಪದಡಿ ತಮ್ಮ ಪಕ್ಷದ ಮತ್ತು ಹಲವು ಮುಖಂಡರ ಅಧಿಕೃತ ಖಾತೆಗಳನ್ನು ಟ್ವಿಟರ್ ತಡೆಹಿಡಿದಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಟ್ವಿಟರ್ ಮೇಲೆ ಸರ್ಕಾರದ ಒತ್ತಡವಿದೆ. ದೇಶದಾದ್ಯಂತ 5 ಸಾವಿರಕ್ಕೂ ಹೆಚ್ಚು ನಾಯಕರು, ಕಾರ್ಯಕರ್ತರ ಖಾತೆಯನ್ನೂ ತಡೆಹಿಡಿಯಲಾಗಿದೆ. ಟ್ವಿಟರ್ ಅಥವಾ ಸರ್ಕಾರದ ಒತ್ತಡಕ್ಕೆ ನಾವು ಅಂಜುವುದಿಲ್ಲ' ಎಂದು ಎಐಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ರೋಹನ್ ಗುಪ್ತಾ ಹೇಳಿದ್ದಾರೆ.

ದೆಹಲಿಯಲ್ಲಿ ನಡೆದಿದ್ದ ಅತ್ಯಾಚಾರ ಮತ್ತು ಕೊಲೆಯಾದ ಬಾಲಕಿಯ ಕುಟುಂಬದ ಜೊತೆಗಿನ ಚಿತ್ರವನ್ನು ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು ಹಂಚಿಕೊಂಡಿದ್ದರು. ಇದು, ವ್ಯಕ್ತಿಗತ ಗೌಪ್ಯತೆ ರಕ್ಷಣೆ ಕುರಿತ ಸಂಸ್ಥೆಯ ನಿಯಮದ ಉಲ್ಲಂಘನೆ ಎಂದು ಪ್ರತಿಪಾದಿಸಿದ್ದ ಟ್ವಿಟರ್ ಅವರ ಖಾತೆಯನ್ನು ತಡೆಹಿಡಿದಿತ್ತು.

ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ, 'ಖಾತೆ ತಡೆಹಿಡಿಯಲು ಟ್ವಿಟರ್‌ಗೆ ಬೆದರಿಕೆ ಒಡ್ಡುವ ಮೂಲಕ ನರೇಂದ್ರ ಮೋದಿ ಸರ್ಕಾರವು ನಮ್ಮ ಧ್ವನಿಯನ್ನು ಹತ್ತಿಕ್ಕಲಾಗದು' ಎಂದು ಹೇಳಿದ್ದಾರೆ.

'ಪೊಲೀಸರ ಮೂಲಕ ಟ್ವಿಟರ್ ಸಂಸ್ಥೆಗೆ ಎಷ್ಟು ಬೆದರಿಕೆ ಒಡ್ಡುತ್ತೀರಿ. ಇದು, ಕೇವಲ ವಾಕ್ ಸ್ವಾತಂತ್ರ್ಯವಷ್ಟೇ ಅಲ್ಲ. ಬಡ, ವಾಲ್ಮೀಕಿ ದಲಿತ ಬಾಲಕಿಗೆ ನ್ಯಾಯ ಕೋರುವ ಧ್ವನಿಯಾಗಿದೆ. ಬಾಲಕಿಯ ಕುಟುಂಬಕ್ಕೆ ನ್ಯಾಯ ದೊರಕುವವರೆಗೂ ಈ ಧ್ವನಿ ಮೊಳಗುತ್ತಲೇ ಇರುತ್ತದೆ' ಎಂದಿದ್ದಾರೆ.

ಟ್ವಿಟರ್ ಸಂಸ್ಥೆಯು ಅಧಿಕೃತ ಖಾತೆ ತಡೆಹಿಡಿದಿದ್ದ ಚಿತ್ರಗಳನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್, 'ನ್ಯಾಯಕ್ಕಾಗಿ ಧ್ವನಿ ಎತ್ತುವುದು ನಿಯಮಗಳ ಉಲ್ಲಂಘನೆ ಅಥವಾ ಅಪರಾಧವಾದರೆ, ಆ ಅಪರಾಧದಿಂದ ಹಿಂದೆ ಸರಿಯುವುದಿಲ್ಲ' ಎಂದು ಪೋಸ್ಟ್ ಮಾಡಿದೆ.

ಐವರ ಖಾತೆಗಳಿಗೆ ತಡೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ವಕ್ತಾರ ರಣದೀಪ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್, ಲೋಕಸಭೆಯಲ್ಲಿ ಪಕ್ಷದ ಸಚೇತಕ ಮಾಣಿಕ್ಕಂ ಟಾಗೋರ್, ಕೇಂದ್ರದ ಮಾಜಿ ಸಚಿವ ಜಿತೇಂದ್ರ ಸಿಂಗ್ ಮತ್ತು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಶ್ಮಿತಾ ದೇವ್ ಅವರ ಟ್ವಿಟರ್ ಖಾತೆಗಳನ್ನು ತಡೆಹಿಡಿಯಲಾಗಿದೆ ಎಂದು ಪಕ್ಷವು ತಿಳಿಸಿದೆ.

ನಿಯಮ ಉಲ್ಲಂಘಿಸಿದಕ್ಕಾಗಿ ತಡೆ: ಟ್ವಿಟರ್

'ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಗುರುತು ಬಹಿರಂಗಪಡಿಸಿ, ನಿಯಮ ಉಲ್ಲಂಘಿಸಿದ್ದಕ್ಕಾಗಿ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಹಲವು ನಾಯಕರ ಖಾತೆಗಳನ್ನು ತಡೆಹಿಡಿಯಲಾಗಿದೆ' ಎಂದು ಟ್ವಿಟರ್ ಗುರುವಾರ ಸ್ಪಷ್ಟನೆ ನೀಡಿದೆ.

ದೆಹಲಿಯಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಕುಟುಂಬಸ್ಥರ ಜೊತೆಗಿನ ಫೋಟೊವನ್ನು ರಾಹುಲ್ ಗಾಂಧಿ ಸೇರಿ ಹಲವು ಕಾಂಗ್ರೆಸ್ ನಾಯಕರು ಕಳೆದ ವಾರ ಟ್ವೀಟ್ ಮಾಡಿದ್ದರು. ಇದಕ್ಕಾಗಿ ಪಕ್ಷದ ಅಧಿಕೃತ ಖಾತೆಯನ್ನು ತಡೆಹಿಡಿಯಲಾಗಿದೆ.

'ಕಾನೂನು ಪ್ರಕಾರ, ಸಂಸ್ಥೆಯ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಟ್ವಿಟರ್ ಸೇವೆ ಬಳಸುವ ಎಲ್ಲರಿಗೂ ನಿಯಮ ಸಮಾನವಾಗಿ ಅನ್ವಯವಾಗುತ್ತದೆ. ಹಿಂದೆಯೂ ನಿಯಮಗಳನ್ನು ಉಲ್ಲಂಘಿಸಿ ಫೋಟೊ ಹಂಚಿಕೊಂಡಿದ್ದ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗಿದೆ. ವ್ಯಕ್ತಿಗತ ಗೌಪ್ಯತೆ ರಕ್ಷಿಸುವುದು ನಮ್ಮ ಉದ್ದೇಶವಾಗಿದೆ' ಎಂದು ಟ್ವಿಟರ್ ವಕ್ತಾರರು ತಿಳಿಸಿದ್ದಾರೆ.

'ಟ್ವಿಟರ್ ತನ್ನದೇ ನೀತಿ ಪಾಲಿಸುತ್ತಿದೆಯೇ ?'

ಕಾಂಗ್ರೆಸ್ ನಾಯಕರ ಖಾತೆಗಳನ್ನು ತಡೆಹಿಡಿಯಲು ಟ್ವಿಟರ್ ತನ್ನದೇ ನೀತಿಯನ್ನು ಪಾಲಿಸುತ್ತಿದೆಯೇ ಅಥವಾ ಮೋದಿ ಸರ್ಕಾರದ ನೀತಿಯನ್ನೇ? ಕಾಂಗ್ರೆಸ್ ನಾಯಕರಿಗೂ ಮೊದಲು ಇಂತಹದೇ ಫೋಟೊವನ್ನು ಹಂಚಿಕೊಂಡಿದ್ದ ಪರಿಶಿಷ್ಟ ಜಾತಿ ಆಯೋಗದ ಖಾತೆಯನ್ನು ಏಕೆ ತಡೆಹಿಡಿಯಲಾಗಿಲ್ಲ?

ಪ್ರಿಯಾಂಕಾ ಗಾಂಧಿ, ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಶುಕ್ರವಾರ, ಆಗಸ್ಟ್ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 225 | ಪುಟ 14 + 4

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ






ನಾಗರ ಪಂಚಮಿ ಶುಭಾಶಯ

ವಿಶೇಷ ಲೇಖನ 6

ಸೆನ್ಸೆಕ್ಸ್	ನಿಫ್ಟಿ	₹/$
54,843 ▲	16,364 ▲	74.25 ▲



ಸಿನಿಮಾ ಪುರವಣಿ

ಕನ್ನಡ ಚಿತ್ರಗಳನ್ನು ಕನ್ನಡದ ನೆಲದಲ್ಲೇ ಮಾಡಿ, ಅದಕ್ಕೊಂದು ಆರ್ಥಿಕತೆ ಸೃಷ್ಟಿಸಿ ಬೆಳೆಸಿದ ಅನನ್ಯ ಕಥಾನಾಯಕ ಡಿ. ಶಂಕರ್ ಸಿಂಗ್ ಅವರ ಬದುಕಿನ ಕೆಲವು ಪುಟಗಳು

ರಾಜ್ಯ ಕೋವಿಡ್ ಅಂಕಿ–ಅಂಶ

29,24,732 ▲ ಒಟ್ಟು ಸೋಂಕಿತರು (29,22,875 ನಿನ್ನೆಯ ವಿವರ)

22,728 ▼ ಸಕ್ರಿಯ ಪ್ರಕರಣಗಳು

28,65,067 ▲ ಗುಣಮುಖರಾದವರು

36,911 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,857	▲
ಗುಣಮುಖ	1,950	▲
ಸಾವು	30	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮೊಹರಂ ಆಚರಣೆಗೂ ಕಠಿಣ ಕಟ್ಟುಪಾಡು • ಮನೆ, ದೇವಸ್ಥಾನಕ್ಕೆ ಗಣೇಶ ಚತುರ್ಥಿ ಸೀಮಿತ

ಸಾರ್ವಜನಿಕ ಗಣೇಶೋತ್ಸವ ನಿಷೇಧ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಮೊಹರಂ, ಶ್ರೀಕೃಷ್ಣ ಜನ್ಮಾಷ್ಟಮಿ, ಗಣೇಶ ಚತುರ್ಥಿ, ದುರ್ಗಾಪೂಜೆ ಮೊದಲಾದ ಹಬ್ಬಗಳಲ್ಲಿ ಸಾರ್ವಜನಿಕರು ಒಗ್ಗೂಡುವುದು, ಸಾರ್ವಜನಿಕ ಸ್ಥಳಗಳಲ್ಲಿ ಆಚರಣೆ ಮಾಡುವುದನ್ನು ನಿಷೇಧಿಸಿರುವ ರಾಜ್ಯ ಸರ್ಕಾರ ಗುರುವಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

ಕೋವಿಡ್ ಮೂರನೇ ಅಲೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಠಿಣ ಕ್ರಮ ತೆಗೆದುಕೊಂಡಿದೆ. ಹಬ್ಬದ ಸಡಗರದಲ್ಲಿರುವ ಜನರು ಮೈಮರೆತು ಗುಂಪುಗೂಡುವುದರಿಂದ ಕೊರೊನಾ ಸೋಂಕು ಮತ್ತೊಮ್ಮೆ ತೀವ್ರವಾಗಿ ಹರಡುವ ಸಾಧ್ಯತೆ ಇದೆ. ಈ ಸೋಂಕಿನ ಸರಪಳಿ ಮುರಿಯಲು ಮುನ್ನೆಚ್ಚರಿಕೆ ಕ್ರಮವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಗಣೇಶ ಚತುರ್ಥಿಯನ್ನು ಸರಳವಾಗಿ ತಮ್ಮ ತಮ್ಮ ಮನೆಗಳಲ್ಲಿ ಆಚರಿಸಬೇಕು. ಇದನ್ನು ಹೊರತುಪಡಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಚಪ್ಪರ, ಪೆಂಡಾಲ್, ಶಾಮಿಯಾನ, ವೇದಿಕೆ ನಿರ್ಮಿಸಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವುದನ್ನು, ಮೆರವಣಿಗೆಯಲ್ಲಿ ಮೂರ್ತಿ ವಿಸರ್ಜಿಸುವುದನ್ನು ನಿರ್ಬಂಧಿಸಲಾಗಿದೆ.

ಅದೇ ರೀತಿ ಮೊಹರಂ ದಿನ ಸಾರ್ವಜನಿಕ ಸ್ಥಳಗಳಲ್ಲಿ ಆಲಂಗಳು/ಪಂಜಾವನ್ನು ಸ್ಥಾಪಿಸುವುದು ಮತ್ತು ತಾಜಿಯಾವನ್ನು ನಿರ್ಬಂಧಿಸಲಾಗಿದೆ. ಮೊಹರಂ ಪ್ರಾರ್ಥನಾ ಸಭೆ ಮತ್ತು ಮೆರವಣಿಗೆಯನ್ನು ನಿಷೇಧಿಸಲಾಗಿದೆ. ಮೊಹರಂ ಸಂಬಂಧಿತ ಆಚರಣೆಗಳಲ್ಲಿ ಭಾಗವಹಿಸುವವರು ಸಾಮಾಜಿಕ ಅಂತರದೊಂದಿಗೆ ಕನಿಷ್ಠ ಸಂಖ್ಯೆಯಲ್ಲಿ ಭಾಗವಹಿಸಬಹುದು ಎಂದು ಆದೇಶ ತಿಳಿಸಿದೆ.



ಪೂಜಾ ಮತ್ತು ಪ್ರಾರ್ಥನಾ ಸ್ಥಳಗಳನ್ನು ಕೋವಿಡ್ ಷರತ್ತಿಗೆ ಒಳಪಟ್ಟು ತೆರೆದು, ಧಾರ್ಮಿಕ ಕೈಂಕರ್ಯ ನಡೆಸಬೇಕು. ಆದರೆ ಜಾತ್ರೆಗಳು, ದೇವಾಲಯದ ಹಬ್ಬಗಳು, ಮೆರವಣಿಗೆ ಮತ್ತು ಸಭೆ ಸಮಾರಂಭಗಳನ್ನು ನಡೆಸುವಂತಿಲ್ಲ.

ಅಲ್ಲದೆ, ಸಾಮಾಜಿಕ, ರಾಜಕೀಯ, ಕ್ರೀಡಾ, ಮನೋರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ ನಡೆಸುವುದು, ಬೃಹತ್ ಸಭೆ ಸಮಾರಂಭಗಳನ್ನು ನಡೆಸುವುದನ್ನೂ ನಿಷೇಧಿಸಲಾಗಿದೆ.

ಮೂರನೇ ಅಲೆಯ ಭೀತಿ: ನೆರೆಯ ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ದೃಢ ಪ್ರಕರಣಗಳು ವರದಿಯಾಗುತ್ತಲೇ ಇವೆ. ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆಯ ಸಂಭಾವ್ಯ ಅಪಾಯವನ್ನು ತಡೆಗಟ್ಟಬೇಕಾದರೆ ಹಬ್ಬಗಳಲ್ಲಿ ಸಾರ್ವಜನಿಕರು ಒಟ್ಟುಗೂಡುವುದನ್ನು ತಡೆಯಬೇಕು ಎಂದು ತಾಂತ್ರಿಕ ಸಲಹಾ ಸಮಿತಿ ಸಲಹೆ ನೀಡಿದೆ.

ಇದನ್ನು ಆಧರಿಸಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಇದೇ 12ರಂದು ಮಾರ್ಗಸೂಚಿ ಹೊರಡಿಸಿದ್ದಾರೆ.

ಈಗಲೇ ಕಠಿಣ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ, ಎರಡನೇ ಅಲೆಯ ಸಂದರ್ಭದಲ್ಲಿ ಆದ ಅನಾಹುತಕ್ಕಿಂತಲೂ ಭೀಕರವಾಗಬಹುದು. ಸಾರ್ವಜನಿಕರೂ ಇದನ್ನು ಗಮನದಲ್ಲಿಟ್ಟುಕೊಂಡು ವಿವೇಕದಿಂದ ವರ್ತಿಸಬೇಕು ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊಹರಂ ನಿರ್ಬಂಧಗಳು

- ಪಂಜಾ, ಆಲಂ ಮತ್ತು ತಾಜಿಯತ್‌ಗಳನ್ನು ಸಾರ್ವಜನಿಕರು ಮುಟ್ಟದೇ ದೂರದಿಂದ ನೋಡಬೇಕು
- ಖಬರಸ್ಥಾನ ಸೇರಿ ಯಾವುದೇ ಖಾಲಿ ಜಾಗಗಳಲ್ಲಿ ಸಭೆ ಏರ್ಪಡಿಸುವುದು ನಿಷೇಧಿಸಲಾಗಿದೆ. ಕೇವಲ ದಫನ್ ಮಾಡುವವರಿಗೆ ಅವಕಾಶವಿದೆ. ಮೊಹರಂ ಸಂಬಂಧಿಸಿದ ಆಚರಣೆಗಳಿಗೆ ಅವಕಾಶ ಇರುವುದಿಲ್ಲ
- ಪ್ರಾರ್ಥನಾ ಸ್ಥಳಗಳಲ್ಲಿ ಮುಖಗವುಸು ಕಡ್ಡಾಯವಾಗಿ ಧರಿಸಬೇಕು
- 60 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮನೆಯಲ್ಲಿಯೇ ಪ್ರಾರ್ಥನೆ ಮಾಡಬೇಕು
- ಕೋವಿಡ್ ಮಾರ್ಗಸೂಚಿ ಪಾಲಿಸಿ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಬಹುದು. ಒಂದು ವೇಳೆ ಹೆಚ್ಚು ಜನ ಬಂದರೆ, ಎರಡು ಅಥವಾ ಹೆಚ್ಚಿನ ಪಾಳಿಗಳಲ್ಲಿ ಸಾಮೂಹಿಕ ಪ್ರಾರ್ಥನೆಗೆ ವ್ಯವಸ್ಥೆ ಮಾಡಬೇಕು
- ಸಭಾಂಗಣ, ಶಾದಿ ಮಹಲ್, ಸಮುದಾಯಭವನಗಳಲ್ಲಿ ಮೊಹರಂ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಇಲ್ಲ
- ಮಸೀದಿಗಳಲ್ಲಿ ಪ್ರಾರ್ಥನೆಗೆ ಬರುವವರು ತಮ್ಮ ಮನೆಗಳಿಂದ ಮುಸಲ್ಲಾವನ್ನು ತರಬೇಕು. ಹಸ್ತ ಲಾಘವ ಮತ್ತು ಆಲಿಂಗವನ್ನು ಮಾಡುವಂತಿಲ್ಲ

ಗಣೇಶ ಹಬ್ಬದ ನಿರ್ಬಂಧಗಳು

- ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಕೂಡದು
- ಗಣೇಶ ಮೂರ್ತಿಗಳನ್ನು ತರುವಾಗ, ವಿಸರ್ಜಿಸುವಾಗ ಯಾವುದೇ ರೀತಿಯ ಮೆರವಣಿಗೆ, ಮನೋರಂಜನಾ ಕಾರ್ಯಕ್ರಮ ಆಯೋಜಿಸುವಂತಿಲ್ಲ
- ಪಾರಂಪರಿಕ ಗೌರಿ–ಗಣೇಶ ಮೂರ್ತಿ ಪೂಜಿಸುವವರು ಅವುಗಳನ್ನು ಮನೆಯಲ್ಲೇ ವಿಸರ್ಜಿಸಬೇಕು. ಅಥವಾ ಅತಿ ಸಮೀಪ ಮಾರ್ಗಗಳನ್ನು ಬಳಸಿಕೊಂಡು ಬಿಬಿಎಂಪಿ,-ಪಾಲಿಕೆ, ಜಿಲ್ಲಾಡಳಿತ,ಸ್ಥಳೀಯ ಆಡಳಿತಗಳು ವ್ಯವಸ್ಥೆ ಮಾಡಿದ ಹೊಂಡ, ಕಲ್ಯಾಣಿ, ಮೊಬೈಲ್ ಟ್ಯಾಂಕರ್‌ಗಳಲ್ಲಿ ವಿಸರ್ಜಿಸಬಹುದು.
- ಗಣೇಶ ಚತುರ್ಥಿ ಆಚರಿಸುವ ದೇವಸ್ಥಾನಗಳಲ್ಲಿ ದಿನ ನಿತ್ಯ, ಸ್ಯಾನಿಟೈಸೇಷನ್ ಮಾಡಬೇಕು. ಸಾರ್ವಜನಿಕ ದರ್ಶನಕ್ಕೆ ಬರುವ ಭಕ್ತರಿಗೆ ಸ್ಯಾನಿಟೈಸ್ ಮತ್ತು ಥರ್ಮಲ್ ಸ್ಕ್ಯಾನಿಂಗ್ ಕಡ್ಡಾಯ

ಕೋವಿಡ್: ಸೋಂಕಿತರ ಸಂಖ್ಯೆ ಏರುಗತಿ 11

‘1–8 ನೇ ತರಗತಿ ಆರಂಭಕ್ಕೆ ಚಿಂತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 9 ರಿಂದ ದ್ವಿತೀಯ ಪಿಯುಸಿವರೆಗಿನ ತರಗತಿಗಳು ಇದೇ 23 ರಿಂದ ಆರಂಭವಾಗಲಿದೆ. ವಿದ್ಯಾರ್ಥಿಗಳು ಮತ್ತು ಪೋಷಕರ ಪ್ರತಿಕ್ರಿಯೆ ಆಧರಿಸಿ 1 ರಿಂದ 8 ನೇ ತರಗತಿಗಳನ್ನು ಸೆಪ್ಟೆಂಬರ್‌ನಿಂದ ಆರಂಭಿಸಲು ತೀರ್ಮಾನಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.



ಬಿ.ಸಿ.ನಾಗೇಶ್

1 ರಿಂದ 8 ನೇ ತರಗತಿ ಆರಂಭಿಸಬೇಕು ಎಂಬ ಒತ್ತಡ ಪೋಷಕರಿಂದ ಬರುತ್ತಿದೆ. ತರಗತಿಗಳನ್ನು ಶುರು ಮಾಡುವ ಆಲೋಚನೆ ಸರ್ಕಾರಕ್ಕೂ ಇದೆ. ಕೋವಿಡ್‌ನಿಂದ ಮಕ್ಕಳಿಗೆ ಹೆಚ್ಚಿನ ತೊಂದರೆ ಆಗುವುದಿಲ್ಲ ಎಂದು ಕೋವಿಡ್ ತಾಂತ್ರಿಕ ಸಮಿತಿ ಮತ್ತು ಮಕ್ಕಳ ತಜ್ಞರು ಹೇಳಿದ್ದಾರೆ. ಈ ಸಂಬಂಧ ಇದೇ 30 ರಂದು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ನಾಗೇಶ್ ಹೇಳಿದರು.

ಇದೇ 23 ರಿಂದ ಆರಂಭವಾಗುವ ಭೌತಿಕ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಸುರಕ್ಷತೆಗಾಗಿ ಶುಕ್ರವಾರ ವಿಸ್ತೃತ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ಬಿಡುಗಡೆ ಮಾಡಲಾಗುವುದು ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

ಪ್ರೌಢ ಮತ್ತು ಪದವಿ ಪೂರ್ವ ಭೌತಿಕ ತರಗತಿಗಳನ್ನು ಆರಂಭಿಸುವುದಕ್ಕೆ ಪೂರ್ವಭಾವಿಯಾಗಿ ಶುಕ್ರವಾರ ಶಿಕ್ಷಣ, ಗೃಹ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ರಾಹುಲ್ ಶತಕ ವೈಭವ



ಲಂಡನ್ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಗುರುವಾರ ಕನ್ನಡಿಗ ಕೆ.ಎಲ್. ರಾಹುಲ್ ಅವರು ಶತಕ ದಾಖಲಿಸಿದರು. 11



ವಿರೋಧಪಕ್ಷದ ಮುಖಂಡರು ಸಂಸತ್ ಭವನದಿಂದ ವಿಜಯ ಚೌಕದವರೆಗೆ ಗುರುವಾರ ಮೆರವಣಿಗೆ ನಡೆಸಿದರು–ಪಿಟಿಐ ಚಿತ್ರ

ಅಧಿವೇಶನ ಮುಗಿದರೂ ಮುಗಿಯದ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಗೂಢಚರ್ಯೆ ಪ್ರಕರಣದಿಂದಾಗಿ ಸಂಸತ್ ಅಧಿವೇಶನ ವ್ಯರ್ಥವಾಗಿದ್ದು ಒಂದೆಡೆಯಾದರೆ, ಕೊನೆಯ ಕ್ಷಣದಲ್ಲಿ ಮಸೂದೆಗಳ ಅಂಗೀಕಾರದ ವೇಳೆ ರಾಜ್ಯಸಭೆಯಲ್ಲಿ ನಡೆದ ಸಿನಿಮೀಯ ಘಟನೆಗಳು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿವೆ. ಪ್ರತಿಪಕ್ಷಗಳ ಮುಖಂಡರು ಸಂಸತ್ ಭವನದಿಂದ ಮೆರವಣಿಗೆ ನಡೆಸಿ ಸರ್ಕಾರದ ನಡೆ ಖಂಡಿಸಿದವು. ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಸಚಿವರ ತಂಡವು, ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿತು.

ಸಂಸತ್ ಅಧಿವೇಶನದಲ್ಲಿ ಅನುಚಿತ ಘಟನೆಗಳಿಗೆ ಕಾರಣವಾದ ಪ್ರತಿಪಕ್ಷ ಸದಸ್ಯರ ವಿರುದ್ಧ ರಾಜ್ಯಸಭೆಯ ಸಭಾಪತಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಸಚಿವರ ತಂಡ ಆಗ್ರಹಿಸಿದೆ. ಸರ್ಕಾರವು ಮಸೂದೆಗೆ ಅಂಗೀಕಾರ ಪಡೆಯುವ ಉದ್ದೇಶದಿಂದ ಅಧಿವೇಶನಕ್ಕೆ ಹೊರಗಿನಿಂದ ಜನರನ್ನು ಕರೆಸಿದ್ದು ಏಕೆ ಎಂದು ಪ್ರತಿಪಕ್ಷಗಳು ಪ್ರಶ್ನಿಸಿವೆ.

ಪ್ರತಿಪಕ್ಷಗಳ ಪರೇಡ್: ಮಸೂದೆ ಅಂಗೀಕಾರಕ್ಕಾಗಿ ಅತ್ಯಧಿಕ ಭದ್ರತಾ ಸಿಬ್ಬಂದಿಯನ್ನು ಸದನದಲ್ಲಿ ನಿಯೋಜಿಸುವ ಮೂಲಕ ಕೇಂದ್ರ ಸರ್ಕಾರವು ಸಮರಕಲೆ ಬಳಕೆ ಮಾಡಿಕೊಳ್ಳುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ವಿರೋಧಿ ಬಣವನ್ನು ಒಟ್ಟುಗೂಡಿಸಲು ಮುಂದಾಗಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು, ಇದೇ 20ರಂದು ವಿರೋಧ ಪಕ್ಷಗಳ ಆಡಳಿತವಿರುವ ಮುಖ್ಯಮಂತ್ರಿಗಳ ಸಭೆ ಕರೆದಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಮಟ್ಟದಲ್ಲಿ ಜಂಟಿ ಅಭಿಯಾನ ನಡೆಸುವ ತಂತ್ರಗಾರಿಕೆಯು ಸಭೆಯಲ್ಲಿ ಅಂತಿಮವಾಗಲಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸಂಸತ್ ಕಚೇರಿಯಲ್ಲಿ ಗುರುವಾರ ಸಭೆ ನಡೆಯಿತು. ನಂತರ, ರಾಹುಲ್ ಗಾಂಧಿ ಸೇರಿದಂತೆ 11 ಪಕ್ಷಗಳ ನಾಯಕರು ಸಂಸತ್ತಿನಿಂದ ವಿಜಯ ಚೌಕಕ್ಕೆ ಮೆರವಣಿಗೆಯಲ್ಲಿ ಸಾಗಿ, ಜಂಟಿ ಹೇಳಿಕೆ ನೀಡಿದರು.

> **ಸದನದಲ್ಲಿ ಸಂಸದರ ಅಮಾನತು. ಹೊರಗಡೆ ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರ ಬಂಧನ. ಚರ್ಚೆ ಎಂದರೆ ಮೋದಿ ಅವರಿಗೆ ಅಷ್ಟು ಭಯವೇ**
> **ಮಲ್ಲಿಕಾರ್ಜುನ ಖರ್ಗೆ**
> ರಾಜ್ಯಸಭೆಯಲ್ಲಿ ಕಾಂಗ್ರೆಸ್ ನಾಯಕ

> **ನಾವು ಪಾಕಿಸ್ತಾನದ ಗಡಿಯಲ್ಲಿ ನಿಂತಿದ್ದೇವೆ ಎಂದು ನನಗೆ ಅನಿಸಿತು. ಮಾರ್ಷಲ್‌ಗಳನ್ನು ಕರೆಸಿದ್ದಲ್ಲ, ಸಮರ ಕಾನೂನನ್ನೇ ಸದನಕ್ಕೆ ತರಲಾಯಿತು**
> **ಸಂಜಯ್ ರಾವುತ್,** ಶಿವಸೇನಾ ಸಂಸದ

11ನೇ ಪುಟ ನೋಡಿ

ನಗರದಲ್ಲಿ ಇಂದು

‘ಎ ಸೆನ್ಸ್ ಆಫ್ ದಿ ಲ್ಯಾಂಡ್’- ಕಲಾವಿದ ಗಣೇಶ್ ದೊಡ್ಡಮನಿ ಅವರ ಚಿತ್ರಕಲಾಕೃತಿಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ-ಎಂಕೆಎಫ್ ಮ್ಯೂಸಿಯಂ ಆಫ್ ಆರ್ಟ್, ಲ್ಯಾವೆಲ್ಲೆ ರಸ್ತೆ, ಬೆಳಿಗ್ಗೆ 11ರಿಂದ ಸಂಜೆ 6.30 (ಆ.29ರವರೆಗೆ ಪ್ರದರ್ಶನ ಇರಲಿದೆ)

ಸ್ವಾತಂತ್ರ್ಯ ದಿನದ ಅಂಗವಾಗಿ ಸಚಿವಾಲಯ ಕ್ಲಬ್ ಗಾಯಕರಿಂದ ದೇಶಭಕ್ತಿ ಗೀತೆಗಳ ಸಮೂಹ ಗಾಯನ: ಅತಿಥಿಗಳು-ಯು.ಡಿ. ನರಸಿಂಹಯ್ಯ, ಪಿ.ಎನ್.ಕೃಷ್ಣಮೂರ್ತಿ, ಎಚ್.ಹನುಮೇಗೌಡ, ಆಯೋಜನೆ ಮತ್ತು ಸ್ಥಳ-ಚನ್ನಬಸಪ್ಪ ಸಭಾಂಗಣ, ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.35

ಶಿಕ್ಷಣ ಸಂವಾದ: ಅತಿಥಿಗಳು-ದೆಹಲಿ ಶಾಸಕಿ ಅತಿಶಿ ಮರ್ಲೆನಾ, ಪೃಥ್ವಿ ರೆಡ್ಡಿ, ಕೆ.ಆರ್.ರಮೇಶ್ ಕುಮಾರ್, ಎಚ್.ಡಿ.ಬಸವರಾಜು, ಆಯೋಜನೆ-ಆಮ್ ಆದ್ಮಿ ಪಕ್ಷ, ಸ್ಥಳ-ರೋಟರಿ ಹಾಲ್, ಲ್ಯಾವೆಲ್ಲೆ ರಸ್ತೆ, ಸಂಜೆ 6

ರಕ್ಷಾ ರಾಮಯ್ಯ ಅಧಿಕಾರ ಸ್ವೀಕಾರ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಎಂ.ಎಸ್. ರಕ್ಷಾ ರಾಮಯ್ಯ ಅವರು ಶುಕ್ರವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಪದಗ್ರಹಣ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರು, ಎಐಸಿಸಿ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಆಯ್ಕೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ರಕ್ಷಾ ರಾಮಯ್ಯ ಮತ್ತು ಮೊಹ್ಮದ್ ನಲಪಾಡ್ ಮಧ್ಯೆ ತೀವ್ರ ಪೈಪೋಟಿ ನಡೆದಿತ್ತು. ಚುನಾವಣೆಯಲ್ಲಿ ನಲಪಾಡ್ ಹೆಚ್ಚು ಮತಗಳನ್ನು ಗಳಿಸಿದ್ದರೂ, ಅವರ ಮೇಲೆ ಹಲವು ಅಪರಾಧ ಪ್ರಕರಣಗಳಿರುವುದರಿಂದ ರಕ್ಷಾ ಅವರನ್ನು ಅಧ್ಯಕ್ಷರಾಗಿ ಘೋಷಿಸಲಾಗಿತ್ತು. ಈ ಮಧ್ಯೆ, ಮತ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಪಕ್ಷದ ಹಿರಿಯ ನಾಯಕರಿಗೆ ರಕ್ಷಾ ದೂರು ನೀಡಿದ್ದರು. ಇತ್ತೀಚೆಗೆ ನಡೆದ ‘ಸಂಧಾನ’ದಂತೆ ಮುಂದಿನ ಫೆಬ್ರುವರಿಯವರೆಗೆ ಅಧ್ಯಕ್ಷರಾಗಿ ರಕ್ಷಾ ರಾಮಯ್ಯ ಮುಂದುವರಿಯಲಿದ್ದು, ಬಳಿಕ ಸ್ಥಾನವನ್ನು ನಲಪಾಡ್ ಅವರಿಗೆ ಬಿಟ್ಟು ಕೊಡಬೇಕಿದೆ.

ಬನ್ನೇರುಘಟ್ಟ: ವಿನೂತನವಾಗಿ ವಿಶ್ವ ಆನೆ ದಿನಾಚರಣೆ

ಆನೇಕಲ್: ವಿಶ್ವ ಆನೆ ದಿನಾಚರಣೆ ಅಂಗವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಆನೆಗಳಿಗೆ ಆಹಾರ ಪುಷ್ಟೀಕರಣ ಮತ್ತು ಶ್ರಮದಾನದ ಮೂಲಕ ವಿನೂತನವಾಗಿ ಆಚರಿಸಲಾಯಿತು.

ಜೈವಿಕ ಉದ್ಯಾನದಲ್ಲಿ ಆನೆ ಮರಿಗಳ ನೈಸರ್ಗಿಕ ನಡುವಳಿಕೆ ಉತ್ತೇಜಿಸುವ ಸಲುವಾಗಿ ವಿವಿಧ ಆಹಾರ ಪುಷ್ಟೀಕರಣವನ್ನು ಮರಿಗಳಿಗೆ ನೀಡುವ ಮೂಲಕ ಸ್ವತಂತ್ರ್ಯವಾಗಿ ವಿಹರಿಸಲು ಅವಕಾಶ ಕಲ್ಪಿಸಲಾಗಿತ್ತು.


ಮೃದು ಪೈಪ್‌ನ ಒಳಗಡೆ ಹುಲ್ಲು, ಕ್ಯಾರೆಟ್, ಗೆಣಸು, ಬಾಳೆಹಣ್ಣು, ಕಲ್ಲಂಗಡಿ, ಕಬ್ಬು ಮತ್ತು ಬೆಲ್ಲ ತುಂಬಿಸಿ ಎತ್ತರದಲ್ಲಿ ಮರಕ್ಕೆ ಕಟ್ಟಲಾಗಿತ್ತು. ಆನೆ ಮರಿಗಳು ತನ್ನ ಸೊಂಡಿಲಿನಿಂದ ಈ ಆಹಾರ ತೆಗೆದುಕೊಳ್ಳಲು ಪ್ರೋತ್ಸಾಹಿಸಲಾಯಿತು. ಆನೆಗಳು ಸಂಭ್ರಮಿಸಲು ವಿವಿಧ ಚಟುವಟಿಕೆಗಳನ್ನು ಉದ್ಯಾನದಲ್ಲಿ ರೂಪಿಸಲಾಗಿತ್ತು.

10 ವರ್ಷದೊಳಗಿನ ಮಕ್ಕಳಲ್ಲಿ ಸೋಂಕು ಪತ್ತೆ ದರ ಹೆಚ್ಚಳವಾಗಿಲ್ಲ: ಬಿಬಿಎಂಪಿ ಸ್ಪಷ್ಟನೆ

10 ದಿನಗಳಲ್ಲಿ 196 ಮಕ್ಕಳಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹತ್ತೇ ದಿನಗಳಲ್ಲಿ 10 ವರ್ಷದೊಳಗಿನ 196 ಮಕ್ಕಳಿಗೆ ಕೋವಿಡ್ ಸೋಂಕು ತಗುಲಿದೆ. ಈ ಹತ್ತು ದಿನಗಳಲ್ಲಿ ದೃಢಪಟ್ಟ ಒಟ್ಟು ಕೋವಿಡ್ ಪ್ರಕರಣಗಳಿಗೆ ಹೋಲಿಸಿದರೆ ಇದು ಹೆಚ್ಚೇನಲ್ಲ ಎನ್ನುತ್ತಾರೆ ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳು.



‘ಹತ್ತು ದಿನಗಳಲ್ಲಿ ನಗರದಲ್ಲಿ ಒಟ್ಟು 3,757 ಮಂದಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಅದರಲ್ಲಿ 10 ವರ್ಷದೊಳಗಿನ 196 ಮಕ್ಕಳೂ ಇದ್ದಾರೆ. ಸೋಂಕು ದೃಢಪಟ್ಟ ಒಟ್ಟು ಪ್ರಕರಣಗಳಿಗೆ ಹೋಲಿಸಿದರೆ 10 ವರ್ಷದೊಳಗಿನ ಸೋಂಕಿತ ಮಕ್ಕಳ ಪ್ರಮಾಣ ಶೇ 5.22 ರಷ್ಟಿದೆ. ಕೋವಿಡ್ ಮೊದಲ ಅಲೆಯಲ್ಲಿ ಹಾಗೂ ಎರಡನೇ ಅಲೆಯ ಆರಂಭದಲ್ಲಿ ಮಕ್ಕಳಲ್ಲಿ ಸೋಂಕು ಪತ್ತೆ ಪ್ರಮಾಣ ಇಷ್ಟೇ ಇತ್ತು. ಇದು ಗಾಬರಿಪಡುವ ವಿಷಯ ಅಲ್ಲ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.



ಮಕ್ಕಳಲ್ಲಿ ಸೋಂಕು ಪತ್ತೆ ದರ ಕಳೆದ ವರ್ಷಕ್ಕಿಂತ ಹೆಚ್ಚಳವಾಗಿಲ್ಲ. ಆದರೂ ಈ ಕುರಿತು ನಿಗಾ ಇಟ್ಟಿದ್ದೇವೆ. ಮಕ್ಕಳ ಆರೈಕೆಗೂ ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ

ಗೌರವ್ ಗುಪ್ತ, ಬಿಬಿಎಂಪಿ ಮುಖ್ಯ ಆಯುಕ್ತ

‘ಸದ್ಯಕ್ಕಂತೂ ಮಕ್ಕಳಲ್ಲಿ ಸೋಂಕು ಪತ್ತೆ ದರ ಹೆಚ್ಚಾಗಿಲ್ಲ. ಒಂದು ವೇಳೆ ಹೆಚ್ಚಾದರೂ ಅವರಿಗೆ ಚಿಕಿತ್ಸೆ ಒದಗಿಸಲು ಅಗತ್ಯ ಸೌಕರ್ಯವನ್ನು ಸಿದ್ಧವಾಗಿಟ್ಟುಕೊಂಡಿದ್ದೇವೆ’ ಎಂದರು.

ಮಕ್ಕಳ ಚಿಕಿತ್ಸೆಗಾಗಿ ಬಿಬಿಎಂಪಿಯು ಪದ್ಮನಾಭನಗರದಲ್ಲಿ ಪ್ರತ್ಯೇಕ ಆಸ್ಪತ್ರೆಯನ್ನು ಸಜ್ಜುಗೊಳಿಸಿದೆ. ಇದಲ್ಲದೇ ಇನ್ನೂ ನಾಲ್ಕು ಆಸ್ಪತ್ರೆಗಳಲ್ಲಿ ಮಕ್ಕಳ ಆರೈಕೆಗೆ ವಿಶೇಷ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ನಡೆದಿದೆ.

‘ಸೋಂಕಿಗೆ ಒಳಗಾದ ಮಕ್ಕಳಲ್ಲಿ ಬಹುತೇಕರು ಕೋವಿಡ್‌ನ ಸೌಮ್ಯ ಲಕ್ಷಣಗಳನ್ನು ಮಾತ್ರ ಹೊಂದಿದ್ದರು. ಹೆಚ್ಚಿನ ಪ್ರಕರಣಗಳಲ್ಲಿ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸುವ ಪ್ರಮೇಯ ಎದುರಾಗಿಲ್ಲ’ ಎಂದು ಬಿಬಿಎಂಪಿ ಆರೋಗ್ಯ ಅಧಿಕಾರಿಗಳು ಮಾಹಿತಿ ನೀಡಿದರು.

ಹತ್ತು ದಿನಗಳಲ್ಲಿ 10ರಿಂದ 19 ವರ್ಷದೊಳಗಿನ 301 ಮಂದಿ ಕೋವಿಡ್ ಸೋಂಕಿಗೆ ಒಳಗಾಗಿದ್ದಾರೆ.

‘ಪೋಷಕರು ಎಚ್ಚರ ವಹಿಸಿದರೆ ಮಕ್ಕಳು ಸುರಕ್ಷಿತ’

‘ದೊಡ್ಡವರ ಮೂಲಕವೇ ಮಕ್ಕಳಿಗೆ ಕೊರೊನಾ ಸೋಂಕು ಹರಡುತ್ತದೆ. ಪೋಷಕರು ಮನೆಯಿಂದ ಹೊರಗಡೆ ಹೋಗುವಾಗ ಸುರಕ್ಷತಾ ಕ್ರಮಗಳನ್ನು ಸರಿಯಾಗಿ ಅನುಸರಿಸಿದರೆ ಮಕ್ಕಳಿಗೂ ಕೋವಿಡ್‌ನಿಂದ ರಕ್ಷಣೆ ಸಿಗುತ್ತದೆ. ಈ ವಿಚಾರದಲ್ಲಿ ಪೋಷಕರ ಜವಾಬ್ದಾರಿ ಹೆಚ್ಚು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಭಿಪ್ರಾಯಪಟ್ಟರು.

‘ಮಕ್ಕಳಿಗಾಗಲೀ, ಬೇರೆಯವರಿಗಾಗಲೀ ವ್ಯಕ್ತಿಗಳಿಂದಲೇ ಸೋಂಕು ಹರಡುತ್ತದೆ. ಹೆಚ್ಚು ಜನ ಲಸಿಕೆ ಪಡೆದಷ್ಟೂ ಮಕ್ಕಳಿಗೆ ಸೋಂಕು ಹರಡುವ ಅಪಾಯ ಕಡಿಮೆ’ ಎಂದರು.

‘ನಗರದಲ್ಲಿ ಎಲ್ಲ ಸಮುದಾಯಗಳಲ್ಲಿ ಕೋವಿಡ್ ಪ್ರಮಾಣ ಕಡಿಮೆಗೊಳಿಸುವುದು ನಮ್ಮ ಉದ್ದೇಶ. ಅದಕ್ಕೆ ಶ್ರಮ ಹಾಕುತ್ತಿದ್ದೇವೆ. ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಪತ್ತೆಯಾದ ಕಡೆ ಕಂಟೈನ್‌ಮೆಂಟ್ ಪ್ರದೇಶಗಳನ್ನು ಗುರುತಿಸುತ್ತಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಕ್ಕಳಲ್ಲಿ ಕೋವಿಡ್ ಪತ್ತೆ ಪ್ರಮಾಣ (ಆ. 3ರಿಂದ ಆ. 12ರವರೆಗೆ)

ದಿನಾಂಕ	0-9 ವರ್ಷದವರು	10-19 ವರ್ಷದವರು	ಒಟ್ಟು ಸೋಂಕಿತರು
ಆ.12	16	25	321
ಆ.11	16	22	377
ಆ.10	18	27	315
ಆ.09	18	24	296
ಆ.08	13	25	348
ಆ.07	25	25	357
ಆ.06	32	35	441
ಆ.05	21	38	414
ಆ.04	20	41	411
ಆ.03	17	39	477

‘ಶೈಕ್ಷಣಿಕ ಪರಿಧಿಯಿಂದ ಹೊರಗಿರುವ ಮಕ್ಕಳು, ಯುವಜನರು 15 ಕೋಟಿ’

ನವದೆಹಲಿ (ಪಿಟಿಐ): ದೇಶದಲ್ಲಿ ಸುಮಾರು 15 ಕೋಟಿ ಮಕ್ಕಳು ಮತ್ತು ಯುವಜನರು ಸಾಂಪ್ರದಾಯಿಕ ಶೈಕ್ಷಣಿಕ ವ್ಯವಸ್ಥೆಯಿಂದ ಹೊರಗಿದ್ದಾರೆ. ಅಲ್ಲದೆ, 25 ಕೋಟಿಯಷ್ಟು ಜನರು ಸಾಕ್ಷರತೆಯ ಪ್ರಾಥಮಿಕ ವ್ಯಾಖ್ಯಾನದಿಂದ ಕೆಳಗಿದ್ದಾರೆ.

‘ಉದ್ಯೋಗ ಸೃಷ್ಟಿ ಮತ್ತು ಉದ್ಯಮಶೀಲತೆ’ ವಿಷಯ ಕುರಿತು ಭಾರತೀಯ ಕೈಗಾರಿಕೆ ಸಂಸ್ಥೆಗಳ ಒಕ್ಕೂಟ (ಸಿಐಐ) ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ವಿಷಯ ತಿಳಿಸಿದರು.

ಸರ್ಕಾರಿ, ಖಾಸಗಿ ಶಿಕ್ಷಣ ಸಂಸ್ಥೆಗಳು, ಅಂಗನವಾಡಿಗಳು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನೋಂದಣಿಯಾಗಿರುವ 3–22 ವರ್ಷದೊಳಗಿನ ಮಕ್ಕಳ ಸಂಖ್ಯೆ ಸುಮಾರು 35 ಕೋಟಿ. ದೇಶದಲ್ಲಿ ಈ ವಯಸ್ಸಿನವರ ಜನಸಂಖ್ಯೆ ಸುಮಾರು 50 ಕೋಟಿ. ಅಂದರೆ, ಸುಮಾರು 15 ಕೋಟಿಯಷ್ಟು ಮಂದಿ ಶಿಕ್ಷಣ ವ್ಯವಸ್ಥೆಯಿಂದ ಹೊರಗುಳಿದಿದೆ ಎಂದು ಪ್ರಧಾನ್ ವಿವರಿಸಿದರು.

ಸ್ವಾತಂತ್ರ್ಯಾನಂತರದ ಜನಸಂಖ್ಯೆ ಆಧಾರದಲ್ಲಿ ಆಗಿನ ಸಾಕ್ಷರತೆ ಪ್ರಮಾಣ ಶೇ 19. ಈಗ ಸ್ವಾತಂತ್ರ್ಯದ 75ನೇ ವರ್ಷ. ಸಾಕ್ಷರತೆ ಪ್ರಮಾಣ ಶೇ 80ಕ್ಕೆ ಏರಿದೆ. ಅದರರ್ಥ ಸುಮಾರು ಶೇ 20ರಷ್ಟು ಅಂದರೆ ಅಂದಾಜು 25 ಕೋಟಿ ಜನರು ಸಾಕ್ಷರತೆಯ ಪ್ರಾಥಮಿಕ ವ್ಯಾಖ್ಯಾನದಿಂದ ಇನ್ನೂ ಹೊರಗೇ ಇದ್ದಾರೆ ಎಂದು ಸಚಿವರು ವ್ಯಾಖ್ಯಾನಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನ್ನು ವಿವರಿಸಿದ ಅವರು, ಇದು ಕೇವಲ ಒಂದು ದಾಖಲೆಯಷ್ಟೇ ಅಲ್ಲ. ಮುಂದಿನ 25ವರ್ಷಗಳಲ್ಲಿ ಸಾಧಿಸಲು ಬೇಕಾದ ಪ್ರಗತಿಪಥ. ದೇಶದ ಸ್ವಾತಂತ್ರ್ಯೋತ್ಸವದ 100ನೇ ವರ್ಷದ ವೇಳೆಗೆ ಸಾಧಿಸಬೇಕಾದ ಕೆಲವೊಂದು ಗುರಿಯನ್ನು ಈ ನೀತಿ ಹೊಂದಿದೆ ಎಂದು ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

- 12,31,795 ▲ ಒಟ್ಟು ಪ್ರಕರಣಗಳು (12,31,474 ನಿನ್ನೆಯ ವಿವರ)
- 8,193 ▼ ಸಕ್ರಿಯ ಪ್ರಕರಣಗಳು
- 12,07,673 ▲ ಗುಣಮುಖರಾದವರು
- 15,928 ▲ ಒಟ್ಟು ಸಾವು

ಗುರುವಾರದ ಏರಿಕೆ

ಹೊಸ ಪ್ರಕರಣ	321	▼
ಗುಣಮುಖ	413	▲
ಸಾವು	05	

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿರುವ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಗುರುವಾರ ಭೇಟಿಯಾದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್‌.ಈಶ್ವರಪ್ಪ ಅವರು ಶ್ರೀಗಳಿಗೆ ಗೌರವ ಸಲ್ಲಿಸಿದರು

ಕೋವ್ಯಾಕ್ಸಿನ್‌ಗೆ ರಿಯಾಯಿತಿ ಘೋಷಣೆ

ಬೆಂಗಳೂರು: ಜಯನಗರದ ಯುನೈಟೆಡ್ ಆಸ್ಪತ್ರೆಯು ಕೋವ್ಯಾಕ್ಸಿನ್ ಲಸಿಕೆಯ ಪ್ರತಿ ಡೋಸ್‌ಗೆ ₹ 210 ರಿಯಾಯಿತಿ ಘೋಷಿಸಿದೆ.

ಆಸ್ಪತ್ರೆಯು ₹ 1,410ಕ್ಕೆ ನೀಡುತ್ತಿದ್ದ ಒಂದು ಡೋಸ್ ಲಸಿಕೆಯ ದರವನ್ನು ₹ 1,200ಕ್ಕೆ ಇಳಿಕೆ ಮಾಡಿ, ವಿತರಿಸಲಾರಂಭಿಸಿದೆ. ಲಸಿಕೆಯ ದಾಸ್ತಾನು ಇರುವವರೆಗೂ ಈ ಕೊಡುಗೆ ನೀಡುವುದಾಗಿ ಆಸ್ಪತ್ರೆ ತಿಳಿಸಿದೆ.

‘ನಾವು ಎರಡು ತಿಂಗಳ ಹಿಂದೆ ಕೋವ್ಯಾಕ್ಸಿ'ನ್ ಹಾಗೂ ಇತರೆ ಲಸಿಕೆಗಳಿಗೆ ಮುಂಗಡವಾಗಿ ಹಣವನ್ನು ನೀಡಿ, ತಯಾರಿಕಾ ಕಂಪನಿಯಿಂದ ಖರೀದಿಸಿದ್ದೆವು. ಇತ್ತೀಚಿಗೆ ಆಸ್ಪತ್ರೆಗೆ 20 ಸಾವಿರ ಡೋಸ್ ಕೋವ್ಯಾಕ್ಸಿನ್ ಲಸಿಕೆ ಸರಬರಾಜಾಗಿದೆ. ಇದರಲ್ಲಿ 15 ಸಾವಿರ ಡೋಸ್‌ಗಳನ್ನು ನಮ್ಮ ಸಹಯೋಗಿ 20 ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳ ಮೂಲಕ ನಗರದಲ್ಲಿ ವಿತರಿಸಲಾಗುತ್ತದೆ’ ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ವಿಕ್ರಮ್ ಸಿದ್ದಾರೆಡ್ಡಿ ಹೇಳಿದ್ದಾರೆ.

‘ಕಡಿಮೆ ಸಮಯದಲ್ಲಿ ಹೆಚ್ಚು ಜನರಿಗೆ ಲಸಿಕೆ ದೊರೆಯಬೇಕೆಂಬ ಉದ್ದೇಶದಿಂದ ಈ ಕೊಡುಗೆ ನೀಡಿದ್ದೇವೆ. ನಗರದಲ್ಲಿ ಕೋವ್ಯಾಕ್ಸಿನ್ ಲಸಿಕೆಯ ಕೊರತೆ ಹೆಚ್ಚಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಸರು ನೋಂದಾಯಿಸಲು ವಾಟ್ಸ್‌ಆ್ಯಪ್ ಸಂ: 99169 77777

ಸಂಕ್ಷಿಪ್ತ ಸುದ್ದಿ

ಇಂದಿನಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಆ.13, 14 ಮತ್ತು 17ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಇದೇ 13ರಂದು ಮಾಯಸಂದ್ರ, ಇಚ್ಚಂಗೂರು, ಅತ್ತಿಬೆಲೆ, ನೆರಳೂರು, ಯಡವನಹಳ್ಳಿ, ನೆರಳೂರು, 14ರಂದು ರಾಮಯ್ಯ ಬಡಾವಣೆ, ಮಂಜುನಾಥನಗರ, ಹೆಸರಘಟ್ಟ ಮುಖ್ಯರಸ್ತೆ, ಹರಿಕುಮಾರ ಬಡಾವಣೆ, ವಿನಾಯಕ ನಗರ, ವಿಕಾಸ ನಗರ, ಚಿಕ್ಕಸಂದ್ರ, ಶೆಟ್ಟಿಹಳ್ಳಿ, ಮಲ್ಲಸಂದ್ರ, ಭುವನೇಶ್ವರಿ ನಗರ, ಮಹೇಶ್ವರಿ ನಗರ, ಕಲ್ಯಾಣ ನಗರ, ತುಮಕೂರು ಮುಖ್ಯರಸ್ತೆ, ಕೆಂಪೇಗೌಡ ನಗರ, ಬಾಗಲಗುಂಟೆ ಗ್ರಾಮ, ಸಿದ್ದೇಶ್ವರ ಬಡಾವಣೆ, ವೈಟ್‌ಫೀಲ್ಡ್, ಹೂಡಿ ಬಡಾವಣೆ, ನಲ್ಲೂರಹಳ್ಳಿ, ಕುಂದನಹಳ್ಳಿ ಕಾಲೊನಿ, 17ರಂದು ಕಾಚನಾಯಕನಹಳ್ಳಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಶ್ರೀರಾಂಪುರ ಹಾಗೂ ಸುತ್ತಮುತ್ತಲ ಪ್ರದೇಶಗಳು.

‘ಎನ್‌ಇಪಿ– ಶಿಕ್ಷಣ ಮಾರಾಟದ ನೀಲನಕ್ಷೆ’

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಬಡ ವಿದ್ಯಾರ್ಥಿಗಳ ವಿರೋಧಿ ಹಾಗೂ ಕಾರ್ಪೊರೇಟ್‌ಗಳ ಪರವಾಗಿದ್ದು, ಶಿಕ್ಷಣವನ್ನು ಮಾರಾಟ ಮಾಡುವ ನೀಲನಕ್ಷೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಖಂಡಿಸಿದೆ.

‘ಶಿಕ್ಷಣ ನೀತಿಯ ಪ್ರಕಾರ ಪದವಿ ಕೋರ್ಸ್‌ಗಳಲ್ಲಿ ಮೂರು ವಿಷಯಗಳ ಬದಲಿಗೆ ಒಂದು ಅಥವಾ ಎರಡೇ ವಿಷಯಕ್ಕೆ ಸೀಮಿತಗೊಳಿಸಲಾಗಿದೆ. ಇದರಿಂದ ಉಪನ್ಯಾಸಕರು ಮತ್ತು ಅತಿಥಿ ಉಪನ್ಯಾಸಕರು ದೊಡ್ಡ ಪ್ರಮಾಣದಲ್ಲಿ ಕೆಲಸ ಕಳೆದುಕೊಳ್ಳಲಿದ್ದಾರೆ’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಕಳವಳ ವ್ಯಕ್ತಪಡಿಸಿದರು.

‘ಆನ್‌ಲೈನ್ ಶಿಕ್ಷಣಕ್ಕೆ ಹಸಿರು ನಿಶಾನೆ ತೋರುವ ಈ ನೀತಿಯ ವಿರುದ್ಧ ಶಿಕ್ಷಣ ಪ್ರಿಯರು ಹೋರಾಡಬೇಕು’ ಎಂದರು.

ಇಂದು 'ಕೆಂಡದ ಕುಸುಮಗಳು' ನಾಟಕ ಪ್ರದರ್ಶನ

ಯಲಹಂಕ: ಅಸ್ತಿತ್ವಂ ಥಿಯೇಟರ್ ಫೌಂಡೇಷನ್ ಆಶ್ರಯದಲ್ಲಿ ಆಗಸ್ಟ್ 13 ಮತ್ತು 14 ರಂದು ಉಪನಗರದ ಅಂಬೇಡ್ಕರ್ ಭವನದಲ್ಲಿ 'ಕೆಂಡದ ಕುಸುಮಗಳು' ಮತ್ತು 'ಕೈ-ಕಸಿ ಕಥನ' ಎಂಬ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಹಿರಿಯ ರಂಗನಿರ್ದೇಶಕ ಡಾ.ಎಸ್.ಎಲ್.ಎನ್.ಸ್ವಾಮಿ, ಈ ನಾಟಕಗಳನ್ನು ನಿರ್ದೇಶಿಸಿದ್ದು, ಮಹಿಳೆಯ ಮೇಲಿನ ಶೋಷಣೆಗೆ ಆಕೆಯ ಗರ್ಭವೇ ಮೂಲಕಾರಣ ಎನ್ನುವ ಆಲೋಚನೆಯೇ 'ಕೆಂಡದ ಕುಸುಮಗಳು' ನಾಟಕದ ಮೂಲ ಎಳೆಯಾಗಿದೆ. ಶುಕ್ರವಾರ ಮಧ್ಯಾಹ್ನ 3 ಗಂಟೆಗೆ 'ಕೆಂಡದ ಕುಸುಮಗಳು' ಶನಿವಾರ ಮಧ್ಯಾಹ್ನ 3 ಗಂಟೆಗೆ 'ಕೈ-ಕಸಿ ನಾಟಕ' ಪ್ರದರ್ಶನಗೊಳ್ಳಲಿದೆ.

ಹೈಕೋರ್ಟ್ ಸೂಚನೆ: ಪೊಲೀಸ್ ಅಧಿಕಾರಿಗಳಿಗೆ ನಿರ್ಬಂಧ ವಿಧಿಸಿದ ಸರ್ಕಾರ

ಮಾಧ್ಯಮಕ್ಕೆ ಮಾಹಿತಿ ಕೊಟ್ಟರೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನಿಖಾ ಹಂತದಲ್ಲಿರುವ ಪ್ರಕರಣಗಳ ಕುರಿತು ಮಾಧ್ಯಮದವರಿಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡಕೂಡದು ಎಂದು ಪೊಲೀಸ್ ಅಧಿಕಾರಿಗಳಿಗೆ ಕಟ್ಟಪ್ಪಣೆ ವಿಧಿಸಿರುವ ರಾಜ್ಯ ಸರ್ಕಾರ, ಸೋರಿಕೆ ಮಾಡಿದರೆ ಶಿಸ್ತುಕ್ರಮ ಜರುಗಿಸುವುದಾಗಿಯೂ ಎಚ್ಚರಿಸಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಗೃಹ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್, ತನಿಖೆ ಪೂರ್ಣಗೊಳ್ಳುವವವರೆಗೆ ಆರೋಪಿಗಳ ಭಾವಚಿತ್ರ, ವೈಯಕ್ತಿಕ ಮಾಹಿತಿ ಸೇರಿದಂತೆ ಯಾವುದೇ ಮಾಹಿತಿಯನ್ನು ಸೋರಿಕೆ ಮಾಡಬಾರದು. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಅಂಥ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಅಪರಾಧ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸುವ ಪೊಲೀಸರು, ತನಿಖೆಗೆ ಪೂರ್ಣಗೊಳಿಸಿ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸುವ ಮೊದಲೇ ಆರೋಪಿಗಳ ಭಾವಚಿತ್ರ, ವಿಡಿಯೊ ಹಾಗೂ ಸಂಪೂರ್ಣ ಮಾಹಿತಿಯನ್ನು ಬಹಿರಂಗಪಡಿಸುವ ಬಗ್ಗೆ ವ್ಯಕ್ತಿಯೊಬ್ಬರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಈ ಬಗ್ಗೆ ಮಾರ್ಗಸೂಚಿ ಹೊರಡಿಸುವಂತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿತ್ತು.

ಸುತ್ತೋಲೆಯಲ್ಲಿ ಏನಿದೆ ?

- ತನಿಖೆ ಪ್ರಗತಿಯಲ್ಲಿರುವಾಗ ಆರೋಪಿಗಳ ವೈಯಕ್ತಿಕ ವಿಷಯ, ಪಾತ್ರದ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ಸೋರಿಕೆ ಮಾಡಬಾರದು.
- ಪ್ರಕರಣ ದಾಖಲಿಸಿಕೊಂಡ ನಂತರ ತನಿಖೆ ಮುಗಿದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವವರೆಗೆ ದೂರುದಾರರ ಬಗ್ಗೆ, ಆರೋಪಿಗಳ ಬಗ್ಗೆ ಮಾಹಿತಿ ನೀಡುವಂತಿಲ್ಲ.
- ಮಾಧ್ಯಮಗಳಿಗೆ ಮಾಹಿತಿ ಹಂಚಿಕೆ ಅಥವಾ ಸೋರಿಕೆ ವಿಷಯದಲ್ಲಿ ತನಿಖಾಧಿಕಾರಿಗಳಿಂದ ಲೋಪದೋಷ ಎಸಗುವುದು, ಮಾಹಿತಿ ನೀಡುವುದು ಕಂಡುಬಂದರೆ ಶಿಸ್ತು ಕ್ರಮದ ಜೊತೆಗೆ ಕ್ರಿಮಿನಲ್ ಮೊಕದ್ದಮೆಗೆ ಶಿಫಾರಸು ಮಾಡಲಾಗುವುದು.
- ಸುಪ್ರೀಂ ಕೋರ್ಟ್ ನಿರ್ದೇಶನದಂತೆ, ಪ್ರಕರಣ ಕುರಿತು ಎಫ್‌ಐಆರ್ ದಾಖಲಾಗಿರುವ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಬಹುದು.

ಸುದ್ದಿ 2 ನಿಮಿಷ

ಯಾವುದೇ ಪ್ರಶಸ್ತಿಗೆ ಸೂಚಿಸಬಾರದು: ಗವಿಶ್ರೀ

ಕೊಪ್ಪಳ: ಜಾಲತಾಣಗಳಲ್ಲಿ ಭಕ್ತರು ಸ್ವಯಂಪ್ರೇರಿತವಾಗಿ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಗಳಿಗೆ ಪದ್ಮಶ್ರೀ ಪ್ರಶಸ್ತಿ ನೀಡಬೇಕು ಎಂದು ಪೋಸ್ಟ್ ಹಾಕುತ್ತಿರುವ ಹಿನ್ನೆಲೆಯಲ್ಲಿ ಶ್ರೀಗಳು ಸ್ಪಷ್ಟನೆ ನೀಡಿದ್ದು, ಇಂತಹ ಅಭಿಯಾನ ಕೈಗೊಳ್ಳಬಾರದು ಎಂದು ತಿಳಿಸಿದ್ದಾರೆ.

'ಪ್ರಕೃತಿ ನಮಗೆ ಕೊಟ್ಟಿರುವುದು ಎರಡೇ ಆಯ್ಕೆ. ಇರುವುದನ್ನು ಪ್ರೇಮದಿಂದ ಕೊಟ್ಟು ಹೋಗಬೇಕು. ಇಲ್ಲವೇ ಅನಿವಾರ್ಯವಾಗಿ ಬಿಟ್ಟು ಹೋಗಬೇಕು. ದೇಹ, ಮನ, ಬುದ್ಧಿ ಭಾವಗಳನ್ನು ಬೆಳೆಸಿಕೊಂಡು ಸುಂದರವಾದ ದೇವನ ಸೃಷ್ಟಿಯನ್ನು ಮತ್ತಷ್ಟು ಸುಂದರಗೊಳಿಸುವುದಕ್ಕೆ ಈ ಜೀವನವನ್ನೇ ಕೊಡಬೇಕು. ನನ್ನದು ಎನ್ನುವುದು ಏನಿದೆಯೋ ಅದೆಲ್ಲ ಇಲ್ಲಿಯೇ ಬಿಟ್ಟು ಹೋಗಬೇಕು. ನನಗೆ ಪ್ರೇಮ ಮತ್ತು ಸೇವೆ ನನ್ನ ಗುರುಗಳು ಅಪ್ಪಣೆ ಕೊಡಿಸಿದ ಧರ್ಮದ ಎರಡು ಆಯಾಮಗಳು ಮತ್ತು ಇದೇ ರೀತಿಯಾಗಿ ಬದುಕಲು ಅಪ್ಪಣೆ ಕೊಡಿಸಿದ್ದಾರೆ' ಎಂದಿದ್ದಾರೆ.



'ಇತ್ತೀಚೆಗೆ ನಮ್ಮ ಹೆಸರನ್ನು ಕೇಂದ್ರ ಸರ್ಕಾರ ಕೊಡ ಮಾಡುವ ಪ್ರಶಸ್ತಿಗಾಗಿ ಮತ್ತು ನಾಡಿನ ಹಲವು ಪೂಜ್ಯರೊಂದಿಗೆ ಸೇವಾ ಕಾರ್ಯದಲ್ಲಿ ಹೋಲಿಕೆ ಮಾಡಿ ಅಂತರ್ಜಾಲದಲ್ಲಿ ಹರಿಬಿಡುತ್ತಿರುವುದು ನಮ್ಮ ಮನಸ್ಸಿಗೆ ತುಂಬಾ ನೋವನ್ನುಂಟು ಮಾಡಿದೆ. ದೇವನ ಕರುಣೆಯಿಂದ ಮಾನವನಾಗಿ ಜನ್ಮತಾಳಿದ್ದೆ ಒಂದು ದೊಡ್ಡ ಪ್ರಶಸ್ತಿ ಇರುವಾಗ ಉಳಿದ ಪ್ರಶಸ್ತಿಗಳ ಹಂಗೇಕೆ? ಭಕ್ತರು ನನ್ನ ಹೆಸರನ್ನು ಯಾವುದೇ ಪ್ರಶಸ್ತಿಗಾಗಿ ಸೂಚಿಸಬಾರದು ಎಂದು ಪ್ರಾರ್ಥಿಸುತ್ತೇನೆ.

'ಇದಲ್ಲದೇ ನಾಡಿನ ಪೂಜ್ಯರೆಲ್ಲರೂ ಎನಗೆ ಗುರು ಸ್ವರೂಪರು. ಸೇವಾ ಕಾರ್ಯದಲ್ಲಿ ಅವರೊಂದಿಗೆ ಹೋಲಿಸಿ ಅಂತರ್ಜಾಲದಲ್ಲಿ ಹರಿಬಿಡಬಾರದು ಎಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.' ಎಂದು ತಿಳಿಸಿದ್ದಾರೆ.

'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಒತ್ತಾಯ: ಹಲ್ಲೆ

ಕಾನ್ಪುರ (ಉತ್ತರ ಪ್ರದೇಶ) (ಪಿಟಿಐ): 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಒತ್ತಾಯಿಸಿ ಮುಸ್ಲಿಂ ವ್ಯಕ್ತಿಯ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ.

ಹಲ್ಲೆಗೊಳಗಾದ ವ್ಯಕ್ತಿಯ ಪುಟ್ಟ ಮಗಳು ಅಳುತ್ತಲೇ ತಂದೆಯನ್ನು ರಕ್ಷಿಸಲು ಪ್ರಯತ್ನಿಸಿದ್ದಾಳೆ. ಅಲ್ಲದೆ ತಂದೆಯನ್ನು ಹೊಡೆಯಬೇಡಿ ಎಂದು ದಾಳಿಕೋರರ ಗುಂಪಿನ ಸದಸ್ಯರ ಬಳಿ ಮನವಿ ಮಾಡಿದ ದೃಶ್ಯಗಳಿರುವ ಒಂದು ನಿಮಿಷದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಂಡಿದೆ.

ನಂತರ ಕೆಲವು ಪೊಲೀಸರು ಆ ವ್ಯಕ್ತಿಯನ್ನು ರಕ್ಷಿಸಿ ತಮ್ಮ ಜೀಪ್ ಬಳಿ ಕರೆದುಕೊಂಡು ಹೋಗಿದ್ದಾರೆ. ಆ ವ್ಯಕ್ತಿ ಪೊಲೀಸರ ವಶದಲ್ಲಿದ್ದ ಸಂದರ್ಭದಲ್ಲೂ ದಾಳಿಕೋರರು ಹಲ್ಲೆ ನಡೆಸಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಹಲ್ಲೆಗೊಳಗಾದ ವ್ಯಕ್ತಿ ರಿಕ್ಷಾ ಚಾಲಕರಾಗಿದ್ದಾರೆ. ಅವರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಬೇಗ್ ವಿರುದ್ಧ ಇ.ಡಿ ತನಿಖೆ: ವಿವರ ಕೇಳಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ರೋಷನ್ ಬೇಗ್ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ (ಪಿಎಂಎಲ್) ಕಾಯ್ದೆಯಡಿ ಕ್ರಮ ಜರುಗಿಸಿರುವ ಬಗ್ಗೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸುವಂತೆ ಜಾರಿ ನಿರ್ದೇಶನಾಲಯಕ್ಕೆ(ಇ.ಡಿ) ಹೈಕೋರ್ಟ್ ಸೂಚನೆ ನೀಡಿದೆ.

ಐ ಮಾನಿಟರಿಂಗ್ ಅಡ್ವೈಸರಿ(ಐಎಂಎ) ಹಗರಣದಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಕಾಯ್ದೆಯಡಿ-(ಕೆಪಿಐಡಿ) ನೇಮಕಗೊಂಡಿರುವ ಸಕ್ಷಮ ಪ್ರಾಧಿಕಾರದಿಂದ ಬೇಗ್ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಪಿಎಂಎಲ್ ಕಾಯ್ದೆಯಡಿ ಬೇಗ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ಇತ್ತೀಚೆಗೆ ಶೋಧ ನಡೆಸಿದೆ. ಇದು ಸಕ್ಷಮ ಪ್ರಾಧಿಕಾರದ ಕ್ರಮಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬುದನ್ನು ಗಮನಿಸಿದ ಪೀಠ, ಈ ಆದೇಶ ನೀಡಿತು.

ಇ.ಡಿ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲಾಗದು. ಆದರೆ, ಎರಡು ತನಿಖಾ ಸಂಸ್ಥೆಗಳೇ ಆಗಿರುವುದರಿಂದ ಪರಸ್ಪರ ಸಹಕಾರ ನೀಡುವ ಅವಶ್ಯಕತೆ ಇದೆ. ಹೀಗಾಗಿ, ವರದಿ ಸಲ್ಲಿಸಬೇಕು ಎಂದು ಪೀಠ ನಿರ್ದೇಶನ ನೀಡಿತು.

ಈ ಮಧ್ಯೆ, ಆಸ್ತಿ ಮುಟ್ಟುಗೋಲು ಆದೇಶ ದೃಢೀಕರಿಸಲು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ ವಿಚಾರಣೆ ಬಾಕಿ ಇದೆ ಎಂದು ಪ್ರಾಧಿಕಾರ ತಿಳಿಸಿತು. ಈ ಅರ್ಜಿಯನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡುವಂತೆ ವಿಶೇಷ ನ್ಯಾಯಾಲಯಕ್ಕೆ ಪೀಠ, ಇದೇ ವೇಳೆ ನಿರ್ದೇಶನ ನೀಡಿತು. ನ್ಯಾಯಾಲಯ ದೃಢೀಕರಿಸಿದ ಬಳಿಕವೇ ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿ ಮಾರಾಟ ಮಾಡಬಹುದು ಎಂದು ಪೀಠ ಹೇಳಿತು. ವಿಚಾರಣೆಯನ್ನು ಸೆ.16ಕ್ಕೆ ಮುಂದೂಡಿತು.

ಬೆಟ್ಟಿಂಗ್ ಮೊತ್ತ ಮೇಲಿನ ಜಿಎಸ್‌ಟಿ ರದ್ದು ಆದೇಶಕ್ಕೆ ತಡೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ಮತ್ತು ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನಲ್ಲಿ ಸಂಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ತೆರಿಗೆ ವಿಧಿಸುವ ಜಿಎಸ್‌ಟಿ ನಿಯಮಗಳನ್ನು ರದ್ದುಪಡಿಸಿದ್ದ ಏಕ ಸದಸ್ಯ ಪೀಠದ ಆದೇಶಕ್ಕೆ ಹೈಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

ಸ್ಟಾಕ್ ಬ್ರೋಕರ್ ಅಥವಾ ಟ್ರಾವೆಲ್ ಏಜೆಂಟ್‌ಗಳ ರೀತಿಯಲ್ಲಿ ಈ ಎರಡು ರೇಸ್ ಕ್ಲಬ್‌ಗಳು ಕೇವಲ ಕಮಿಷನ್ ಪಡೆದು ಕಾರ್ಯ ನಿರ್ವಹಿಸುತ್ತಿವೆ. ಈ ಕಾರಣದಿಂದ ಈ ಕ್ಲಬ್‌ಗಳು ಸಂಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಜಿಎಸ್‌ಟಿ ಪಾವತಿಸಲು ಆಗುವುದಿಲ್ಲ ಎಂದು ಏಕ ಸದಸ್ಯ ಪೀಠ ಅಭಿಪ್ರಾಯಪಟ್ಟಿತ್ತು. ಕೇಂದ್ರ ಸರಕು ಮತ್ತು ಸೇವೆಗಳ 2017ರ ನಿಯಮ 31ಎ(3) ಹಾಗೂ ಕರ್ನಾಟಕ ಸರಕು ಮತ್ತು ಸೇವೆ ತೆರಿಗೆ ನಿಯಮ 31ಎ ಅನ್ನು ಈ ಎರಡು ರೇಸ್ ಕ್ಲಬ್‌ಗಳಿಗೆ ಅನ್ವಯ ಆಗುವಂತೆ ರದ್ದುಪಡಿಸಿತ್ತು.

'ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 15ರಲ್ಲಿ ತೆರಿಗೆ ಮೌಲ್ಯಮಾಪನ ಮಾಡಲು ಅವಕಾಶ ಇದೆ. ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವೂ ಈ ನಿಯಮವನ್ನು ಎತ್ತಿ ಹಿಡಿದಿದೆ' ಎಂದು ಮೇಲ್ಮನವಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವರಿಸಿವೆ. ಮುಂದಿನ ವಿಚಾರಣೆಯನ್ನು ಪೀಠ ಅಕ್ಟೋಬರ್ 7ಕ್ಕೆ ಮುಂದೂಡಿತು.

ಅಕ್ರಮ ಧಾರ್ಮಿಕ ಕಟ್ಟಡ: 'ಹೊಸ ಪ್ರಮಾಣ ಪತ್ರ ಸಲ್ಲಿಸಿ'

ಬೆಂಗಳೂರು: ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಅಕ್ರಮ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸುವ ಸಂಬಂಧ ಸರಿಯಾದ ಪ್ರಮಾಣ ಪತ್ರ ಸಲ್ಲಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಸುಪ್ರೀಂ ಕೋರ್ಟ್ ಆದೇಶ ಜಾರಿಗೆ ತರಲು ಪಾಲಿಕೆ ತಗೆದುಕೊಂಡಿರುವ ಕ್ರಮಗಳು ಆಘಾತಕಾರಿ ಸ್ಥಿತಿಯನ್ನು ಬಹಿರಂಗಪಡಿಸುತ್ತವೆ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿತು. 2009ರ ಸೆಪ್ಟೆಂಬರ್ 29ರ ಬಳಿಕ 277 ಅಕ್ರಮ ಧಾರ್ಮಿಕ ಕಟ್ಟಡಗಳು ನಿರ್ಮಾಣವಾಗಿವೆ ಎಂಬ ವರದಿಯನ್ನು ಪೀಠ ಪರಿಶೀಲಿಸಿತು. ಅಕ್ರಮ ಕಟ್ಟಡಗಳ ತೆರವು ವಿಷಯದಲ್ಲಿ ಯಾವುದೇ ಬಾಹ್ಯ ಒತ್ತಡಗಳು ಇರಕೂಡದು ಎಂದು ತಿಳಿಸಿತು.

'1,893 ಅನಧಿಕೃತ ಕಟ್ಟಡಗಳಿದ್ದು, ಅವುಗಳಲ್ಲಿ 1,548 ಕಟ್ಟಡಗಳನ್ನು ಕ್ರಮಬದ್ಧಗೊಳಿಸಬಹುದು. 105 ಕಟ್ಟಡಗಳನ್ನು ಸ್ಥಳಾಂತರಿಸಬಹುದು ಮತ್ತು 240 ಕಟ್ಟಡಗಳನ್ನು ತೆರವುಗೊಳಿಸಲಾಗುವುದು' ಎಂದು ಈ ಹಿಂದಿನ ಪ್ರಮಾಣ ಪತ್ರದಲ್ಲಿ ಬಿಬಿಎಂಪಿ ವಿವರಿಸಿತ್ತು. 277 ಕಟ್ಟಡಗಳನ್ನು ಗುರುತಿಸಲಾಗಿದೆ ಎಂದು ಗುರುವಾರ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಪಾಲಿಕೆ ತಿಳಿಸಿತು.

ಕಟ್ಟಡಗಳ ತೆರವಿಗೆ ಕಾಲಮಿತಿ ನಿಗದಿ ಮಾಡಿಕೊಂಡು ಮೂರು ವಾರಗಳಲ್ಲಿ ಹೊಸದಾಗಿ ಪ್ರಮಾಣ ಪತ್ರ ಸಲ್ಲಿಸಬೇಕು ಎಂದು ಮುಖ್ಯ ಆಯುಕ್ತರಿಗೆ ಆದೇಶಿಸಿದ ಪೀಠ, ವಿಚಾರಣೆಯನ್ನು ಸೆ.17ಕ್ಕೆ ಮುಂದೂಡಿತು.

ಶಿವಾನಂದ ವೃತ್ತದಲ್ಲಿ ಮೇಲ್ಸೇತುವೆ ಕಾಮಗಾರಿ

'ಭೂಸ್ವಾಧೀನ ತೊಡಕು ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಕಳೀಪುರ ಜಂಕ್ಷನ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ, ಸುಜಾತಾ ಟಾಕೀಸ್ ಬಳಿಯ ವೈ ಜಂಕ್ಷನ್, ಶಿವಾನಂದ ವೃತ್ತದಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಗುರುವಾರ ಪರಿಶೀಲನೆ ನಡೆಸಿದರು.

ಶಿವಾನಂದ ವೃತ್ತದಲ್ಲಿನ ಉಕ್ಕಿನ ಸೇತುವೆ ಕಾಮಗಾರಿ ವೀಕ್ಷಿಸಿದ ಅವರು, '579 ಚದರ ಮೀಟರ್ ಭೂಮಿ ಸ್ವಾಧೀನವಾಗಬೇಕಿದ್ದು, ಅದನ್ನು ಕೂಡಲೇ ಇತ್ಯರ್ಥಪಡಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರ ಜತೆ ಸಮನ್ವಯ ಸಾಧಿಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ತಿಳಿಸಿದರು.

ಮೇಲ್ಸೇತುವೆಗೆ ರ‍್ಯಾಂಪ್ ಹಾಗೂ ತಡೆಗೋಡೆ ನಿರ್ಮಾಣ ಮಾಡುವ ಕೆಲಸ ಬಾಕಿ ಇದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಓಕಳಿಪುರ ಅಷ್ಟಪಥ ಕಾರಿಡಾರ್‌ನಲ್ಲಿ ರೈಲ್ವೆ ಇಲಾಖೆ ನಡೆಸುತ್ತಿರುವ ಬಾಕ್ಸ್ ಪುಶಿಂಗ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆಯಬೇಕು. ಕಾಮಗಾರಿ ಮುಗಿದಿರುವ ಕಡೆ ವಾಹನ ಸಂಚಾರಕ್ಕೆ ಅನುವು ಮಾಡುವಂತೆ ತಿಳಿಸಿದರು.

ಹಳೇ ಮೈಸೂರು ರಸ್ತೆ(ಮಾಗಡಿ ರಸ್ತೆ) ಹಾಗೂ ವಾಟಾಳ್ ನಾಗರಾಜ್ ರಸ್ತೆ(ಸುಜಾತ ಟಾಕೀಸ್) ವೈ ಜಂಕ್ಷನ್‌ನಲ್ಲಿ ₹30 ಕೋಟಿ ವೆಚ್ಚದಲ್ಲಿ ಗ್ರೇಡ್ ಸಪರೇಟರ್ ನಿರ್ಮಿಸುವ ಯೋಜನೆಗೆ ಸ್ಥಳ ಪರಿಶೀಲನೆ ನಡೆಸಿದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪುರ್ಣಗೊಳಸಬೇಕು. ವಿದ್ಯುತ್ ಕಂಬದ ದೀಪಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್, ಪಶ್ಚಿಮ ವಲಯ ಆಯುಕ್ತ ಬಸವರಾಜು, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ರಸ್ತೆ ಮೂಲ ಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಇದ್ದರು.



ವೈ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಿಸುವ ಯೋಜನೆ ಬಗ್ಗೆ ಅಧಿಕಾರಿಗಳಿಂದ ಗೌರವ್ ಗುಪ್ತ ಅವರು ಮಾಹಿತಿ ಪಡೆಯುತ್ತಿರುವುದು

ತಪ್ಪು ಲೆಕ್ಕ ತೋರಿಸಿ ಕೋಟಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಕಂಪನಿ ವಹಿವಾಟಿನ ಬಗ್ಗೆ ತಪ್ಪು ಲೆಕ್ಕ ತೋರಿಸಿ ಸುಮಾರು ₹ 1 ಕೋಟಿ ತನ್ನದಾಗಿಸಿಕೊಂಡು ವಂಚಿಸಿದ್ದ ಆರೋಪದಡಿ ಅನಿಲ್‌ಕುಮಾರ್ (27) ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.



ಅನಿಲ್‌ಕುಮಾರ್

'ಚಿಕ್ಕಮಗಳೂರಿನ ಅನಿಲ್‌ಕುಮಾರ್, ಬಿ.ಕಾಂ. ಪದವೀಧರ. ಜೆ.ಪಿ. ನಗರ ಬಳಿಯ ಶಾಖಾಂಬರಿ ನಗರದಲ್ಲಿರುವ 'ಸಿದ್ದಾರ್ಥ್ ಇಂಟೀರಿಯರ್ಸ್' ಕಂಪನಿಯಲ್ಲಿ ಲೆಕ್ಕಿಗನಾಗಿ ಕೆಲಸ ಮಾಡುತ್ತಿದ್ದ. ದೊಡ್ಡಕಲ್ಲಸಂದ್ರದಲ್ಲಿ ನೆಲೆಸಿದ್ದ. ಕಂಪನಿ ಮಾಲೀಕರು ನೀಡಿದ್ದ ದೂರು ಆಧರಿಸಿ ಆತನನ್ನು ಬಂಧಿಸಲಾಗಿದೆ. ಆತನಿಂದ ಕಾರು ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಟ್ಟಡ ನಿರ್ಮಾಣ ಸಾಮಗ್ರಿ ಹಾಗೂ ಒಳಾಂಗಣ ವಿನ್ಯಾಸ ವಸ್ತುಗಳ ಹಂಚಿಕೆ ಕೆಲಸವನ್ನು ಕಂಪನಿ ಮಾಡುತ್ತಿದೆ. ನಿತ್ಯವೂ ಲಕ್ಷಾಂತರ ರೂಪಾಯಿ ವಹಿವಾಟು ನಡೆಯುತ್ತಿತ್ತು. ಅದರ ಲೆಕ್ಕವನ್ನು ಆರೋಪಿ, ಕಂಪ್ಯೂಟರ್ ಸಾಫ್ಟ್‌ವೇರ್‌ನಲ್ಲಿ ದಾಖಲಿಸುತ್ತಿದ್ದ.'

'ವ್ಯಾಪಾರಿಗಳು ಹಾಗೂ ಗ್ರಾಹಕರು ನೀಡುತ್ತಿದ್ದ ಹಣವನ್ನು ಜೇಬಿಗೆ ಹಾಕಿಕೊಳ್ಳುತ್ತಿದ್ದ ಆರೋಪಿ, ನಕಲಿ ಚೆಕ್ ಹಾಗೂ ನಕಲಿ ಆರ್‌ಟಿಜಿಎಸ್/ನೆಫ್ಟ್ ಮೂಲಕ ತಪ್ಪು ಲೆಕ್ಕ ದಾಖಲು ಮಾಡುತ್ತಿದ್ದ. 2019ರಿಂದಲೇ ಕೃತ್ಯ ಎಸಗುತ್ತಿದ್ದ ಆರೋಪಿ ₹ 1 ಕೋಟಿ ವಂಚಿಸಿರುವುದಾಗಿ ಮಾಲೀಕರು ದೂರಿನಲ್ಲಿ ಹೇಳಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಮಾಲೀಕರು ಕಚೇರಿಯಲ್ಲಿರುವ ವೇಳೆಯಲ್ಲೇ ವ್ಯಾಪಾರಿಯೊಬ್ಬರು ₹ 1 ಲಕ್ಷ ತಂದು ಕೊಟ್ಟಿದ್ದರು. ಅದನ್ನು ಜೇಬಿಗೆ ಇಳಿಸಿದ್ದ ಆರೋಪಿ, ತಪ್ಪು ಲೆಕ್ಕ ಬರೆದಿದ್ದ. ಅದನ್ನು ಗಮನಿಸಿದ್ದ ಮಾಲೀಕ, ಬೇರೊಬ್ಬ ಲೆಕ್ಕಿಗರ ಮೂಲಕ ಪರಿಶೀಲನೆ ನಡೆಸಿದ್ದರು. ಅವಾಗಲೇ ಆರೋಪಿ ಕೃತ್ಯ ಬಯಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬೇಕರಿ ತೆರೆದಿದ್ದ ಆರೋಪಿ: 'ಕಂಪನಿ ವಂಚಿಸಿ ಗಳಿಸಿದ್ದ ಹಣದಲ್ಲಿ ಆರೋಪಿ, ಆರ್.ಟಿ.ನಗರದಲ್ಲಿ ಬೇಕರಿ ತೆರೆದಿದ್ದ. ಐಷಾರಾಮಿ ಕಾರು, ಬೈಕ್‌ಗಳು ಹಾಗೂ ಚಿಕ್ಕಮಗಳೂರಿನಲ್ಲಿ ಅಡಿಕೆ ತೋಟ ಖರೀದಿಸಿದ್ದ' ಎಂದೂ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

9 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಲು ಯತ್ನಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಗಾಂಜಾ ಇಟ್ಟುಕೊಂಡು ಬುಧವಾರ ಹಲವೆಡೆ ಸಂಚರಿಸುತ್ತಿದ್ದ ಆರೋಪಿಗಳು, ಗ್ರಾಹಕರಿಗೆ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಅವರಿಂದ 9 ಕೆ.ಜಿ 90 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೆಡ್ಲರೊಬ್ಬನನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿಗಳು, ಆತನಿಂದ ಗಾಂಜಾ ಖರೀದಿಸಿ ತರುತ್ತಿದ್ದರು. ಅದನ್ನೇ ಗ್ರಾಹಕರಿಗೆ ಮಾರಿ ಹಣ ಗಳಿಸುತ್ತಿದ್ದರು' ಎಂದೂ ತಿಳಿಸಿವೆ.

ದ್ವಿಚಕ್ರ ವಾಹನ, ಮೊಬೈಲ್ ಕದಿಯುತ್ತಿದ್ದವನ ಬಂಧನ



ಪೊಲೀಸರು ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್‌ಗಳು

ಬೆಂಗಳೂರು: ನಗರದ ಹಲವೆಡೆ ದ್ವಿಚಕ್ರ ವಾಹನ ಹಾಗೂ ಮೊಬೈಲ್ ಕಳವು ಮಾಡಿದ್ದ ಆರೋಪದಡಿ ಮುಬಾರಕ್ ಪಾಷಾ ಎಂಬಾತನನ್ನು ಜಗಜೀವನ್‌ರಾಮ್ ನಗರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ ಆರೋಪಿ, ಅಪರಾಧ ಹಿನ್ನೆಲೆಯುಳ್ಳವ. ಆತನಿಂದ ₹ 1.99 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನಗಳು ಹಾಗೂ ₹ 2.99 ಲಕ್ಷ ಮೌಲ್ಯದ 10 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಜಗಜೀವನ್‌ರಾಮ್ ನಗರ, ಎಸ್.ಜೆ.ಪಾರ್ಕ್ ಹಾಗೂ ಸೂರ್ಯನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕೃತ್ಯ ಎಸಗಿದ್ದ. ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳ ಲಾಕ್ ಮುರಿದು ಕಳವು ಮಾಡುತ್ತಿದ್ದ. ಅದೇ ವಾಹನದಲ್ಲೇ ಸುತ್ತಾಡಿ ಸಾರ್ವಜನಿಕರ ಮೊಬೈಲ್ ಕದಿಯುತ್ತಿದ್ದ.''ಕಳವು ಸಂಬಂಧ ಇತ್ತೀಚೆಗೆ ದೂರು ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದೂ ತಿಳಿಸಿದರು.

'ಹಮಾಲಿಗಳಿಗೆ ಕೂಲಿ ಇಲ್ಲ'

ಯಶವಂತಪುರ ಲಾರಿ ಮಾಲೀಕರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಕು ತುಂಬಿಸಲು ಹಾಗೂ ಇಳಿಸುವಾಗ ಲಾರಿ ಮಾಲೀಕರು ಹಮಾಲಿಗಳಿಗೆ ಕೂಲಿ ಹಣ ನೀಡುವುದಿಲ್ಲ. ಇನ್ನು ಮುಂದೆ ವರ್ತಕರೇ ಹಮಾಲಿಗಳಿಗೆ ಮಾಮೂಲಿ ನೀಡಬೇಕು' ಎಂದು ಒತ್ತಾಯಿಸಿ ಯಶವಂತಪುರ ಲಾರಿ ಮಾಲೀಕರ ಸಂಘದ ನೇತೃತ್ವದಲ್ಲಿ ಲಾರಿ ಮಾಲೀಕರು ಗುರುವಾರ ಪ್ರತಿಭಟನೆ ನಡೆಸಿದರು.

'ನಿಮ್ಮ ಸರಕಿಗೆ ನಿಮ್ಮ ಹಮಾಲಿ ಮಾಮೂಲಿ' ಎಂಬ ಫಲಕ ಹಿಡಿದು, ಯಶವಂತಪುರದ ಗೊರಗುಂಟೆ ಪಾಳ್ಯ ಮುಖ್ಯ ರಸ್ತೆಯಿಂದ ಎಂಪಿಎಂಸಿವರೆಗೆ ಪ್ರತಿಭಟನಾ ಜಾಥಾ ನಡೆಸಿದರು. ಬಳಿಕ ಎಪಿಎಂಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಯಶವಂತಪುರ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಕೆ.ಮೋಹನ್,'ಕೈಗಾರಿಕೆಗಳು ಹಾಗೂ ವರ್ತಕರು ತಮ್ಮ ಸರಕುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಲಾರಿಗಳನ್ನು ಬಾಡಿಗೆಗೆ ಪಡೆಯುತ್ತಾರೆ. ಆದರೆ, ಸರಕನ್ನು ತುಂಬಲು ಮತ್ತು ಇಳಿಸಲು 'ವಾರ್ನಿ ಮಾಮೂಲಿ' ಎಂದು ಹಮಾಲಿಗಳು ಲಾರಿಯವರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಲಾರಿ ಮಾಲೀಕರಿಗೆ ನಷ್ಟವಾಗುತ್ತಿದೆ' ಎಂದು ದೂರಿದರು.

'ಲಾರಿ ಮಾಲೀಕರ ಸಂಘದ ಬೈಲಾ ನಿಯಮ ಪ್ರಕಾರ ಲಾರಿ ಮಾಲೀಕರು ಹಮಾಲಿ ಕೂಲಿ ನೀಡುವ ಬಗ್ಗೆ ಉಲ್ಲೇಖವಿಲ್ಲ. ತಿಂಗಳಿಗೆ ಒಂದು ಲಾರಿಗೆ ₹15 ಸಾವಿರಕ್ಕೂ ಹೆಚ್ಚು ಖರ್ಚು ಬೀಳುತ್ತದೆ. ಇದರ ಜೊತೆಗೆ ಹಮಾಲಿಗಳಿಗೆ ಕೂಲಿ ನೀಡುವುದರಿಂದ ಹೆಚ್ಚುವರಿ ನಷ್ಟವನ್ನು ಮಾಲೀಕರು ಅನುಭವಿಸಬೇಕಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಹರಿಯಾಣ, ಪಂಜಾಬ್ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಯಾವುದೇ ಲಾರಿ ಮಾಲೀಕರು ಹಮಾಲಿಗಳಿಗೆ ಹಣ ಕೊಡುತ್ತಿಲ್ಲ. ರಾಜ್ಯದಲ್ಲೂ ಆ.16ರಿಂದ ಹಮಾಲಿಗಳಿಗೆ ಮಾಮೂಲಿ ಹಣ ಕೊಡದಿರಲು ನಿರ್ಧರಿಸಿದ್ದೇವೆ. ವರ್ತಕರೇ ತಮ್ಮ ಸರಕಿಗೆ ಮಾಮೂಲಿ ನೀಡಲಿ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕೆಜಿಟಿಎ, ಎಪಿಎಂಸಿ ಲಾರಿ ಅಸೋಸಿಯೇಷನ್, ಬಿಸಿಎಲ್‌ಟಿಎ, ಕೆಜಿಎಫ್, ಎಫ್‌ಜಿಓಎ, ಕೆಎಸ್‌ಟಿಎ, ಬೆಂಗಳೂರು ಜಿಲ್ಲೆಯ ಎಲ್ಲ ಲಾರಿ ಮಾಲೀಕರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



ಲಾರಿ ಮಾಲೀಕರ ಸಂಘಗಳ ಪ್ರತಿನಿಧಿಗಳು ಯಶವಂತಪುರದಲ್ಲಿ ಪ್ರತಿಭಟನೆ ನಡೆಸಿದರು.

ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ

ಬೆಂಗಳೂರು: ಗೋವಿಂದರಾಜನಗರ ಬಿಜೆಪಿ ಮಹಿಳಾ ಮೋರ್ಚಾದ ಸಹಯೋಗದಲ್ಲಿ ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಆರ್ಥಿಕವಾಗಿ ಹಿಂದುಳಿದ 150 ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಸತಿ ಸಚಿವ ವಿ. ಸೋಮಣ್ಣ ವಿತರಿಸಿದರು.

ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಮಹಿಳಾ ಮಂಡಲದ ಅಧ್ಯಕ್ಷೆ ರತ್ನಮ್ಮ, ಬಿಜೆಪಿ ಮುಖಂಡೆ ಜಯರತ್ನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಮಿನಾಕ್ಷಿ, ಕಲಾ ಇದ್ದರು.



ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ವಿ. ಸೋಮಣ್ಣ ಅವರು ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ಕಣಮಿಣಕಿ ಗ್ರಾಮದಲ್ಲಿ ತ್ಯಾಜ್ಯ ವಿಲೇವಾರಿ ಘಟಕ: ಸೋಮಶೇಖರ್

ಕೆಂಗೇರಿ: ಸ್ಥಳೀಯ ಮಟ್ಟದಲ್ಲೇ ತ್ಯಾಜ್ಯ ವಿಲೇವಾರಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕುಂಬಳಗೋಡು ಪಂಚಾಯಿತಿ ವ್ಯಾಪ್ತಿಯ ಕಣಮಿಣಕಿ ಗ್ರಾಮದಲ್ಲಿ ಪ್ರತ್ಯೇಕ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲಾಗುತ್ತಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಹಾಗೂ ಕೊರೊನಾ ಯೋಧರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕುಂಬಳಗೋಡು ಗ್ರಾಮಪಂಚಾಯಿತಿ ಭೌಗೋಳಿಕವಾಗಿ ನಗರಪ್ರದೇಶಕ್ಕೆ ಅಂಟಿಕೊಂಡಂತಿದೆ. 40 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಕುಂಬಳಗೋಡನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಹಾಗೂ ನೈರ್ಮಲ್ಯವನ್ನು ಕಾಪಾಡುವ ನಿಟ್ಟಿನಲ್ಲಿ 2.5 ಎಕರೆಯಲ್ಲಿ ಪ್ರತ್ಯೇಕ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲು ತೀರ್ಮಾನಿಸಲಾಗಿದೆ ಎಂದರು.

ಬೆಂಗಳೂರು ಮಹಾನಗರ ಪಾಲಿಕೆಗೆ ಕುಂಬಳಗೋಡು ಗ್ರಾಮ ಪಂಚಾಯಿತಿಯನ್ನು ಸೇರ್ಪಡೆ ಮಾಡಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದರಿಂದ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರಕಲಿದೆ ಎಂದರು.

ಮಂಚನಬೆಲೆಯಿಂದ ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಿಗೆ ಸಮರ್ಪಕವಾಗಿ ನೀರು ಸರಬರಾಜು ಮಾಡುವ ಯೋಜನೆಯನ್ನು ಶೀಘ್ರದಲ್ಲೇ ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಕಂಬೀಪುರದಲ್ಲಿ ಶಾಲೆ ಆರಂಭಿಸಲು ಒಂದು ಎಕರೆ ಭೂಮಿ ಮಂಜೂರು ಮಾಡಲಾಗಿದೆ' ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನಾಗವೇಣಿ, 'ಕೊರೊನಾ ವೇಳೆ ಸೋಂಕಿತರಿಗೆ ವೈದ್ಯಕೀಯ ಪರಿಕರ ಸೇರಿದಂತೆ ಪಡಿತರ ವಿತರಿಸುವ ಮೂಲಕ ಕುಂಬಳಗೋಡು ಪಂಚಾಯಿತಿ ಇತರೆ ಪಂಚಾಯಿತಿಗಳಿಗೆ ಮಾದರಿಯಾಗಿತ್ತು. ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸುವ ಮೂಲಕ ಈ ಹಿರಿಮೆಯನ್ನು ಮುಂದುವರಿಸಿದೆ' ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಿಕ್ಕರಾಜು ಅವರು, ಅಲ್ಪಸಂಖ್ಯಾತರು ಹೆಚ್ಚಾಗಿರುವ ಕಂಬೀಪುರ ಹಾಗೂ ಕುಂಬಳಗೋಡು ಆಸುಪಾಸಿನಲ್ಲಿ ಸರ್ಕಾರಿ ಜಾಗ ಗುರುತಿಸಿ ಅಲ್ಪಸಂಖ್ಯಾತರ ಸಮುದಾಯ ಭವನ ನಿರ್ಮಿಸಿಕೊಡುವಂತೆ ಮನವಿ ಮಾಡಿದರು. ಇದೇ ವೇಳೆ ಆಶಾಕಾರ್ಯಕರ್ತೆಯರಿಗೆ ಗೌರವಧನ ನೀಡಿ ಗೌರವಿಸಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಶಾ, ಉಪಾಧ್ಯಕ್ಷ ನರಸಿಂಹಮೂರ್ತಿ, ಬಿಇಒ ಪ್ರಕಾಶ್, ಗ್ರಾಮ ಪಂಚಾಯಿತಿ ಸದಸ್ಯರು ಉಪಸ್ಥಿತರಿದ್ದರು.



ಘನ ತ್ಯಾಜ್ಯ ವಿಲೇವಾರಿ ಘಟಕಕ್ಕಾಗಿ ಮಂಜೂರು ಆಗಿರುವ ಭೂದಾಖಲಾತಿಗಳನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನಾಗವೇಣಿ, ಕುಂಬಳಗೋಡು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದರು. ಸಹಕಾರ ಸಚಿವ ಎಸ್‌ಟಿ.ಸೋಮಶೇಖರ್, ಉಪಾಧ್ಯಕ್ಷ ನರಸಿಂಹಮೂರ್ತಿ, ಚಿಕ್ಕರಾಜು ಇದ್ದಾರೆ

ಹಾಪ್‌ಕಾಮ್ಸ್: ಇಂದಿನಿಂದ ವಿಶೇಷ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘವು (ಹಾಪ್‌ಕಾಮ್ಸ್) ಸ್ವಾತಂತ್ರ್ಯ ದಿನ ಮತ್ತು ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಕೆಲ ಹಣ್ಣು ಮತ್ತು ತರಕಾರಿ ಉತ್ಪನ್ನಗಳ ಮೇಲೆ ವಿಶೇಷ ರಿಯಾಯಿತಿ ಘೋಷಿಸಿದೆ.

'ಪ್ರಸ್ತುತ ಮಾರುಕಟ್ಟೆಯಲ್ಲಿ ಹಣ್ಣು-ತರಕಾರಿಗಳ ದರ ಏರಿದೆ. ಆದರೆ, ಹಾಪ್‌ಕಾಮ್ಸ್ ಬೆಲೆ ಹೆಚ್ಚಿಸುವುದಿಲ್ಲ. ವರಮಹಾಲಕ್ಷ್ಮಿ ಹಬ್ಬ ಸಮೀಪಿಸುತ್ತಿರುವುದರಿಂದ ಗ್ರಾಹಕರಿಗಾಗಿ ವಿಶೇಷ ರಿಯಾಯಿತಿ ದರಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಸಂಸ್ಥೆ ನಿರ್ಧರಿಸಿದೆ' ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

'ಆ.13ರಿಂದ 20ರವರೆಗೆ ಈ ರಿಯಾಯಿತಿ ಇರಲಿದೆ. ಕೋವಿಡ್ ಪರಿಸ್ಥಿತಿ ಇರುವುದರಿಂದ ಗ್ರಾಹಕರು ಜನಸಂದಣಿ ಸ್ಥಳಗಳಲ್ಲಿ ಖರೀದಿಸುವ ಬದಲಿಗೆ ಸಂಸ್ಥೆಯ ಮಳಿಗೆಗಳಲ್ಲೇ ಅಂತರ ಕಾಯ್ದುಕೊಂಡು ಉತ್ಪನ್ನಗಳನ್ನು ಖರೀದಿಸುವ ವ್ಯವಸ್ಥೆ ಕಲ್ಪಿಸಿದ್ದೇವೆ' ಎಂದರು.

ದರಪಟ್ಟಿ (ಕೆ.ಜಿ.ಗೆ ₹ಗಳಲ್ಲಿ)

ಉತ್ಪನ್ನ	ರಿಯಾಯಿತಿ ದರ
ಏಲಕ್ಕಿ ಬಾಳೆ	55
ಪಚ್ಚಬಾಳೆ	25
ಮೂಸಂಬಿ	52
ಅನಾನಸ್	47
ಸೀಬೆ (ನಾಟಿ)	60
ಕ್ಯಾರೆಟ್	79
ಸೌತೆಕಾಯಿ	22
ಆಲೂಗಡ್ಡೆ	28
ಟೊಮೆಟೊ	15
ಈರುಳ್ಳಿ	36
ತೆಂಗಿನಕಾಯಿ	28
ಒಣಕೊಬ್ಬರಿ	220

ನಿಧನ ವಾರ್ತೆ

ನೆಲಮಂಗಲ: ಜೆಡಿಎಸ್ ಮುಖಂಡ, ಶ್ರೀ ರಾಮಾಂಜನೇಯ ಸ್ವಾಮಿ ದೇವಾಲಯ ದತ್ತಿ ಸಮಿತಿ ಸದಸ್ಯ ಎಸ್.ರಮೇಶ್ ಅವರು ಗುರುವಾರ ನಿಧನರಾದರು. ಮಹಡಿಯಿಂದ ಬಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತರಾಗಿದ್ದಾರೆ. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಶುಕ್ರವಾರ ಸಂಜೆ ಅಂತ್ಯಸಂಸ್ಕಾರ ಮಾಡಲಾಯಿತು.





ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಸಿದ್ದರಾಮಯ್ಯ ಅವರ ಜನ್ಮದಿನದ ಅಂಗವಾಗಿ ಮೈಸೂರಿನಲ್ಲಿ ಗುರುವಾರ ಚಿತ್ರ ಕಲಾವಿದ ಬೆಳಗಾವಿಯ ಡಾ.ಬಾಬುರಾವ್ ನಡೋನಿ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಸಿ.ವೆಂಕಟೇಶ್; ಅಖಿಲ ಭಾರತ ಕ್ರೈಸ್ತ ಮಹಾಸಭಾದ ಉಪಾಧ್ಯಕ್ಷೆ ಶಿವಮೊಗ್ಗದ ರೀನಾ ಪ್ಯಾಟ್ರಿಕ್; ಹುಣಸೂರಿನ ಬುಡಕಟ್ಟು ಮಹಿಳಾ ಹೋರಾಟಗಾರ್ತಿ ವೀಣಾ ಪ್ರಭು ಮತ್ತು ಬೆಂಗಳೂರಿನ ಸುಜೀವ್ ಸಂಸ್ಥೆಯ ಮುಖ್ಯಸ್ಥ ಎಸ್‌.ರಾಜಾರಾಂ ಅವರಿಗೆ 'ಭಾಗ್ಯವಿಧಾತ ಸಿದ್ದರಾಮಯ್ಯ ರಾಜ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವೇದಿಕೆ ಅಧ್ಯಕ್ಷ ಕೆ.ಎಸ್‌. ಶಿವರಾಮು, ಕಾಂಗ್ರೆಸ್ ಮುಖಂಡ ಕೆ.ಮರೀಗೌಡ, ಪ್ರೊ.ಕೆ.ಎಸ್‌.ಭಗವಾನ್, ಬಂಜಗೆರೆ ಜಯಪ್ರಕಾಶ್; ದಾಸ್ತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಡಿ.ತಿಮ್ಮಯ್ಯ, ಚಿಂತಕ ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಮೈಸೂರು ವಿ.ವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಇದ್ದರು

ಕಗ್ಗದಾಸನಪುರ ಕೆರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಸಿ.ವಿ.ರಾಮನ್ ನಗರ ವಾರ್ಡ್ ವ್ಯಾಪ್ತಿಯ ಕಗ್ಗದಾಸನಪುರ ಕೆರೆಯ ಒತ್ತುವರಿಯನ್ನು ಬಿಬಿಎಂಪಿ ಅಧಿಕಾರಿಗಳು ಗುರುವಾರ ತೆರವು ಮಾಡಿದರು.

'ಕಗ್ಗದಾಸನಪುರ ಗ್ರಾಮದ ಸರ್ವೆ ನಂಬರ್ 141 ಹಾಗೂ ಬೈರಸಂದ್ರ ಗ್ರಾಮದ ಸರ್ವೆ ನಂಬರ್ 5ರಲ್ಲಿ ಒಟ್ಟು 47 ಎಕರೆ ವಿಸ್ತೀರ್ಣದಲ್ಲಿ ಕೆರೆ ಇದೆ. ಇದರಲ್ಲಿ 2.8 ಎಕರೆ ಒತ್ತುವರಿಯಾಗಿತ್ತು'.

'ಇದರಲ್ಲಿ 1.5 ಎಕರೆ ತೆರವು ಕಾರ್ಯಾಚರಣೆ ಆರಂಭಗೊಂಡಿದ್ದು, ₹25 ಕೋಟಿ ಮೌಲ್ಯದ 22 ಗುಂಟೆಯಷ್ಟು ಒತ್ತುವರಿ ಜಾಗವನ್ನು ಗುರುವಾರ ತೆರವುಗೊಳಿಸಲಾಗಿದೆ. ತೆರವು ಮಾಡಿದ ಸ್ಥಳದಲ್ಲಿ ಕೂಡಲೇ ತಂತಿ ಬೇಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.



ಕಗ್ಗದಾಸಪುರ ಕೆರೆ ಅಂಗಳದಲ್ಲಿ ಒತ್ತುವರಿ ತೆರವು ಮಾಡಲಾಯಿತು

ಕಗ್ಗದಾಸನಪುರ ಕೆರೆ ಅಂಗಳದ ಜಮೀನಿನಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು, ನಿರ್ಮಿಸಿರುವ ಕಾಂಪೌಂಡ್ ಗೋಡೆ, ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಮನೆಗಳ ತೆರವು ಕಾರ್ಯಾಚರಣೆಗೆ ಹೈಕೋರ್ಟ್ ಆದೇಶಿಸಿತ್ತು. ಒತ್ತುವರಿದಾರರಿಗೆ ಪೂರ್ವ ತಾಲ್ಲೂಕಿನ ತಹಶೀಲ್ದಾರ್ ನೋಟಿಸ್ ಜಾರಿ ಮಾಡಿದ್ದರು.

'ಕೆರೆಯಂಗಳದ 8 ಗುಂಟೆಯಲ್ಲಿ ಶ್ರೀಜಲಕಂಠೇಶ್ವರ ದೇವಾಲಯದ ಪೂಜಾರಿ ಮನೆ ಇದೆ. ಇದರ ತೆರವಿಗೆ ಸ್ಥಳೀಯರಿಂದ ವಿರೋಧವಿದೆ. ಇತರೆ ಒತ್ತುವರಿದಾರರಾದ ವೆಂಕಟಸುಬ್ರಹ್ಮಣ್ಯ ಮತ್ತು ಎಸ್.ಲಕ್ಷ್ಮೀನಾರಾಯಣ ಅವರಿಗೆ ಸೇರಿದ 3 ಗುಂಟೆ ಪ್ರದೇಶದ ವಿಲ್ಲಾ ಮತ್ತು ಮನೆ ಒತ್ತುವರಿ ಸಂಬಂಧ ಹೈಕೋರ್ಟ್ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ತಡೆಯಾಜ್ಞೆ ಇದೆ'.

'ಐಶ್ವರ್ಯ ಲೇಕ್ ವ್ಯೂ ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದ 9 ಗುಂಟೆ ಹಾಗೂ ಮಠಪತಿ ಮೆರಿಡಿಯನ್ ಅಪಾರ್ಟ್‌ಮೆಂಟ್‌ಗೆ ಸೇರಿದ 5 ಮನೆಗಳ ತೆರವಿಗೂ ತಡೆಯಾಜ್ಞೆ ಇರುವುದರಿಂದ ಅಂತಿಮ ಆದೇಶದ ನಂತರ ಒತ್ತುವರಿ ತೆರವು ಮಾಡಲಾಗುವುದು. ತಡೆಯಾಜ್ಞೆ ಇರುವ ಜಾಗಗಳನ್ನು ಹೊರತುಪಡಿಸಿ, ಉಳಿದ ಒತ್ತುವರಿಗಳನ್ನು ತೆರವುಗೊಳಿಸಲಾಗುತ್ತಿದೆ' ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ.

'ರಸ್ತೆ, ಸ್ವಾಮಿ ವಿವೇಕಾನಂದ ಯೋಗ ಕಟ್ಟಡ, ಪಾಲಿಕೆಯ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಒಳಗೊಂಡಂತೆ ಒಟ್ಟು 22 ಗುಂಟೆ ಸರ್ಕಾರಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು' ಎಂದು ಬಿಬಿಎಂಪಿ ಕೆರೆ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪಾಲಿಕೆಯ ವಿಶೇಷ ಆಯುಕ್ತರು, ಸಿ.ವಿ.ರಾಮನ್ ನಗರ ವಿಭಾಗದ ಎಂಜಿನಿಯರ್‌ಗಳು, ಕಂದಾಯ ಇಲಾಖೆಯ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಕೆ.ಆರ್.ಪುರ ತಾಲ್ಲೂಕು ಭೂಮಾಪಕರು ಹಾಗೂ ಪೊಲೀಸರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ರಾಜಕಾರಣಿಗಳೆಲ್ಲ ಪುಡಾರಿಗಳು: ರಾಮಚಂದ್ರೇಗೌಡ

'ಸಿದ್ದರಾಮಯ್ಯ ಬಸವಣ್ಣನಿಗೆ ಸಮಾನ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜಕಾರಣದಲ್ಲಿ ನಿಜವಾದ ನಾಯಕ ಸಿದ್ದರಾಮಯ್ಯ ಮಾತ್ರ. ಉಳಿದವರು ಯಾರೂ ನಿಜವಾದ ರಾಜಕಾರಣಿಗಳಲ್ಲ. ಅವರೆಲ್ಲ ಪುಡಾರಿಗಳು' ಎಂದು ಚಿಂತಕ ಪ್ರೊ. ಹಿ.ಶಿ.ರಾಮಚಂದ್ರೇಗೌಡ ಟೀಕಿಸಿದರು.

ಸಿದ್ದರಾಮಯ್ಯನವರ ಜನ್ಮದಿನದ ಪ್ರಯುಕ್ತ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯು ಗುರುವಾರ ಇಲ್ಲಿ ಏರ್ಪಡಿಸಿದ್ದ 'ಭಾಗ್ಯವಿಧಾತ ಸಿದ್ದರಾಮಯ್ಯ' ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, 'ಕರ್ನಾಟಕದಲ್ಲಿ ಬಂದ ಬಹುತೇಕ ರಾಜಕಾರಣಿಗಳು ಹಂಚಿಕೆದಾರರ ಕೆಲಸ ಮಾಡಿದರೇ ಹೊರತು, ಮಾದರಿ ರಾಜಕಾರಣಿಗಳಾಗಲಿಲ್ಲ. ಹೆಂಡ ಕೊಡಿ ಎಂದು ಕೇಳಿದವರಿಗೆಲ್ಲ ಹೆಂಡ ಕುಡಿಸುವವರು ನಿಜವಾದ ನಾಯಕರೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರು ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದು, ಕಾರ್ಯವೈಖರಿಯಲ್ಲಿ ಬಸವಣ್ಣನಿಗೆ ಸಮಾನರಾಗಿ ನಿಲ್ಲಬಲ್ಲರು. ಜನರಿಗಾಗಿ ಏನು ಮಾಡಬೇಕು ಎಂದು ಯೋಚಿಸುವ ಶಕ್ತಿ ಅವರಲ್ಲಿದೆ. ಆದ್ದರಿಂದಲೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಅನ್ನ ಭಾಗ್ಯ ಯೋಜನೆಯನ್ನು ಘೋಷಿಸಿದ್ದರು' ಎಂದರು.

'ಕಾರ್ಮಿಕರು, ಭೂಮಿ ಇಲ್ಲದವರು, ದಿನಕ್ಕೆ ₹ 100 ಸಂಪಾದಿಸಲೂ ಕಷ್ಟಪಡುವ ಬಡವರು ಮಾತ್ರ ಅವರ ಮನಸ್ಸಿನಲ್ಲಿದ್ದರು. ಅವರ ಹಸಿವು ಮತ್ತು ಮನಸ್ಸು ತಣಿಸುವ ಕೆಲಸ ಮಾಡಿದರು. ಈ ಸಮಾಜಕ್ಕೆ ಅನ್ನ ಮತ್ತು ಮನಸ್ಸನ್ನು ಕೊಟ್ಟ ಏಕೈಕ ನಾಯಕ ಸಿದ್ದರಾಮಯ್ಯ' ಎಂದು ಬಣ್ಣಿಸಿದರು.

ಜಾಗ ಮಂಜೂರಾತಿಗೆ ಒಕ್ಕಲಿಗರ ಸಂಘದಿಂದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ಹೋಬಳಿಯ ಶ್ರೀಗಂಧದ ಕಾವಲು ಸರ್ವೆ ನಂಬರ್ 129ರಲ್ಲಿರುವ 15 ಎಕರೆ ಜಾಗವನ್ನು ರಾಜ್ಯ ಒಕ್ಕಲಿಗರ ಸಂಘಕ್ಕೆ ಮಂಜೂರು ಮಾಡಿಕೊಡಬೇಕು ಎಂದು ಕಂದಾಯ ಸಚಿವ ಆರ್. ಅಶೋಕ ಅವರಿಗೆ ರಾಜ್ಯ ಒಕ್ಕಲಿಗರ ಸಂಘ ಗುರುವಾರ ಮನವಿ ಸಲ್ಲಿಸಿದೆ.

1906ರಲ್ಲಿ ಸ್ಥಾಪನೆಗೊಂಡಿರುವ ಸಂಘ, ಒಕ್ಕಲಿಗರ ಸಮುದಾಯದ ಉನ್ನತಿಗಾಗಿ ಶ್ರಮಿಸುತ್ತಿದೆ. ಸಂಘದಲ್ಲಿ ಸದ್ಯ 5.29 ಲಕ್ಷ ಸದಸ್ಯರಿದ್ದಾರೆ. ಈಗಾಗಲೇ 26 ಶಿಕ್ಷಣ ಸಂಸ್ಥೆಗಳನ್ನು, 15 ಉಚಿತ ವಿದ್ಯಾರ್ಥಿ ನಿಲಯಗಳು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಿ, ನಡೆಸುತ್ತಿದೆ. 1967ರಲ್ಲಿ ಶ್ರೀಗಂಧ ಕಾವಲ್ ಗ್ರಾಮದ ಸರ್ವೆ ನಂಬರ್ 51ರಲ್ಲಿ ಗೋಲ್ಡನ್ ವ್ಯಾಲಿ ಎಜುಕೇಷನ್ ಟ್ರಸ್ಟ್‌ಗೆ 10 ಎಕರೆ ಗ್ರಾಂಟ್ ಮತ್ತು 15 ಎಕರೆ ಭೋಗ್ಯಕ್ಕೆ (ಲೀಜ್) ಸೇರಿ ಒಟ್ಟು 25 ಎಕರೆ ಜಮೀನು ಮಂಜೂರು ಮಾಡಿದೆ. ಮರು ಸರ್ವೆಯ ನಂತರ ಮಂಜೂರು ಮಾಡಿರುವ ಜಾಗವನ್ನು ಸರ್ವೆ ನಂಬರ್ 128 ಮತ್ತು ಭೋಗ್ಯದ ಜಾಗಕ್ಕೆ 129 ಎಂದು ಸಂಖ್ಯೆ ನೀಡಲಾಗಿದೆ. ಭೋಗ್ಯಕ್ಕೆ ನೀಡಿದ ಜಾಗವನ್ನು ಸಂಘ ಅಭಿವೃದ್ಧಿಪಡಿಸಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ಯಶವಂತಪುರ ಹೋಬಳಿಯ ಶ್ರೀಗಂಧದ ಕಾವಲುನಲ್ಲಿರುವ 15 ಎಕರೆ ಜಾಗವನ್ನು ರಾಜ್ಯ ಒಕ್ಕಲಿಗರ ಸಂಘಕ್ಕೆ ಮುಂಜೂರು ಮಾಡುವಂತೆ ಕಂದಾಯ ಸಚಿವ ಆರ್‌ ಅಶೋಕ ಅವರಿಗೆ ಗುರುವಾರ ಮನವಿ ಸಲ್ಲಿಸಲಾಯಿತು

ಈ ಜಾಗದಲ್ಲಿ ಸಂಘವು ಪ್ರಾಥಮಿಕ ಶಾಲೆ, ಕಾಲೇಜು ನಡೆಸುತ್ತಿದ್ದು, ಸುಮಾರು 2 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 2010ರಲ್ಲಿ ಭೋಗ್ಯ ರದ್ದುಪಡಿಸಲಾಗಿದೆ. ಆದರೆ, ಈ ಜಾಗ ಈಗಲೂ ಸಂಘದ ಸುಪರ್ದಿಯಲ್ಲಿದೆ. ಈ ಜಾಗದಲ್ಲಿ ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಸಂಘ ಉದ್ದೇಶಿಸಿದೆ. ಆದ್ದರಿಂದ, ಜಾಗವನ್ನು ಸಂಘದ ಹೆಸರಿಗೆ ಮಂಜೂರು ಮಾಡಿಕೊಡಬೇಕು ಎಂದೂ ಮನವಿಯಲ್ಲಿ ಕೋರಲಾಗಿದೆ.

ರಾಜ್ಯ ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ, ಸಂಘದ ನಿಕಟಪೂರ್ವ ನಿರ್ದೇಶಕರೂ ಆಗಿರುವ ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ಪ್ರೊ. ಮಲ್ಲಯ್ಯ, ಪ್ರೊ. ನಾಗರಾಜ್, ಅಪ್ಪಾಜಿಗೌಡ, ಎಂ.ಎ. ಆನಂದ್, ಜಾಲಳ್ಳಿ ಎ. ರವಿ, ಮುನೇಗೌಡ, ಗಾಯಕರ ಆಲೂರು ನಾಗಪ್ಪ ಇದ್ದರು.

ಪಿಎಸ್‌ಐ ಅಮಾನತು

ಹಾವೇರಿ: ಬಂಕಾಪುರ ಪೊಲೀಸ್ ಠಾಣೆಯಲ್ಲಿ ಸಾರ್ವಜನಿಕರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಳ್ಳುವ ಮೂಲಕ ಡಿಜಿಪಿ ಆದೇಶ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಪಿಎಸ್‌ಐ ಸಂತೋಷ ಪಾಟೀಲ ಅವರನ್ನು ಎಸ್‌ಪಿ ಹನುಮಂತರಾಯ ಅಮಾನತುಗೊಳಿಸಿದ್ದಾರೆ.

ಠಾಣೆಯಲ್ಲಿ ಯುವಕರ ಗುಂಪು ಪಿಎಸ್‌ಐ ಅವರೊಂದಿಗೆ ಕೇಕ್ ಕತ್ತರಿಸಿ ಅಭಿನಂದಿಸುತ್ತಿರುವ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ಆ.12ರಂದು 'ಸಿ.ಎಂ ತವರು ಜಿಲ್ಲೆಯಲ್ಲೇ ಡಿಜಿಪಿ ಆದೇಶ ಉಲ್ಲಂಘನೆಯ ಆರೋಪ; ಠಾಣೆಯಲ್ಲೇ ಹುಟ್ಟುಹಬ್ಬ ಆಚರಿಸಿಕೊಂಡ ಪಿಎಸ್‌ಐ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.



ಗ್ರಂಥಪಾಲಕರ ದಿನಾಚರಣೆಯ ಪ್ರಯುಕ್ತ ರಾಜ್ಯ ಕೇಂದ್ರ ಗ್ರಂಥಾಲಯವು ಗುರುವಾರ ಆಯೋಜಿಸಿದ ಪುಸ್ತಕ ಪ್ರದರ್ಶನವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಉದ್ಘಾಟಿಸಿದರು. ಸಾಹಿತಿ ಶೂದ್ರ ಶ್ರೀನಿವಾಸ್, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ್ ಎಸ್‌. ಹೊಸಮನಿ, ಹಾಗೂ ನಿವೃತ್ತ ನಿರ್ದೇಶಕ ಪಿ.ವೈ. ರಾಜೇಂದ್ರಕುಮಾರ್ ಇದ್ದರು

ಬಿಎಸ್‌ಎಫ್ ವಾಹನದ ಮೇಲೆ ಗುಂಡಿನ ದಾಳಿ: ಉಗ್ರರ ಸೆರೆ

ಶ್ರೀನಗರ (ಪಿಟಿಐ): ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಸೇರಿದ ಬೆಂಗಾವಲು ವಾಹನದ ಮೇಲೆ ಉಗ್ರರು ಗುಂಡು ಹಾರಿಸಿದ್ದು, ಭದ್ರತಾ ಪಡೆಗಳೂ ಗುಂಡಿನ ಪ್ರತಿದಾಳಿ ನಡೆಸಿದ ಘಟನೆ ಇಲ್ಲಿನ ಕುಲ್‌ಗಂ ಜಿಲ್ಲೆಯಲ್ಲಿ ನಡೆದಿದೆ.

ಬೆಂಗಾವಲು ವಾಹನವು ಜಮ್ಮುವಿನಿಂದ ಶ್ರೀನಗರಕ್ಕೆ ತೆರಳುತ್ತಿರುವಾಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾಲ್ಪೊರಾ ಬಳಿ ದಾಳಿ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಳಿಕೋರರನ್ನು ಸೆರೆಹಿಡಿಯಲಾಗಿದೆ. ಗುಂಡಿನ ದಾಳಿಯಿಂದ ಯಾರಿಗೂ ಪೆಟ್ಟಾಗಿಲ್ಲ. ಹೆಚ್ಚಿನ ಮಾಹಿತಿಗಳನ್ನು ನಿರೀಕ್ಷಿಸಲಾಗಿದೆ ಎಂದು ಪೊಲೀಸ್ ಇಲಾಖೆಯ ವಕ್ತಾರರು ತಿಳಿಸಿದ್ದಾರೆ.

ಹೆಚ್ಚುವರಿ ಭದ್ರತಾ ಪಡೆಗಳು ಮತ್ತು ಹಿರಿಯ ಅಧಿಕಾರಿಗಳು ಸ್ಥಳಕ್ಕೆ ತೆರಳಿದ್ದಾರೆ. ಸಿಆರ್‌ಪಿಎಫ್ ಮತ್ತು ಸೇನೆಯನ್ನು ಕೂಡಾ ಸ್ಥಳಕ್ಕೆ ಕಳುಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

6 ಪೊಲೀಸರಿಗೆ ಕೇಂದ್ರ ಗೃಹ ಸಚಿವಾಲಯದ ಪದಕ

ಪ್ರಜಾವಾಣಿ ವಾರ್ತೆ


2021ನೇ ಸಾಲಿನಲ್ಲಿ 152 ಪೊಲೀಸ್ ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವರ ತನಿಖಾ ಶ್ರೇಷ್ಠ ಪದಕವನ್ನು ನೀಡಿ, ಗೌರವಿಸಲಾಗಿದೆ.


ವರಮಹೇಶ್ ಹೆಗ್ಡೆ
ಮಂಗಳೂರು ಉಪವಿಭಾಗದ ಡಿವೈಎಸ್ಪಿ


ಸಿ. ಬಾಲಕೃಷ್ಣ
ಬಿಡಿಎ ಎಸ್ಐಟಿ ಡಿವೈಎಸ್ಪಿ


ಮನೋಜ್ ಹೊವಳೆ
ಕೆಪಿಎ ಎಸ್ಐಟಿ ಇನ್‌ಸ್ಪೆಕ್ಟರ್


ಎಚ್‌.ಎನ್‌.ಧರ್ಮೇಂದ್ರ
ಬೆಂಗಳೂರು ಸಿಸಿಬಿ ಎಸಿಪಿ


ಟಿ.ವಿ.ದೇವರಾಜ್
ಹೊನ್ನಾಳಿ ವೃತ್ತ ನಿರೀಕ್ಷಕ


ಶಿವಪ್ಪ ಕಮತಗಿ
ಹಳೇ ಹುಬ್ಬಳ್ಳಿ ಠಾಣೆ ಇನ್‌ಸ್ಪೆಕ್ಟರ್

152 ಪೊಲೀಸ್ ಅಧಿಕಾರಿಗಳಿಗೆ ತನಿಖಾ ಶ್ರೇಷ್ಠತೆಯ ಪದಕ

ನವದೆಹಲಿ: 2021ನೇ ಸಾಲಿನಲ್ಲಿ ಕರ್ನಾಟಕದ ಆರು ಪೊಲೀಸ್ ಅಧಿಕಾರಿಗಳು ಸೇರಿದಂತೆ 152 ಪೊಲೀಸ್ ಅಧಿಕಾರಿಗಳಿಗೆ ತನಿಖಾ ಶ್ರೇಷ್ಠತೆಗಾಗಿ ಇರುವ ಕೇಂದ್ರ ಗೃಹ ಸಚಿವರ ಪದಕವನ್ನು ನೀಡಿ ಗೌರವಿಸಲಾಗಿದೆ.

'ಅಪರಾಧ ತನಿಖೆಯ ಉನ್ನತ ವೃತ್ತಿಪರ ಗುಣಮಟ್ಟಕ್ಕಾಗಿ ದೇಶದಾದ್ಯಂತ 28 ಮಹಿಳಾ ಅಧಿಕಾರಿಗಳು ಸೇರಿದಂತೆ ಒಟ್ಟು 152 ಪೊಲೀಸ್ ಅಧಿಕಾರಿಗಳಿಗೆ ಈ ಪದಕವನ್ನು ನೀಡಲಾಗಿದೆ' ಎಂದು ಕೇಂದ್ರ ಗೃಹ ಸಚಿವಾಲಯವು ಗುರುವಾರ ತಿಳಿಸಿದೆ.

ಸಿಬಿಐನ 15 ಮಂದಿ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ಇಲಾಖೆಯ ತಲಾ 11 ಪೊಲೀಸ್ ಅಧಿಕಾರಿಗಳು, ಉತ್ತರ ಪ್ರದೇಶದಲ್ಲಿ 10, ಕೇರಳ ಮತ್ತು ರಾಜಸ್ಥಾನ ಪೊಲೀಸ್ ಇಲಾಖೆಯ ತಲಾ 9 ಅಧಿಕಾರಿಗಳು, ತಮಿಳುನಾಡಿನ 8 ಮತ್ತು ಬಿಹಾರದ 7 ಅಧಿಕಾರಿಗಳು ಹಾಗೂ ಗುಜರಾತ್, ಕರ್ನಾಟಕ ಮತ್ತು ದೆಹಲಿ ಪೊಲೀಸ್ ವಿಭಾಗದಲ್ಲಿ ತಲಾ 6 ಅಧಿಕಾರಿಗಳು ಸೇರಿದಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಅಧಿಕಾರಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಸರ್ಕಾರಿ ಕಾರ್ಯಕ್ರಮಗಳಲ್ಲಿ ಹೂಗುಚ್ಛ, ಹಾರ ನಿಷೇಧಕ್ಕೆ ಖಂಡನೆ

ಆದೇಶ ಹಿಂಪಡೆಯಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಕಾರ್ಯಕ್ರಮಗಳಲ್ಲಿ ಹೂಗುಚ್ಛ ಹಾಗೂ ಹೂವಿನ ಹಾರ ನಿಷೇಧಿಸುವ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿ ದಕ್ಷಿಣ ಭಾರತ ಪುಷ್ಪ ಬೆಳೆಗಾರರ ಸಂಘದ ನೇತೃತ್ವದಲ್ಲಿ ಹೂವಿನ ಬೆಳೆಗಾರರು ಮತ್ತು ಮಾರಾಟಗಾರರು ಹೆಬ್ಬಾಳದ ಪುಷ್ಪ ಹರಾಜು ಕೇಂದ್ರ (ಐಎಫ್‌ಎಬಿ) ಬಳಿ ಗುರುವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ವಿವಿಧ ಪುಷ್ಪ ಬೆಳೆಗಾರರ ಹಾಗೂ ಮಾರಾಟಗಾರರ ಸಂಘಗಳ ಸದಸ್ಯರು ಭಾಗವಹಿಸಿದ್ದರು. ಕೈಯಲ್ಲಿ ಹೂಗುಚ್ಛ, ಹಾರ, ಹಣ್ಣಿನ ಬುಟ್ಟಿಯನ್ನು ಹಿಡಿದುಕೊಂಡು ಪ್ರತಿಭಟಿಸಿದರು.

ದಕ್ಷಿಣ ಭಾರತ ಪುಷ್ಪ ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ.ಅರವಿಂದ್, 'ಸರ್ಕಾರಿ ಕಾರ್ಯಕ್ರಮಗಳಲ್ಲಿ ಹೂಗುಚ್ಛ, ಹಾರ, ಶಾಲು, ಹಣ್ಣಿನ ಬುಟ್ಟಿಯನ್ನು ನೀಡದಂತೆ ಸರ್ಕಾರ ಆದೇಶಿಸಿರುವುದು ಖಂಡನೀಯ. ಇದು, ರಾಜ್ಯದ 7,500 ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪ ಕೃಷಿಯಲ್ಲಿ ತೊಡಗಿಕೊಂಡಿರುವ ಸಾವಿರಾರು ರೈತ ಕುಟುಂಬಗಳ ಮೇಲಿನ ಗದಾಪ್ರಹಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕೋವಿಡ್ ಹೊಡೆತದಿಂದಾಗಿ ಪುಷ್ಪೋದ್ಯಮ ನಿಧಾನವಾಗಿ ಚೇತರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಈ ಆದೇಶ ಮತ್ತೆ ಉದ್ಯಮವನ್ನು ಬುಡಮೇಲು ಮಾಡುವಂತಿದೆ. ಹಲವು ತಿಂಗಳಿನಿಂದ ಯಾವುದೇ ಸಭೆ-ಸಮಾರಂಭಗಳು ನಡೆಯದೆ, ಹೂವು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಈ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಫ್ಲವರ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷ ಶ್ರೀಕಾಂತ್ ಬೊಲ್ಲಪಲ್ಲಿ, 'ಪುಷ್ಪ-ಕೃಷಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ನೀಡುತ್ತಿದೆ. ಹಸಿರು ಮನೆ ಮೂಲಕ ನಡೆಯುತ್ತಿರುವ ಪುಷ್ಪ-ಕೃಷಿಯಲ್ಲಿ ಸಾವಿರಾರು ಕುಟುಂಬಗಳು ಜೀವನ ಕಂಡುಕೊಂಡಿವೆ. ಬೆಂಗಳೂರು ದೇಶದ ಪುಷ್ಪೋದ್ಯಮದ ಪ್ರಮುಖ ಜಾಲವಾಗಿದ್ದು, ಈ ರೀತಿ ನಿಷೇಧ ಹೇರುವ ಮೂಲಕ ಪುಷ್ಪಕೃಷಿಗೆ ಹೊಡೆತ ನೀಡುವುದು ಸರಿಯಲ್ಲ' ಎಂದರು.


ಹೂವು ಬೆಳೆಗಾರರ ಸಂಘಗಳ ಪ್ರತಿನಿಧಿಗಳು ಹೆಬ್ಬಾಳದ ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದ (ಐಎಫ್‌ಎಬಿ) ಬಳಿ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಧರಣಿ ಮಾಡಿ, ಕಣ್ಣೀರಿಟ್ಟ ಬಿಜೆಪಿ ಶಾಸಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವು ಪ್ರತಿನಿಧಿಸುವ ಮೂಡಿಗೆರೆ ತಾಲ್ಲೂಕನ್ನು ಅತಿವೃಷ್ಟಿ ತಾಲ್ಲೂಕುಗಳ ಪಟ್ಟಿಗೆ ಸೇರಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರು ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆ ಇರುವ ಗಾಂಧಿ ಪ್ರತಿಮೆ ಮುಂದೆ ಗುರುವಾರ ಧರಣಿ ನಡೆಸಿದರು.

'ಕಳೆದ ಎರಡು ವರ್ಷಗಳಿಂದ ಮೂಡಿಗೆರೆ ತಾಲ್ಲೂಕು ಪ್ರವಾಹ ಮತ್ತು ಭೂಕುಸಿತಕ್ಕೆ ಒಳಗಾಗಿ ಕ್ಷೇತ್ರದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಮ್ಮದೇ ಸರ್ಕಾರ ಇದ್ದರೂ ಈವರೆಗೆ ಪರಿಹಾರ ಸಿಕ್ಕಿಲ್ಲ' ಎಂದು ಅವರು ಸುದ್ದಿಗಾರರಿಗೆ ಹೇಳಿದರು.

'ಪಕ್ಕದ ಶೃಂಗೇರಿ ತಾಲ್ಲೂಕನ್ನು ಅತಿವೃಷ್ಟಿ ಪಟ್ಟಿಗೆ ಸೇರಿಸಲಾಗಿದೆ. ಈ ಬಗ್ಗೆ ಸರ್ಕಾರವನ್ನು ಸಾಕಷ್ಟು ಬಾರಿ ಆಗ್ರಹಿಸುತ್ತಲೇ ಬಂದಿದ್ದೇನೆ. ಆದರೆ ನನ್ನ ಕೂಗಿಗೆ ಬೆಲೆಯೇ ನೀಡಿಲ್ಲ. ನನ್ನದು ಮೀಸಲು ಕ್ಷೇತ್ರ ಎಂಬ ಕಾರಣಕ್ಕೆ ನಿರ್ಲಕ್ಷ್ಯ ತೋರಿದ್ದಾರೆ' ಎಂದು ಕುಮಾರಸ್ವಾಮಿ ತಿಳಿಸಿದರು.

'ಜಿಲ್ಲಾ ಉಸ್ತುವಾರಿ ಸಚಿವರು ತಾಲ್ಲೂಕಿಗೆ ಭೇಟಿ ನೀಡಿದರೂ ಏನೂ ಪ್ರಯೋಜನ ಆಗುವುದಿಲ್ಲ. ಎನ್‌ಡಿಆರ್‌ಎಫ್ ಪಟ್ಟಿಗೆ ಸೇರಿಸಿ ಪರಿಹಾರವನ್ನು ನೀಡಬೇಕು. ಕಳೆದ ಎರಡು ವರ್ಷಗಳಿಂದ ಪ್ರವಾಹ ಮತ್ತು ಭೂಕುಸಿತಕ್ಕೆ ಮನೆ, ಕಾಫಿ ಮತ್ತು ಅಡಿಕೆ ತೋಟಗಳು ನಾಶವಾಗಿವೆ. ಆದರೆ ಪರಿಹಾರ ಮಾತ್ರ ಸಿಕ್ಕಿಲ್ಲ' ಎಂದು ದೂರಿದರು.

'ನಾನು ಕ್ಷೇತ್ರದ ಜನರಿಗಾಗಿ ಪ್ರತಿಭಟನೆ ಮಾಡಿದ್ದೇನೆಯೇ ಹೊರತು ಬೇರೆ ಕಾರಣಗಳಿಗಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಕಣ್ಣೀರು ಹಾಕಿದ ಶಾಸಕ: ಧರಣಿ ವಿಚಾರ ತಿಳಿದು ಸ್ಥಳಕ್ಕೆ ಬಂದ ಕಂದಾಯ ಸಚಿವ ಆರ್.ಅಶೋಕ ಅವರ ಮುಂದೆ ಕುಮಾರಸ್ವಾಮಿ ಕಣ್ಣೀರು ಹಾಕಿದರು. 'ನಾನು ಹಿರಿಯ ಶಾಸಕ, ನನಗೆ ಹೀಗೆ ಮಾಡುವುದು ಸರಿಯೇ? ಮಂತ್ರಿ ಮಾಡಿ ಎಂದು ಕೇಳಿದ್ದೇನೆಯೇ? ಸಚಿವ ಸ್ಥಾನ ಕೊಡದೇ ಇದ್ದಾಗಲೂ ನಿಮ್ಮೆಲ್ಲರ ಮಾತು ಕೇಳಿಲ್ಲವೇ? ಪಕ್ಷಕ್ಕೆ ನಿಷ್ಠನಾಗಿಯೇ ಇದ್ದೇನಲ್ಲವೇ. ಯಾವತ್ತೂ ಬ್ಲ್ಯಾಕ್ ಮೇಲ್ ಮಾಡಿಲ್ಲ. ನನ್ನ ಮಾತಿಗೆ ಬೆಲೆ ಇಲ್ಲ ಎಂದರೆ ಹೇಗೆ' ಎಂದು ಕುಮಾರಸ್ವಾಮಿ ಕಣ್ಣೀರಿಡುತ್ತಲೇ ಪ್ರಶ್ನಿಸಿದರು.

ಅವರನ್ನು ಸಮಾಧಾನ ಪಡಿಸಿದ ಅಶೋಕ, ಕುಮಾರಸ್ವಾಮಿ ಅವರನ್ನು ತಮ್ಮ ಕಚೇರಿಗೆ ಕರೆದುಕೊಂಡು ಹೋದರು. ತಾಲ್ಲೂಕಿಗೆ ಸಂಬಂಧಿಸಿ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು.



ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರು ವಿಧಾನಸೌಧ ಬಳಿಯ ಗಾಂಧಿ ಪ್ರತಿಮೆ ಮುಂದೆ ಧರಣಿ ನಡೆಸಿದರು

ಸುದ್ದಿ 2 ನಿಮಿಷ

ಅಧಿಕಾರಿಗಳ ಅಸಹಕಾರ: ₹33 ಲಕ್ಷ ಅನುದಾನ ತಿರಸ್ಕಾರ

ಶಿವಮೊಗ್ಗ: ಪವಿತ್ರ-ವಸ್ತ್ರ ಅಭಿಯಾನಕ್ಕೆ ಸರ್ಕಾರ ನಿಗದಿ ಮಾಡಿದ್ದ ₹ 33 ಲಕ್ಷ ಅನುದಾನವನ್ನು ಸಾಗರ ತಾಲ್ಲೂಕಿನ ಭೀಮನಕೋಣೆಯ ಚರಕ ಸಂಸ್ಥೆ ತಿರಸ್ಕರಿಸಿದೆ.

'ಮೂರು ವರ್ಷಗಳ ಹಿಂದೆ ನಿಗದಿಯಾದ ಅನುದಾನವನ್ನು ನೀಡಲು ಕೈಮಗ್ಗ ಹಾಗೂ ಜವಳಿ ಇಲಾಖೆಯ ಅಧಿಕಾರಿಗಳು ಸತಾಯಿಸುತ್ತಿರುವ ಧೋರಣೆ ಖಂಡಿಸಿ ಪ್ರತಿಭಟನಾತ್ಮಕವಾಗಿ ಅನುದಾನ ತಿರಸ್ಕರಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ಮಾರುಕಟ್ಟೆ ವಿಭಾಗದ ಮುಖ್ಯಸ್ಥೆ ಪದ್ಮಶ್ರೀ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೈಮಗ್ಗ ಮತ್ತು ನೈಸರ್ಗಿಕ ಬಣ್ಣಗಾರಿಕೆಯ ಕ್ಷೇತ್ರದಲ್ಲಿ ಚರಕ ಸಂಸ್ಥೆ ಮಾಡಿದ ಸಾಧನೆ ಗಮನಿಸಿದ ರಾಜ್ಯ ಸರ್ಕಾರ 2009ರಲ್ಲಿ ಪವಿತ್ರವಸ್ತ್ರ ಅಭಿಯಾನದ ಪ್ರಾಯೋಗಿಕ ಅನುಷ್ಠಾನ ಘೋಷಿಸಿತು. ಕೈಮಗ್ಗದ ವಸ್ತ್ರಗಳು ದೇಶ, ವಿದೇಶಗಳ ಗ್ರಾಹಕರಿಗೆ ಲಭಿಸಲು, ಉದ್ಯೋಗಾವಕಾಶ ದೊರಕಿಸಲು ನೆರವಾಗುವ ಭರವಸೆ ನೀಡಿತ್ತು, ಸಂಸ್ಥೆ ₹ 55 ಲಕ್ಷ ಹೂಡಿಕೆ ಮಾಡಿತ್ತು, ಸರ್ಕಾರ ₹ 33 ಲಕ್ಷ ಹಣ ಬಿಡುಗಡೆ ಮಾಡುವ ಭರವಸೆ ನೀಡಿತ್ತು. ಮೂರು ವರ್ಷಗಳ ಹಿಂದೆ ಹಣ ಬಿಡುಗಡೆಯಾದರೂ ಹಣ ಸಂಸ್ಥೆಯ ಹೆಸರಿನಲ್ಲಿ ಖಾಸಗಿ ಬ್ಯಾಂಕ್ ಖಾತೆಯಲ್ಲಿ ಇದೆ. ಅಧಿಕಾರಿಗಳು ಹಣ ನೀಡಲು ಅಲೆದಾಡಿಸುತ್ತಲೇ ಇದ್ದಾರೆ. ಸಂಸ್ಥೆ ಹಾಗೂ ಫಲಾನುಭವಿಗಳು ಭ್ರಷ್ಟರಾಗದ ಕಾರಣ ಹಣ ನೀಡಲು ಅಧಿಕಾರಿಗಳು ಮನಸ್ಸು ಮಾಡದಿರಬಹುದು ಎಂದು ಆರೋಪ ಮಾಡಿದರು.



'ಹೆಚ್ಚಿನ ಎತ್ತರ'ಕ್ಕಾಗಿ ವಿಗ್, ಥರ್ಮಾಕೋಲ್ ಪ್ರಯೋಗ!

ಬೆಳಗಾವಿ: ನಾಗರಿಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಇಲ್ಲಿ ಗುರುವಾರ ನಡೆದ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ ವೇಳೆ ವಿಗ್ ಹಾಕಿಕೊಂಡು 'ಹೆಚ್ಚಿನ ಎತ್ತರ' ತೋರಿಸಲು ಮುಂದಾಗಿ 'ನೇಮಕಾತಿ ಪ್ರಾಧಿಕಾರಕ್ಕೆ ಮೋಸ ಮಾಡಲು ಪ್ರಯತ್ನಿಸಿದ' ಕಾರಣದಿಂದ ಇಬ್ಬರ ಮೇಲೆ ಪ್ರಕರಣ ದಾಖಲಾಗಿದೆ.

ಚಿಕ್ಕೋಡಿ ತಾಲ್ಲೂಕಿನ ಜಾಗನೂರದ ಬಾಳೇಶ ದುರದುಂಡಿ ಹಾಗೂ ಮೂಡಲಗಿ ತಾಲ್ಲೂಕು ಕುಲಗೋಡದ ಉಮೇಶ ಎನ್. ಆರೋಪಿಗಳು.

ತಾಲ್ಲೂಕಿನ ಮಚ್ಚೆಯ ಕೆಎಸ್‌ಆರ್‌ಪಿ 2ನೇ ಪಡೆಯಲ್ಲಿ ನಡೆದ ಪರೀಕ್ಷೆ ವೇಳೆ ಬಾಳೇಶ, ವಿಗ್ ಹಾಕಿಕೊಂಡು ಅದರೊಳಗೆ ಥರ್ಮಾಕೋಲ್‌ನ 3 ತುಣುಕುಗಳನ್ನು ಹಾಕಿಕೊಂಡು ಎತ್ತರ ತೋರಿಸಲು ಯತ್ನಿಸಿದ್ದು ಗೊತ್ತಾಗಿದೆ. ಅವರ ವಿರುದ್ಧ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಬ್ಬ ಆರೋಪಿ ಉಮೇಶ ನಗರದ ಡಿ.ಎ.ಆರ್. ಮೈದಾನದಲ್ಲಿ ನಡೆದ ಪರೀಕ್ಷೆ ಕಾಲಕ್ಕೆ ಸಿಕ್ಕಿಬಿದ್ದಿದ್ದಾರೆ. ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ ಎಂದು ಡಿಸಿಪಿ ವಿಕ್ರಂ ಅಮಟೆ ತಿಳಿಸಿದ್ದಾರೆ.


ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದರಿಂದ ಸುಟ್ಟಿರುವ ಕಾರು

ಶಾಸಕ ಸತೀಶ್ ರೆಡ್ಡಿ ಕಾರುಗಳಿಗೆ ಬೆಂಕಿ

ಬೆಂಗಳೂರು: ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ. ಸತೀಶ್ ರೆಡ್ಡಿ ಅವರ ಮನೆ ಅಂಗಳಕ್ಕೆ ನುಗ್ಗಿದ್ದ ದುಷ್ಕರ್ಮಿಗಳು, ಎರಡು ಕಾರುಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ.

ಬುಧವಾರ ತಡರಾತ್ರಿ ಈ ಘಟನೆ ನಡೆದಿದ್ದು, ಬೊಮ್ಮನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸತೀಶ್ ರೆಡ್ಡಿ ಮನೆ ಎದುರು ಕಾರುಗಳನ್ನು ನಿಲ್ಲಿಸಲಾಗಿತ್ತು. ಪ್ರವೇಶ ದ್ವಾರದಲ್ಲಿ ಭದ್ರತಾ ಸಿಬ್ಬಂದಿ ಇದ್ದರು. ರಾತ್ರಿ 1 ಗಂಟೆ ಸುಮಾರಿಗೆ ದುಷ್ಕರ್ಮಿಗಳು, ಹಿಂದಿನ ದ್ವಾರದಿಂದ ಮನೆಯ ಅಂಗಳಕ್ಕೆ ನುಗ್ಗಿದ್ದರು. ಕಾರುಗಳಿಗೆ ಪೆಟ್ರೋಲ್ ಎರಚಿ ಬೆಂಕಿ ಹಚ್ಚಿದ್ದರು. ಫಾರ್ಚ್ಯೂನರ್ ಹಾಗೂ ಜೀಪ್ ಶೇ 70ರಷ್ಟು ಸುಟ್ಟುಹೋಗಿವೆ ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರುಗಳು ಬೆಂಕಿಯಿಂದ ಹೊತ್ತಿ ಉರಿಯುತ್ತಿದ್ದವು. ಕಾರಿನ ಬ್ಯಾಟರಿ ಸ್ಫೋಟಗೊಂಡು ದೊಡ್ಡ ಶಬ್ದವಾಗಿತ್ತು. ಅವಾಗಲೇ ಭದ್ರತಾ ಸಿಬ್ಬಂದಿ ಹಾಗೂ ಸ್ಥಳೀಯರು, ಉರಿಯುತ್ತಿದ್ದ ಕಾರು ನೋಡಿ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಎರಡೂ ಕಾರುಗಳು ಶೇ 70ರಷ್ಟು ಸುಟ್ಟಿವೆ' ಎಂದೂ ಮೂಲಗಳು ತಿಳಿಸಿವೆ.

ಕ್ಯಾಮೆರಾದಲ್ಲಿ ಸೆರೆ: 'ಎರಡು ಬೈಕ್‌ನಲ್ಲಿ ಬಂದಿದ್ದ ನಾಲ್ವರು ಕೃತ್ಯ ಎಸಗಿ ಪರಾರಿಯಾಗಿದ್ದಾರೆ. ಮನೆ ಹಾಗೂ ಸಮೀಪದಲ್ಲಿರುವ ಪೆಟ್ರೋಲ್ ಬಂಕ್‌ನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿಗಳ ದೃಶ್ಯ ಸೆರೆಯಾಗಿದೆ. ಆದರೆ, ಮುಖ ಚಹರೆ ಸ್ಪಷ್ಟವಾಗಿಲ್ಲ. ಈ ಬಗ್ಗೆ ತಜ್ಞರ ನೆರವು ಪಡೆಯಲಾಗುವುದು' ಎಂದೂ ಮೂಲಗಳು ಹೇಳಿವೆ.

'ಶಿವನ ಮೂರ್ತಿ ವಿಚಾರವಾಗಿ ಪ್ರತಿಭಟನೆ'

'ಬೇಗೂರು ಕೆರೆ ದಡದಲ್ಲಿ ಶಿವನ ದೇವಸ್ಥಾನ ಹಾಗೂ ಬೃಹತ್ ಮೂರ್ತಿ ಇದೆ. ಇಲ್ಲಿ ಪೂಜೆ ಮಾಡದಂತೆ ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು ಎನ್ನಲಾಗಿದೆ. ಇದನ್ನು ಖಂಡಿಸಿ ಸತೀಶ್ ರೆಡ್ಡಿ ಹಾಗೂ ಇತರರು, ಕೆರೆ ಅಂಗಳದಲ್ಲಿ ಬುಧವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದ್ದರು. ಇದುವೇ ದಾಳಿಗೆ ಕಾರಣವಿರುವ ಅನುಮಾನವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗೃಹ ಸಚಿವ ಭೇಟಿ: ಸತೀಶ್ ರೆಡ್ಡಿ ಅವರ ಮನೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ, ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಭೇಟಿ ನೀಡಿದರು.

ಆರಗ ಜ್ಞಾನೇಂದ್ರ ಮಾತನಾಡಿ, 'ಇದೊಂದು ಸಾಮಾನ್ಯ ಘಟನೆಯಲ್ಲ. ಇದರಿಂದ ನನಗೂ ನೋವಾಗಿದೆ. ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ' ಎಂದರು.

ಅಶ್ವತ್ಥನಾರಾಯಣ, 'ಶಾಸಕರನ್ನೇ ಗುರಿಯಾಗಿಸಿಕೊಂಡು ನಡೆಸಿರುವ ದಾಳಿ ಇದಾಗಿದೆ. ಬೆಂಕಿಯನ್ನು ಮನೆಗೆ ಹಬ್ಬಿಸುವ ಪೂರ್ವಯೋಜಿತ ಷಡ್ಯಂತ್ರವಿರುವಂತೆ ಕಾಣುತ್ತಿದೆ' ಎಂದರು.


ಪೊಲೀಸ್ ಕಮಿಷನರ್ ಕಮಲ್ ಪಂತ್, ಹೆಚ್ಚುವರಿ ಪೊಲೀಸ್ ಕಮಿಷನರ್ ಮುರುಗನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಹೋರ್ಡಿಂಗ್‌ಗಳನ್ನು ಹಾಕಬೇಡಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಉಡುಪಿ: ರಸ್ತೆ ಬದಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮುಖ್ಯಮಂತ್ರಿಗೆ ಶುಭ ಕೋರುವಂತಹ ಹೋರ್ಡಿಂಗ್‌ಗಳನ್ನು ಹಾಕಬಾರದು ಎಂದು ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗೆ ಮನವಿ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಹೇಳಿದರು.

ಮುಖ್ಯಮಂತ್ರಿಯು ನಾಡಿನ ಸೇವಕ ಎಂಬ ಭಾವನೆಗೆ ಧಕ್ಕೆಯಾಗಬಾರದು ಎಂಬುದು ಇದರ ಉದ್ದೇಶ ಎಂದು ಅವರು ತಿಳಿಸಿದರು.



ಶಂಕರ್ ಸಿಂಗ್

ಕನ್ಯಾಕುಮಾರಿಯ 'ಕನ್ನಿಕಾ' ಈ ಆಸಿಯಾ

ಅಭಿಲಾಷ್ ಪಿ.ಎಸ್.

ಕಿರುತೆರೆ

ಕಳೆದ ವರ್ಷವಷ್ಟೇ ಪದವಿ ಶಿಕ್ಷಣ ಪೂರೈಸಿ, ಮಾಡೆಲಿಂಗ್ ಕ್ಷೇತ್ರದ ಮುಖಾಂತರ ವೃತ್ತಿ ಆರಂಭಿಸಿದ 'ಆಸಿಯಾ', ಇದೀಗ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಕನ್ಯಾಕುಮಾರಿ' ಧಾರಾವಾಹಿ ಮುಖಾಂತರ ಕಿರುತೆರೆಗೆ ಮೊದಲ ಹೆಜ್ಜೆ ಇರಿಸಿದ್ದಾರೆ. ತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎಂಬ ಕನಸು ಹುಟ್ಟಿಕೊಂಡ ಬಗೆ ಹಾಗೂ ಈ ಪಯಣದ ಬಗ್ಗೆ ಅವರು 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದು ಹೀಗಂದರು.

ಆತ್ಮವಿಶ್ವಾಸ ತುಂಬಿದ್ದು ಮಾಡೆಲಿಂಗ್

ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲೇ. ನನ್ನ ತಂದೆಯ ಮೂಲ ಊರು ದಾವಣಗೆರೆ. ನಾನು ನ್ಯೂ ಕಾರ್ಮೆಲ್‌ನಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ, ಪದವಿಪೂರ್ವ ಶಿಕ್ಷಣ ಹಾಗೂ ಡಿಗ್ರಿಯನ್ನು ಜಾಲಹಳ್ಳಿ ಸಮೀಪದ ಸೈಂಟ್ ಕ್ಲಾರೆಟ್ ಕಾಲೇಜಿನಲ್ಲಿ ಪೂರ್ಣಗೊಳಿಸಿದೆ. ಕಾಲೇಜು ದಿನಗಳಿಂದಲೂ ನನಗೆ ಡ್ಯಾನ್ಸ್‌ನಲ್ಲಿ ಬಹಳ ಆಸಕ್ತಿ ಇತ್ತು. ಇದರಿಂದಾಗಿ ನನಗೆ ನಟನೆಯಲ್ಲೂ ಆಸಕ್ತಿ ಹುಟ್ಟಿಕೊಂಡಿತು. ತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎಂಬ ಕನಸು ಹುಟ್ಟಿದ್ದು ಆ ಸಂದರ್ಭದಲ್ಲೇ. ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೆ. ಫ್ಯಾಷನ್ ಶೋ ತಂಡದ ನಾಯಕಿಯಾಗಿ ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿರಿಸಿದ್ದೆ. ಮಾಡೆಲಿಂಗ್ ನನಗೆ ಆತ್ಮವಿಶ್ವಾಸ ತುಂಬಿತ್ತು. ಸಣ್ಣ ಪ್ರಾಯದಲ್ಲೇ ಏನಾದರೂ ಸಾಧಿಸಬೇಕು ಎನ್ನುವ ಛಲವಿತ್ತು. ಕುಟುಂಬದವರು ಮೊದಲು ಓದಿನತ್ತ ಗಮನಹರಿಸಲು ಹೇಳಿದರೂ ನನ್ನ ಉತ್ಸಾಹ ನೋಡಿ ನಂತರದಲ್ಲಿ ಅವರೂ ಪ್ರೋತ್ಸಾಹಿಸಿದರು. ಮೊದಲಿಗೆ ಮಾಡೆಲಿಂಗ್‌ನಲ್ಲಿ ಹಲವು ಅವಕಾಶಗಳು ದೊರೆತವು. ಇದಾದ ನಂತರ ಕಿರುತೆರೆ, ಸಿನಿಮಾದಲ್ಲಿ ಒಂದು ಅವಕಾಶ ಸಿಕ್ಕಿದರೆ ಸಾಕು ಎಂದು ಹಲವು ಕಡೆ ಆಡಿಷನ್ ನೀಡಿದ್ದೆ. ಆದರೆ ಇವೆಲ್ಲವೂ ವ್ಯರ್ಥವಾಗಿದ್ದವು.

'ಕನ್ನಿಕಾ' ಪಾತ್ರದ ಬಗ್ಗೆ

ಈ ಪಾತ್ರದಲ್ಲಿ ನಟನೆಗೆ ಬಹಳ ಅವಕಾಶವಿದೆ. ಅಷ್ಟೇ ಸವಾಲು ಕೂಡಾ ಇದೆ. 'ಕನ್ನಿಕಾ' ಎನ್ನುವ ಪಾತ್ರ ಹಾಗೂ ಅವಳೊಳಗಿನ ಇನ್ನೊಂದು ಶಕ್ತಿಯೂ(ಟ್ರಾನ್ಸ್) ಈ ಪಾತ್ರದ ಸವಾಲನ್ನು ಮತ್ತಷ್ಟು ಹೆಚ್ಚಿಸಿದೆ. ಶ್ರೀಮಂತ ಕುಟುಂಬದಿಂದ ಬಂದರೂ 'ಕನ್ನಿಕಾ' ಸರಳವಾಗಿ, ಲವಲವಿಕೆಯಿಂದ ಇರುವ, ಸಂಸ್ಕೃತಿಯನ್ನು ಪ್ರತಿನಿಧಿಸುವ, ವೈಜ್ಞಾನಿಕವಾಗಿ ಯೋಚಿಸುವ ಹುಡುಗಿ. ಪ್ರತಿ ದಿನ ನಾನು ಈ ಪಾತ್ರಕ್ಕೆ ತಯಾರಾಗಬೇಕು. ನಾನು ಕಲಾವಿದೆಯಾಗಿ ಕೆಲಸಕ್ಕೆ ಹೋದಾಗ ನಟನೆಯಷ್ಟೇ ನನ್ನ ಗುರಿ. ನನ್ನ ವೈಯಕ್ತಿಕ ಜೀವನವೇ ಬೇರೆ. ಚಿತ್ರೀಕರಣಕ್ಕೆ ತೆರಳಿದ ಸಂದರ್ಭದಲ್ಲಿ ಅಂದಿನ ಆ ದೃಶ್ಯದಲ್ಲಿ ನನ್ನ ಪಾತ್ರಕ್ಕೆ ನ್ಯಾಯ ಒದಗಿಸುವುದೇ ನನ್ನ ಆದ್ಯತೆ. ನಾವೆಲ್ಲ ಒಟ್ಟಿಗೇ ಇರುವು ಕಾರಣ ಎಲ್ಲ ಸಂಸ್ಕೃತಿಯನ್ನು, ಆಚರಣೆಯನ್ನು ನಾನು ಗಮನಿಸಿದ್ದೇನೆ. ನನ್ನ ಜೊತೆ ಇರುವ ಹಿರಿಯ ಕಲಾವಿದರೂ ನನಗೆ ಈ ವಿಚಾರದಲ್ಲಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಕಲಾವಿದೆಯಾಗಿ ನಾನು ಹಲವು ಪಾತ್ರಗಳಿಗೆ ಜೀವ ತುಂಬಬೇಕು ಅಲ್ಲವೇ. ಸದ್ಯಕ್ಕೆ ಈ ಧಾರಾವಾಹಿಯ ಮೇಲಷ್ಟೇ ನನ್ನ ಗುರಿ ಇದ್ದು, ಮುಂದೆ ಸಮಯ ಸಿಕ್ಕಾಗ ಮಾಡೆಲಿಂಗ್ ಜೊತೆಗೆ ಅರಸಿ ಬಂದ ಅವಕಾಶಗಳನ್ನು ಸ್ವೀಕರಿಸುತ್ತೇನೆ.



ಭರವಸೆ ಕಳೆದುಕೊಂಡಿದ್ದೆ

ನಾನು ನಟನೆಯ ತರಬೇತಿಗಾಗಿ ಉಷಾ ಭಂಡಾರಿ ಅವರ ಆ್ಯಪ್ ಇನ್‌ಸ್ಟಿಟ್ಯೂಟ್ ಸೇರಿಕೊಂಡೆ. ಮೂರು ತಿಂಗಳ ಕೋರ್ಸ್ ಅವಧಿಯಲ್ಲೂ ಹಲವು ಕಡೆ ಆಡಿಷನ್ ನೀಡಿದೆ. ಕೆಲವೊಮ್ಮೆ ಭರವಸೆಯನ್ನೇ ಕಳೆದುಕೊಂಡಿದ್ದೆ. ಎಷ್ಟೇ ಪ್ರಯತ್ನ ಮಾಡಿದರೂ ಕನಸು ಈಡೇರುತ್ತಿಲ್ಲ ಎಂದುಕೊಳ್ಳುತ್ತಿದ್ದೆ. ಆರ್ಥಿಕವಾಗಿ ಯಾರ ಮೇಲೆಯೂ ಆಶ್ರಯಿಸಲು ನನಗೆ ಇಷ್ಟವಿಲ್ಲ. ಹೀಗಾಗಿ ಸ್ಟಾರ್ಟ್‌ಅಪ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದೆ. ಆದರೆ ನಟನೆ ನನ್ನನ್ನು ಸೆಳೆಯುತ್ತಿತ್ತು. ಈ ಸಂದರ್ಭದಲ್ಲಿ ಸಿಕ್ಕ ಅವಕಾಶ 'ಕನ್ಯಾಕುಮಾರಿ'. ರಘು ಚರಣ್ ಅವರು ನನ್ನ ನಟನೆಯ ವಿಡಿಯೊ ನೋಡಿ, ಆಡಿಷನ್‌ಗೆ ಆಹ್ವಾನಿಸಿದ್ದರು. ಈ ಪ್ರಾಜೆಕ್ಟ್ ಬೇಕೇ ಬೇಕು ಎನ್ನುವ ಹಂಬಲ ನನ್ನಲ್ಲಿ ಇತ್ತು. ಆಯ್ಕೆ ಆದಾಗ ಆದ ಖುಷಿಗೆ ಪಾರವೇ ಇಲ್ಲ.

> ಕನ್ನಡದ ಪ್ರಯೋಗಶೀಲ ನಿರ್ಮಾಪಕ, ನಿರ್ದೇಶಕ ಡಿ. ಶಂಕರ್ ಸಿಂಗ್ ಅವರು ಬದುಕಿದ್ದರೆ ಆ. 15ರಂದು ನೂರು ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದರು. ಟೀ ಮಾರುತ್ತಿದ್ದ ಯುವಕನೊಬ್ಬ ಉದ್ಯಮಿ, ರಾಜಕೀಯ ಮುಂದಾಳು, ಸ್ವಾತಂತ್ರ್ಯ ಹೋರಾಟಗಾರ, ಚಿತ್ರ ಪ್ರದರ್ಶಕ, ನಿರ್ಮಾಪಕ, ನಿರ್ದೇಶಕ ಆಗಿ ಕನ್ನಡ ಚಿತ್ರಗಳನ್ನು ಕನ್ನಡದ ನೆಲದಲ್ಲೇ ಮಾಡಿ, ಅದಕ್ಕೊಂದು ಆರ್ಥಿಕತೆ ಸೃಷ್ಟಿಸಿದ ಕಥೆ ಅನನ್ಯ. ಅಂತಹ ಕಥಾನಾಯಕನ ಬದುಕಿನ ಕೆಲವು ಪುಟಗಳು ಇಲ್ಲಿವೆ...

ನೂರೊಂದು ನೆನಪು ಎದೆಯಾಳದಿಂದ...

ಡಿ. ರಾಜೇಂದ್ರಸಿಂಗ್ ಬಾಬು

ಸ್ಮರಣೆ

ಅಪ್ಪ ಹುಟ್ಟಿದ್ದು 1921ರ ಆಗಸ್ಟ್ 15ರಂದು. ಆಗಸ್ಟ್ 15 ಅಂದರೆ ಅವರಿಗೆ ತಮ್ಮ ಹುಟ್ಟುಹಬ್ಬ ಮಹತ್ವದ್ದಾಗಿರಲಿಲ್ಲ. ಸ್ವಾತಂತ್ರ್ಯೋತ್ಸವವೇ ಮುಖ್ಯ ಆಗಿತ್ತು.

ಅರಸಿಕೆರೆಯ ಪೇಟೆ ಬೀದಿಯಲ್ಲಿ ನಮ್ಮದೊಂದು ದೊಡ್ಡ ಮನೆ ಇತ್ತು. ನಾಡಿನ ಹಲವಾರು ರಾಜಕೀಯ ನಾಯಕರು ಅಲ್ಲಿಗೆ ಬರುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಆಗಿನ ಕಾಂಗ್ರೆಸ್ ಮೇಲೆ ಅತ್ಯಂತ ಅಭಿಮಾನ ಇತ್ತಲ್ಲ. ಈ ರಾಜಕೀಯ ನಾಯಕರಿಗೆ ನಮ್ಮ ಮನೆಯಲ್ಲೇ ಊಟ, ವಾಸ್ತವ್ಯ ಇತ್ತು. ನಮ್ಮ ದೊಡ್ಡಪ್ಪ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದರು.

ವೈದ್ಯರಾಗಬೇಕಾದವರು ಟೀ ಮಾರಿದರು: ನಮ್ಮ ಅಪ್ಪನನ್ನು ವೈದ್ಯರನ್ನಾಗಿಸಬೇಕು ಎಂದು ಅವರ ಹೆತ್ತವರು ಕನಸು ಕಂಡಿದ್ದರು. ಅದಕ್ಕಾಗಿ ಅವರನ್ನು ಅವರ ಅಪ್ಪ ಕೋಲ್ಕತ್ತಕ್ಕೆ ಕಳುಹಿಸಿದ್ದರು. ಆದರೆ ಅವರು ಅರ್ಧಕ್ಕೆ ಓದು ನಿಲ್ಲಿಸಿ ವಾಪಸಾದರು. ಇಲ್ಲಿ ಬ್ರೂಕ್ ಬಾಂಡ್ ಕಂಪನಿಯ ಟೀ ಮಾರಾಟದ ಕೆಲಸ ಮಾಡಿದರು. ಹಾಗೆ ಸುತ್ತಾಟ ಮುಗಿಸಿದ ಬಳಿಕ ಅರಸಿಕೆರೆಯಲ್ಲಿ ವಿಠ್ಠಲಾಚಾರ್ ಅವರ ಹೋಟೆಲ್‌ನಲ್ಲಿ ಟೀ, ದೋಸೆ ಸೇವಿಸುತ್ತಿದ್ದರು. ಹೀಗೆ ಅಪ್ಪ ಮತ್ತು ವಿಠ್ಠಲಾಚಾರ್ ಸ್ನೇಹ ಗಟ್ಟಿಯಾಯಿತು. ವಿಠ್ಠಲಾಚಾರ್ ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದವರೇ. ಅರಸಿಕೆರೆ ಆಗ ರಾಜಕೀಯದ ಕೇಂದ್ರ ಸ್ಥಾನವಾಗಿತ್ತು.

ಅದ್ಯಾಕೋ ಅಪ್ಪನಿಗೆ ಟೀ ಕಂಪನಿಯ ಉದ್ಯೋಗ ಬೇಸರ ತರಿಸಿತು. ಆಗ ಅವರು ಮತ್ತು ವಿಠ್ಠಲಾಚಾರ್ 1945ರಲ್ಲಿ ಎರಡು ಟೂರಿಂಗ್ ಟಾಕೀಸ್ ಶುರು ಮಾಡಿದರು. ಒಂದು ಮಹಾತ್ಮ ಟೂರಿಂಗ್ ಟಾಕೀಸ್, ಮತ್ತೊಂದು ನೆಹರು ಟೂರಿಂಗ್ ಟಾಕೀಸ್. ಅಪ್ಪ ಅಥವಾ ವಿಠ್ಠಲಾಚಾರ್ ಬೆಂಗಳೂರಿಗೆ ಬಂದು ಇಲ್ಲಿಂದ ಸಿನಿಮಾ ರೀಲುಗಳ ಡಬ್ಬ ಹೊತ್ತುಕೊಂಡು ಬರುತ್ತಿದ್ದರು. ಇಲ್ಲಿನ ವಿತರಕರ ಬಳಿ ಚೌಕಾಸಿ ಮಾಡಿ ರೀಲುಗಳನ್ನು ತರುವುದು ಅಂದಿನ ವ್ಯವಹಾರದ ಭಾಗ. ಈ ಟೂರಿಂಗ್ ಟಾಕೀಸ್ ಮೂಲಕ ಒಂದಿಷ್ಟು ದುಡ್ಡೂ ಬಂತು.

ಆ ಸಿನಿಮಾಗಳನ್ನು ನೋಡುತ್ತಾ ಸಾಕಷ್ಟು ಅನುಭವಗಳೂ ಅವರಿಗಾದವು. ಆಗ ನಾವ್ಯಾಕೆ ಬೆಂಗಳೂರಿನಲ್ಲೊಂದು ಥಿಯೇಟರ್ ಮಾಡಬಾರದು ಎಂದು ಯೋಚಿಸಿದರು. ಆಗ ಬೆಂಗಳೂರಿನಲ್ಲಿ ಪ್ರಭಾತ್ ಥಿಯೇಟರ್ ಮಾರಾಟಕ್ಕಿತ್ತು. ಅದನ್ನು ಖರೀದಿಸಲೆಂದು ಮುಂಗಡ ಹಿಡಿದುಕೊಂಡು ಬರುತ್ತಿದ್ದರು. ಆಗ ಹಾಸನದ ಬಳಿ ಸಿಕ್ಕ ಒಬ್ಬರು ನಿರ್ದೇಶಕರು ಇವರ ಬಳಿ ಹಣ ಇರುವುದನ್ನು ತಿಳಿದು, ಒಂದು ಸಿನಿಮಾ ಮಾಡೋಣ ಎಂದು ಇವರ ಮನಸ್ಸು ಬದಲಾಯಿಸಿದರು. ಅದು ಮೈಸೂರಿಗೆ ಬರಲು ಒಂದು ಟರ್ನಿಂಗ್ ಪಾಯಿಂಟ್. ಆಗ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೊ ಇತ್ತು. ಅದು ರಾಜ್ಯದ ಮೊದಲ ಸ್ಟುಡಿಯೊ. ಅಲ್ಲಿಯೇ ಶೂಟಿಂಗ್‌ಗಳು ನಡೆಯುತ್ತಿದ್ದವು.

'ಕೃಷ್ಣಲೀಲಾ'ದ ನಿರ್ದೇಶಕರು ಎಲ್ಲೋ ಮೋಸ ಮಾಡುತ್ತಿರುವುದು ಗಮನಕ್ಕೆ ಬಂತು. ಕೊನೆಗೆ ಅರಸಿಕೆರೆಯ ಒಂದಿಷ್ಟು ರೌಡಿಗಳನ್ನು ಕರೆಸಿ ಚೆನ್ನಾಗಿ ರುಬ್ಬಿ ಅಂತೂ ಇಂತೂ ಒಂದಿಷ್ಟು ಕೆಲಸ ಮಾಡಿಸಿದರು. ಹಾಗೂ ಹೀಗೂ ಚಿತ್ರ ಮೂಡಿ ಬಂತು. ಈ ಚಿತ್ರದಿಂದ ಸ್ವಲ್ಪ ನಷ್ಟವೇ ಆಯಿತು. ಆದರೆ, ಇದು ಮೇಡ್ ಇನ್ ಕರ್ನಾಟಕ, ಮೇಡ್ ಇನ್ ಮೈಸೂರು ಸಿನಿಮಾ.

ಆಗ ಕನ್ನಡ ಚಿತ್ರಗಳಿಗೆ ಥಿಯೇಟರ್‌ಗಳೇ ಸಿಗುತ್ತಿರಲಿಲ್ಲ. ಹಿಂದಿ, ತಮಿಳು ಚಿತ್ರಗಳಿಗಷ್ಟೇ ಅವಕಾಶ ಇತ್ತು. ಆಗ ಕೆ.ಸಿ. ರೆಡ್ಡಿ ಅವರ ಸ್ನೇಹ ಬಳಸಿ ಮೂವಿ ಲ್ಯಾಂಡ್ ಚಿತ್ರಮಂದಿರದಲ್ಲಿ 'ಕೃಷ್ಣಲೀಲಾ' ಬಿಡುಗಡೆ ಮಾಡಿಸಿದರು.

ಹೀರೊ ಅವಕಾಶ ಕಳೆದುಕೊಂಡ ದೇವರಾಜ ಅರಸು!: ಭಕ್ತ ರಾಮದಾಸ ಸಿನಿಮಾ ಮಾಡಲು ಮುಂದಾದಾಗ ಡಿ. ದೇವರಾಜ ಅರಸು ಅವರನ್ನು ಹೀರೊ ಮಾಡಲು ಎಲ್ಲ ಸಿದ್ಧತೆಗಳು ಮಾಡಿದ್ದರು. ಕೊನೆಗೆ ದೇವರಾಜ ಅರಸು ಅವರಿಗಿಂತ ಅವರ ಸಹೋದರ ಕೆಂಪರಾಜ ಅರಸು ಚೆನ್ನಾಗಿದ್ದಾರಲ್ಲಾ ಅಂದುಕೊಂಡು ಅವರನ್ನು ಹೀರೊ ಮಾಡಿದರು.

ಮುಂದೆ 'ನಾಗಕನ್ನಿಕೆ' ಅನ್ನುವ ಸಿನಿಮಾ ಮಾಡಿದರು. ಅದು ಸೂಪರ್ ಡ್ಯೂಪರ್ ಹಿಟ್ ಆಯಿತು. ತಮಿಳು, ತೆಲುಗಿಗೆ ಡಬ್ ಆಯಿತು. ಆಗಲೇ ಪ್ಯಾನ್ ಇಂಡಿಯಾ ಸಿನಿಮಾ ಪ್ರಯೋಗ ನಡೆದಿತ್ತು. ಮುಂದೆ ಅಪ್ಪ ತಾವೇ ನಿರ್ದೇಶನಕ್ಕೆ ಇಳಿದರು.

ಅಪ್ಪನದೇ ನಿರ್ದೇಶನದ 'ಜಗನ್ಮೋಹಿನಿ' ಆ ಕಾಲದ ಸೆನ್ಸೇಷನಲ್ ಹಿಟ್ ಆಗಿತ್ತು. ದಾವಣಗೆರೆಯಲ್ಲಿ ಎಮ್ಮೆ ಮಾರಿ ಆ ಸಿನಿಮಾ ನೋಡುತ್ತಿದ್ದದ್ದೂ ಇತ್ತಂತೆ. ವಕೀಲರೊಬ್ಬರು ಆ ಚಿತ್ರ ನಿಷೇಧಿಸುವಂತೆ ಕೋರಿ ಕೇಸು ದಾಖಲಿಸಿದ್ದರು. ಕೊನೆಗೆ ನಿರ್ಬಂಧ ತೆರವುಗೊಳಿಸಲಾಯಿತು. ಚಿತ್ರ ಮತ್ತೆ ನೂರು ದಿನ ಓಡಿತು.

ಔಟ್‌ಡೋರ್ ಯೂನಿಟ್, ಪೂರ್ಣ ಪ್ರಮಾಣದ ಪರಿಕರ ಇದ್ದದ್ದು ಮೊದಲು ನಮ್ಮ ಮಹಾತ್ಮ ಪಿಕ್ಚರ್ಸ್ ಕಂಪನಿಯಲ್ಲೇ. ವಿಠ್ಠಲಾಚಾರ್ ಮುಂದೆ ತೆಲುಗು ಚಿತ್ರರಂಗಕ್ಕೆ ಹೋದರು. ತಂದೆಯವರು ಇಲ್ಲೇ ಉಳಿದರು. ಮೈಸೂರಿನಲ್ಲಿ ಇದ್ದೇ 50 ಚಿತ್ರಗಳನ್ನು ಮಾಡಿದರು.

'ಪ್ರಭುಲಿಂಗ ಲೀಲೆ' ಕನ್ನಡದ ಮೊದಲ ಕಲರ್ ಚಿತ್ರ. ಆಗಲೇ ಆ ಪ್ರಯೋಗ ನಡೆದಿತ್ತು. 'ಶಿವಶರಣೆ ನಂಬಿಯಕ್ಕ' ಚಿತ್ರದ ಕಥೆಯನ್ನು ಕತೆಗಾರರು ನಮಗೂ ಬಿ.ಆರ್. ಪಂತುಲು ಅವರಿಗೂ ಕೊಟ್ಟಿದ್ದರು. ಆದರೆ, ಇದನ್ನು ಸವಾಲಾಗಿ ಸ್ವೀಕರಿಸಿದ ತಂದೆಯವರು, 21 ದಿನಗಳಲ್ಲಿ ಶೂಟಿಂಗ್ ಮುಗಿಸಿ ಬಿಡುಗಡೆ ಮಾಡಿದರು. ಅದಕ್ಕೆ ಅದ್ಭುತ ಯಶಸ್ಸು ಸಿಕ್ಕಿತು.

'ಧರ್ಮಸ್ಥಳ ಮಹಾತ್ಮೆ' ಚಿತ್ರದ ಪ್ರೀಮಿಯರ್ ಷೋಗೆ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪ ಅವರು ಬಂದಿದ್ದರು. ಆ ಸಂದರ್ಭ ಕನ್ನಡ ಚಿತ್ರರಂಗದ ಸಾಮರ್ಥ್ಯ, ಅದರ ಬೆಳವಣಿಗೆಯ ಅಗತ್ಯ ವಿವರಿಸಿ ಕನ್ನಡ ಚಿತ್ರಗಳಿಗೆ ಸಬ್ಸಿಡಿ (1963ರಲ್ಲಿ) ಕೊಡಿಸುವಂತೆ ಅಪ್ಪ ಮನವಿ ಮಾಡಿದರು. ಸಬ್ಸಿಡಿ ನೀಡುವ ಪರಿಪಾಟ ಇಂದಿಗೂ ಮುಂದುವರಿದಿದೆ.

ಈಗ ನೋಡುವ ತಂತ್ರಜ್ಞಾನದ ಬಹುಪಾಲು ಪ್ರಯೋಗವನ್ನು ಆವತ್ತೇ ಮಾಡಿದ್ದರು ಅಪ್ಪ. ಅವರಿಗೆ ಅಗಾಧವಾದ ಗ್ರಹಣ ಶಕ್ತಿ ಇತ್ತು. ನನ್ನ ಸಿನಿಮಾ ಬದುಕಿಗೆ ಬುನಾದಿ ಬಿದ್ದಿದ್ದು ಅವರಿಂದಲೇ. ಅವರು ಮೊದಲು ನನ್ನನ್ನು ಕಥೆ ಬರೆಯಲು ಹಚ್ಚಿದರು. ಹುಣಸೂರು ಕೃಷ್ಣಮೂರ್ತಿ, ತರಾಸು ಸೇರಿದಂತೆ ಹಲವರ ಜೊತೆ ಸ್ಕ್ರಿಪ್ಟ್ ಬರೆಯುತ್ತಿದ್ದೆ. ಸಹನಿರ್ದೇಶನ ಮಾಡಲು ಕೊಡುತ್ತಿದ್ದರು. ಕಾರ್ ಡ್ರೈವರ್ ಆಗಿಯೂ ಕೆಲಸ ಮಾಡಿದ್ದೆ.

ಒಬ್ಬ ಕುಟುಂಬದ ಯಜಮಾನನಾಗಿ ಫೆಂಟಾಸ್ಟಿಕ್ ವ್ಯಕ್ತಿ. ಅವರಿಗೆ ಇದ್ದದ್ದು ಎರಡು ಸಂಸಾರ. ಮೊದಲ ಪತ್ನಿ ಸುಂದರಬಾಯಿ. ನಾವು ಎರಡನೇ ಪತ್ನಿಯ (ಪ್ರತಿಮಾ ದೇವಿ) ಮಕ್ಕಳು. ಎರಡು ಮನೆಯನ್ನು ಆರಾಮವಾಗಿ ನಿರ್ವಹಿಸುತ್ತಿದ್ದರು. ಅದಕ್ಕೆ ಅದರದ್ದೇ ಆದ ಅರ್ಥವ್ಯವಸ್ಥೆಯನ್ನು ಕಲ್ಪಿಸಿದ್ದರು. ನಾವೆಲ್ಲಾ ಸೌಹಾರ್ದಯುತವಾಗಿಯೇ ಇದ್ದೇವೆ. ಅವರ ಮಕ್ಕಳಾಗಿ ಹುಟ್ಟಿದ್ದು ನಮ್ಮ ಪುಣ್ಯ.

ಕನ್ನಡ ಚಿತ್ರರಂಗಕ್ಕೆ ಒಂದು ಸೂತ್ರ ಮಾಡಿಕೊಂಡಿದ್ದರು. ಇಲ್ಲಿ ಹೆಚ್ಚು ಹಣ ಖರ್ಚು ಮಾಡಬಾರದು. ಮಿತ ಖರ್ಚು. ಒಂದಿಷ್ಟು ಆದಾಯ, ಲಾಭ ಪಡೆಯಬೇಕು ಎಂಬುದು ಅವರ ಸೂತ್ರ. ನೂರಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿ ಕನ್ನಡ ಚಿತ್ರರಂಗಕ್ಕೆ ಕರ್ನಾಟಕದಲ್ಲೇ ಅಸ್ತಿತ್ವ ಕೊಟ್ಟ ಅವರ ಹೆಸರಿನಲ್ಲಿ ಒಂದು ಪ್ರಶಸ್ತಿಯೂ ಇಲ್ಲ, ರಸ್ತೆಗೆ ಹೆಸರೂ ಇಟ್ಟಿಲ್ಲ ಎಂಬ ಕೊರಗು ಮಾತ್ರ ಕಾಡುತ್ತಿದೆ.


ನಿರೂಪಣೆ: ಶರತ್ ಹೆಗ್ಡೆ

ಈ ದುರಂತಗಳಿಗೆ ಕೊನೆಯಿಲ್ಲವೇ?

ಶೂಟಿಂಗ್ ವೇಳೆಯ ದುರಂತ ಘಟನೆಗಳು ಚಿತ್ರರಂಗವನ್ನು ಆಗಾಗ ಕಾಡುತ್ತಲೇ ಇವೆ. ದುರಂತಗಳು ನಡೆದಾಗ ಒಂದಿಷ್ಟು ಚರ್ಚೆಗಳು ನಡೆಯುವುದು, ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡುವುದು ನಡೆದೇ ಇದೆ.

ಇಂಥ ಘಟನೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಬಲಿಯಾಗುವುದು ಸಾಹಸ ಕಲಾವಿದರು, ತಂತ್ರಜ್ಞರು ಮತ್ತು ಕೆಳಹಂತದ ಕಾರ್ಮಿಕರು. ಆರ್ಥಿಕ ಮತ್ತು ಮಾನಸಿಕ ಒತ್ತಡ ಬೀಳುವುದು ನಿರ್ಮಾಪಕರ ಮೇಲೆ. ನಿರ್ಮಾಪಕನ ಬದುಕಿನಲ್ಲಿ ಅಂಥ ಘಟನೆ ಕಪ್ಪುಚುಕ್ಕೆಯಾಗಿ ಉಳಿದುಬಿಡುತ್ತದೆ.

ಇಂತಹ ಘಟನೆಗಳನ್ನು ತಡೆಯಲು ಏನೇನು ಮಾಡಬಹುದು ಎಂಬ ಚರ್ಚೆ ಮತ್ತು ಅದಕ್ಕೆ ಸಂಬಂಧಿಸಿದ ಸಿದ್ಧತೆ ನಿರ್ಮಾಪಕರ ಮಟ್ಟದಲ್ಲಿ ನಡೆದಿದೆ. ಅಲ್ಲಿ ನಡೆದ ಚರ್ಚೆಯ ಅಂಶಗಳನ್ನು ನಿರ್ಮಾಪಕ ಕೆ. ಮಂಜು 'ಸಿನಿಮಾ ಪುರವಣಿ'ಗೆ ವಿವರಿಸಿದರು.




ಕೆ. ಮಂಜು

ವಿಮೆ ಕಡ್ಡಾಯಗೊಳ್ಳಲಿ: ಚಿಕ್ಕ ರೋಪ್‌ನಿಂದ ಹಿಡಿದು ಒಂದೊಂದು ಪುಟ್ಟ ಪುಟ್ಟ ಸಾಮಗ್ರಿಗಳಿಗೂ ದುಬಾರಿ ಬಿಲ್ ಮಾಡುವ ಸ್ಟಂಟ್ ಮಾಸ್ಟರ್‌ಗಳು ತಾವು ಹಾಗೂ ಕಲಾವಿದರಿಗೆ ವಿಮೆ ಮಾಡಿಸಿರುವುದಿಲ್ಲ. ಇದು ಕಡ್ಡಾಯಗೊಳ್ಳಬೇಕು.

ಫೈಟ್ ಮಾಸ್ಟರ್‌ಗಳಾಗಿ ತುಂಬಾ ವಯಸ್ಸಾದವರು, ಸಾಹಸ ತಂತ್ರ ಗೊತ್ತಿಲ್ಲದವರು, ಅನುಭವ ಇಲ್ಲದವರು ಬರುತ್ತಿದ್ದಾರೆ. ಇದು ತಪ್ಪಬೇಕು.

ನಿರ್ಮಾಪಕರಿಗೆ ಸ್ವಾತಂತ್ರ್ಯ ಬೇಕು: ಈಗ ಚಿತ್ರ ಚಟುವಟಿಕೆಗೆ ಯಾರೇ ಬೇಕಾದರೂ ಚಲನಚಿತ್ರ ಕಾರ್ಮಿಕರ ಒಕ್ಕೂಟದಲ್ಲಿ ನೋಂದಣಿಯಾದವರನ್ನೇ ತೆಗೆದುಕೊಳ್ಳಬೇಕು ಎಂಬ ನಿಯಮ ಇದೆ. ಅಲ್ಲಿ ಎಲ್ಲರೂ ಅರ್ಹರೇ ಇರುತ್ತಾರೆ ಎಂಬ ಖಾತ್ರಿ ಇರುವುದಿಲ್ಲ. ಇದು ಬದಲಾಗಬೇಕು.



ಡಿ.ಆರ್. ಜೈರಾಜ್

ವೈದ್ಯರು, ಪ್ರಥಮ ಚಿಕಿತ್ಸೆ ವ್ಯವಸ್ಥೆ ಬೇಕು: ಸಾಹಸ ದೃಶ್ಯಗಳ ಚಿತ್ರೀಕರಣದ ವೇಳೆ ಅಲ್ಲಿ ವೈದ್ಯರು, ಅಂಬುಲೆನ್ಸ್, ಪ್ರಥಮ ಚಿಕಿತ್ಸೆ ಸೌಲಭ್ಯ ಇರಲೇಬೇಕು.

ಅವರವರೇ ಜವಾಬ್ದಾರಿ: ಚಿತ್ರ ನಿರ್ಮಾಣದ ವಿವಿಧ ವಿಭಾಗಗಳಲ್ಲಿ ಏನೇ ಆದರೂ ಆಯಾ ವಿಭಾಗದ ಮುಖ್ಯಸ್ಥರಿಗೇ ಹೊಣೆಗಾರಿಕೆ ವಹಿಸಬೇಕು. ಸಾಹಸ ಚಿತ್ರೀಕರಣದಲ್ಲಿ ಏನಾದರೂ ಲೋಪವಾದರೆ ಫೈಟ್ ಮಾಸ್ಟರೇ ಹೊಣೆಗಾರರಾಗಬೇಕು. ಎಲ್ಲ ಸರ್ಕಾರಗಳು ಚಿತ್ರನಗರಿ ಎಂದು ಹೇಳುತ್ತಲೇ ಬಂದಿವೆ. ಅದು ಯಾವಾಗ ಅನುಷ್ಠಾನವಾಗುತ್ತೋ ಗೊತ್ತಿಲ್ಲ.

ಏಕಗವಾಕ್ಷಿ ವ್ಯವಸ್ಥೆ ಬೇಕು: ಈಗ ಹೆಸರಿಗೊಂದು ಏಕಗವಾಕ್ಷಿ ವ್ಯವಸ್ಥೆಯೇನೋ ಇದೆ. ಆದರೆ, ಶೂಟಿಂಗ್‌ಗೆ ಹೋದಾಗ ಸ್ಥಳೀಯಮಟ್ಟದಲ್ಲಿ ಪೊಲೀಸರ, ಅಧಿಕಾರಿಗಳ, ಆಡಳಿತದ ಸಹಕಾರ ಸಿಗುವುದಿಲ್ಲ. ಇದು ಬದಲಾಗಬೇಕು.

'ಈಗ ಚಿತ್ರತಂಡಗಳು ತಮ್ಮ ನಿರ್ಲಕ್ಷ್ಯಕ್ಕೆ ಬೆಲೆತೆರಬೇಕಾಗಿ ಬಂದಿದೆ. ಜೀವ ಪಣಕ್ಕಿಟ್ಟು ಸಾಹಸ ಪ್ರದರ್ಶಿಸಿ ಆಗಬೇಕಾದದ್ದು ಏನು ಹೇಳಿ' ಎಂದು ಬೇಸರದಿಂದ ಪ್ರಶ್ನಿಸುತ್ತಾರೆ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್.



ಕುಮಾರ್ ಗೋವಿಂದ್ ಬರಗೂರು ರಾಮಚಂದ್ರಪ್ಪ

ಸದ್ದಿಲ್ಲದೆ ಪ್ರಶಸ್ತಿ ಬಾಚಿದ ಮೂಕನಾಯಕ

ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿದ 'ಮೂಕನಾಯಕ' ಚಿತ್ರಕ್ಕೆ ನೋಯ್ಡಾದ ಅಂತರರಾಷ್ಟ್ರೀಯ ಸಿನಿಮಾ ಸ್ಪರ್ಧೆಯಲ್ಲಿ 'ದಶಕದ ಅತ್ಯುತ್ತಮ ಚಿತ್ರ' ಪ್ರಶಸ್ತಿ ಲಭ್ಯವಾಗಿದೆ.

'ನೋಯ್ಡಾದ ಸಂಸ್ಥೆಯೊಂದು 'ಇನ್‌ಕ್ರೆಡಿಬಲ್ ಸಿನಿ ಅವಾರ್ಡ್ಸ್'ಗಾಗಿ ಹತ್ತು ವರ್ಷಗಳ ಒಳಗೆ ನಿರ್ಮಾಣಗೊಂಡ ವಿಶ್ವದ ಎಲ್ಲ ಭಾಷೆಯ ಚಿತ್ರಗಳನ್ನು ಆಹ್ವಾನಿಸಿತ್ತು. ಈ ಸ್ಪರ್ಧೆಗೆ 'ಮೂಕನಾಯಕ' ಚಿತ್ರವನ್ನು ಕಳುಹಿಸಲಾಗಿತ್ತು. ಪ್ರವೇಶ ಪಡೆದ ಚಿತ್ರಗಳಲ್ಲಿ ಆಯ್ದ ಚಿತ್ರಗಳನ್ನು ವಿವಿಧ ಪ್ರಕಾರಗಳ ಸ್ಪರ್ಧೆಗೆ ನಾಮನಿರ್ದೇಶನ ಮಾಡಲಾಗಿತ್ತು. ಹೀಗೆ ನಾಮನಿರ್ದೇಶನಗೊಂಡ 'ಮೂಕನಾಯಕ' ಚಿತ್ರವು ವಿಶ್ವದ ವಿವಿಧ ಭಾಷೆಗಳ ಸಿನಿಮಾಗಳೊಂದಿಗೆ ಸ್ಪರ್ಧಿಸಿ ದಶಕದ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ' ಎಂದು ಬರಗೂರು ಅವರು ತಿಳಿಸಿದ್ದಾರೆ.

'ಮಾತು ಬಾರದ ಚಿತ್ರಕಲಾವಿದನ ಆಶಯ ಮತ್ತು ಅಭಿವ್ಯಕ್ತಿ ವಿನ್ಯಾಸವನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ಚಿತ್ರವು ಚಿತ್ರಕಲೆಯ ವಿವಿಧ ಸಾಧ್ಯತೆಗಳನ್ನು ಸಾದರಪಡಿಸಿದೆ. ಈ ಚಿತ್ರವನ್ನು 'ಸಮುದಾಯದತ್ತ ಸಿನಿಮಾ' ಪರಿಕಲ್ಪನೆಯಡಿ 'ಚಿತ್ರಯಾತ್ರೆ' ನಡೆಸಿ ಈಗಾಗಲೇ ಅನೇಕ ಊರುಗಳಲ್ಲಿ ಪ್ರದರ್ಶನ ನೀಡಲಾಗಿದೆ. ಈ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲೂ ಈ ಚಿತ್ರವು ಪ್ರದರ್ಶನಕ್ಕೆ ಆಯ್ಕೆಯಾಗಿತ್ತು' ಎಂದು ವಿವರಿಸಿದ್ದಾರೆ.

ಬರಗೂರು ಅವರೇ ಕತೆ, ಚಿತ್ರಕತೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಈ ಚಿತ್ರವನ್ನು 2017ರಲ್ಲಿ ಬಾಲರಾಜ್ ಅವರು ನಿರ್ಮಿಸಿದ್ದರು. ಮೂಕಚಿತ್ರ ಕಲಾವಿದನ ಪಾತ್ರದಲ್ಲಿ ಕುಮಾರ್ ಗೋವಿಂದ್ ನಟಿಸಿದ್ದಾರೆ. ಸೋದರಿ ಪಾತ್ರದಲ್ಲಿ ರೇಖಾ ಅವರು ನಟಿಸಿದ್ದು, ಇತರೆ ಪಾತ್ರಗಳಲ್ಲಿ ಸುಂದರರಾಜ್, ಯತಿರಾಜ್, ಶೀತಲ್ ಶೆಟ್ಟಿ, ವೆಂಕಟರಾಜ್ ಮುಂತಾದವರು ನಟಿಸಿದ್ದಾರೆ.

ಚಿತ್ರಕ್ಕೆ ಆದವಾನಿ ಛಾಯಾಗ್ರಹಣ, ಸುರೇಶ್ ಅರಸು ಸಂಕಲನ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನವಿದೆ.



'ಅಲಖ್' ವಿಡಿಯೊ ಗೀತೆಯ ದೃಶ್ಯ

ಸ್ವಾತಂತ್ರ್ಯದ ಗೀತೆಯಾಗಿ ಅಲಖ್


ಅಲಖ್...!! ಸ್ವಾತಂತ್ರ್ಯ ಹೋರಾಟಗಾರರ ಗೌರವಾರ್ಥ ಲಿಚ್ಚಿ ಫಿಲ್ಮ್ಸ್ ಸಂಸ್ಥೆ ಸ್ವಾತಂತ್ರ್ಯ ಗೀತೆಯೊಂದನ್ನು ಹೊರತರಲಾಗುತ್ತಿದೆ. ಆಗಸ್ಟ್ 15ರಂದು ಅದು ಬಿಡುಗಡೆಯಾಗಲಿದೆ. ಅಂದಹಾಗೆ ಈ ವಿಡಿಯೊ ಆಲ್ಬಂನ ಹೆಸರು 'ಅಲಖ್'. ಸುಭಾಷ್‌ಚಂದ್ರ ಬೋಸ್ ಅವರ ಮಾತುಗಳನ್ನೇ ಸ್ಫೂರ್ತಿಯಾಗಿ ಇಟ್ಟುಕೊಂಡು ಈ ಆಲ್ಬಂನ್ನು ಹೊರತರುತ್ತಿದೆ. ಸ್ಪಿರಿಟ್ ಆಫ್ ಇಂಡಿಯಾ ಅನ್ನುವುದು ಈ ಆಲ್ಬಂನ ಟ್ಯಾಗ್‌ಲೈನ್. ಸ್ವಾತಂತ್ರ್ಯದ ಮಹತ್ವ ಮತ್ತು ಪ್ರಜೆಯ ಜವಾಬ್ದಾರಿಯ ಕುರಿತು ಹಾಡಿನಲ್ಲಿ ಸಂದೇಶ ನೀಡಲಾಗಿದೆ ಎಂದಿದ್ದಾರೆ ಲಿಚಿ ಫಿಲ್ಮ್ಸ್‌ನ ಸಂಸ್ಥಾಪಕಿ, ಆಲ್ಬಂನ ನಿರ್ದೇಶಕಿ ಗೌರಿ ಶ್ರೀನಿವಾಸ್. ಹಾಡಿನ ವಿಡಿಯೋದಲ್ಲಿ ಸೋನು ಗೌಡ, ಕಿರುತೆರೆ ನಟರಾದ ದಿಲೀಪ್, ಶ್ರೀರಾಂ, ಅಶ್ವಿನಿ ನಾಚಪ್ಪ, ಪಿ.ಡಿ. ಸತೀಶ್‌ಚಂದ್ರ ಕಾಣಿಸಿಕೊಂಡಿದ್ದಾರೆ. ರವೀಂದ್ರ ಸೊರಗಾವಿ ಮತ್ತು ಅನುರಾಧಾ ಭಟ್ ಹಾಡಿಗೆ ಧ್ವನಿಯಾಗಿದ್ದಾರೆ.


'ಡಾಲಿ'ಗೆ ಜೋಡಿ ಈ ಪಾಯಲ್

ನಟ ಡಾಲಿ ಧನಂಜಯ್ ನಾಯಕರಾಗಿ ನಟಿಸುತ್ತಿರುವ ಡಾನ್ ಜಯರಾಜ್ ಜೀವನಕಥೆ ಆಧಾರಿತ 'ಹೆಡ್‌ಬುಷ್' ಚಿತ್ರಕ್ಕೆ ತೆಲುಗಿನ ಖ್ಯಾತ ನಟಿ ಪಾಯಲ್ ರಾಜ್‌ಪುತ್ ನಾಯಕಿಯಾಗಿ ಜೋಡಿಯಾಗಲಿದ್ದಾರೆ.

ನಟಿ ಪಾಯಲ್ ಅವರು ತೆಲುಗಿನ 'ಆರ್‌ಎಕ್ಸ್ 100, ಆರ್‌ಡಿಎಕ್ಸ್ ಲವ್' ಮುಂತಾದ ಹಿಟ್ ಚಿತ್ರಗಳಲ್ಲಿ ನಟಿಸಿದ್ದರು. ಡಾಲಿ ಪಿಕ್ಚರ್ಸ್ ಮತ್ತು ಸೋಮಣ್ಣ ಟಾಕೀಸ್ ಜಂಟಿಯಾಗಿ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ, ಅಗ್ನಿ ಶ್ರೀಧರ್ ಅವರು ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಚಿತ್ರವನ್ನು ಶೂನ್ಯ ಅವರು ನಿರ್ದೇಶಿಸುತ್ತಿದ್ದಾರೆ. ಚಿತ್ರಕ್ಕೆ ಶರಣ್ ರಾಜ್ ಸಂಗೀತವಿದ್ದು, ಬಾದಲ್ ನಂಜುಂಡಸ್ವಾಮಿ ಪ್ರೊಡಕ್ಷನ್ ಡಿಸೈನರ್ ಆಗಿದ್ದಾರೆ.

'ಹೆಡ್‌ಬುಷ್ ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ಆರಂಭಗೊಳ್ಳಲಿದ್ದು, ದೊಡ್ಡ ಬಜೆಟ್ ಸಿನಿಮಾ ಅದು. ಅಗ್ನಿ ಶ್ರೀಧರ್ ಅವರು 'ದಾದಾಗಿರಿಯ ಆ ದಿನಗಳು' ಓದಿದರೆ, ಅವರ ಜೊತೆ ಕುಳಿತು ಮಾತನಾಡಿದರೆ ಅವರ ಅನುಭವ ಹೇಳುತ್ತಾರೆ. ಶ್ರೀಧರ್ ಅವರ ಜೊತೆ ಕುಳಿತರೆ ಚರ್ಚೆ ಮುಗಿಯುವುದೇ ಇಲ್ಲ. ಅದೊಂದು ಬೇರೆ ಜಗತ್ತು ನಾವು ಯಾವತ್ತೂ ಅದನ್ನು ನೋಡಲು ಸಾಧ್ಯವಿಲ್ಲ. ಮಾನಸಿಕವಾಗಿ ಈ ಪಾತ್ರಕ್ಕೆ ಸಿದ್ಧತೆ ನಡೆಸುತ್ತಿದ್ದೇನೆ. ಜೊತೆಗೆ 'ಜಯರಾಜ್' ಪಾತ್ರಕ್ಕಾಗಿ ದಪ್ಪ ಆಗುತ್ತಿದ್ದೇನೆ' ಎಂದು ಧನಂಜಯ್ ಇತ್ತೀಚೆಗೆ 'ಪ್ರಜಾವಾಣಿ' ಜೊತೆಗಿನ ಸಂದರ್ಶನದಲ್ಲಿ ಹೇಳಿದ್ದರು.





ತೆರೆಗೆ ಬರಲು ಸಜ್ಜಾಗುತ್ತಿದೆ 'ಮಾರಿಗೋಲ್ಡ್'

ಶೀರ್ಷಿಕೆಯ ಮೂಲಕವೇ ನಿರೀಕ್ಷೆ ಹುಟ್ಟಿಸಿರುವ, ನಟ ದಿಗಂತ್ ಅಭಿನಯದ ಚಿತ್ರ 'ಮಾರಿಗೋಲ್ಡ್' ಶೀಘ್ರದಲ್ಲೇ ತೆರೆಗೆ ಬರಲು ಸಜ್ಜಾಗುತ್ತಿದೆ. ಈಗಾಗಲೇ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಗತಿಯಲ್ಲಿದ್ದು, ಚಿತ್ರದ ಡಬ್ಬಿಂಗ್ ಕಾರ್ಯ ಮುಗಿದು, ಹಿನ್ನೆಲೆ ಸಂಗೀತ ಅಳವಡಿಕೆ ಕೊನೆಯ ಹಂತದಲ್ಲಿದೆ. ಇಷ್ಟರಲ್ಲೇ ಸೆನ್ಸಾರ್ ಅಂಗಳಕ್ಕೆ ಹೋಗಲು ಚಿತ್ರವು ಸಿದ್ಧವಾಗುತ್ತಿದೆ. ಕ್ರೈಮ್ ಥ್ರಿಲ್ಲರ್ ಕಥಾನಕ ಹೊಂದಿರುವ ಈ ಚಿತ್ರವನ್ನು ರಾಘವೇಂದ್ರ ಎಂ.ನಾಯಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ರಾಘವೇಂದ್ರ ಅವರ ನಿರ್ದೇಶನದ ಚೊಚ್ಚಲ ಚಿತ್ರ. ದಿಗಂತ್ ಅವರ ಫಸ್ಟ್‌ಲುಕ್ ಪೋಸ್ಟರ್ ಈಗಾಗಲೇ ಬಿಡುಗಡೆಯಾಗಿದ್ದು, ಮೊದಲ ಬಾರಿಗೆ ದಿಗಂತ್ ಹೊಸ ರೀತಿಯ ಪಾತ್ರದ ಮೂಲಕ ಪ್ರೇಕ್ಷಕರ ಮುಂದೆ ಬರಲಿದ್ದಾರೆ ಎನ್ನುತ್ತಿದೆ ಚಿತ್ರತಂಡ.

ಆರ್.ವಿ.ಕ್ರಿಯೇಷನ್ಸ್ ಮೂಲಕ ರಘುವರ್ಧನ್ ಫಿಲ್ಮ್ಸ್ ಬ್ಯಾನರ್‌ನಲ್ಲಿ ರಘುವರ್ಧನ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಮತ್ತೆ 'ಎದೆ ತುಂಬಿದ ಹಾಡು'

ದಿವಂಗತ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ನೆನಪಿನಲ್ಲಿ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ಕಲರ್ಸ್ ಕನ್ನಡದಲ್ಲಿ ಮತ್ತೆ ಆರಂಭವಾಗಲಿದೆ.

ಈ ಕುರಿತು ಮಾಹಿತಿ ನೀಡಿದ ವಾಹಿನಿ ಕ್ಲಸ್ಟರ್ ಹೆಡ್ ಪರಮೇಶ್ವರ್ ಗುಂಡ್ಕಲ್, 'ನಾನು ಮೂರು ವರ್ಷಗಳ ಹಿಂದೆ ಚೆನ್ನೈನಲ್ಲಿ ಎಸ್.ಪಿ.ಬಿ ಅವರನ್ನು ಭೇಟಿ ಮಾಡಿ, 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ಪುನಃ ಆರಂಭಿಸೋಣ ಎಂದು ಕೇಳಿದ್ದೆ. ಆಗ ಅವರು 'ನನ್ನ ಶೆಡ್ಯೂಲ್ ನೋಡಿ ತಿಳಿಸುತ್ತೇನೆ' ಅಂದರು. ಆನಂತರ ಅವರಿಂದ ನನಗೊಂದು ಕಾಗದ ಬಂತು. ನನ್ನ ಬೇರೆ ಕಾರ್ಯಕ್ರಮಗಳು ಈಗಾಗಲೇ ನಿಗದಿಯಾಗಿರುವುದರಿಂದ 2019ರಲ್ಲಿ ಕಾರ್ಯಕ್ರಮ ಆರಂಭಿಸೋಣ ಎಂದು ಬರೆದಿದ್ದರು. ಆದರೆ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಿ, ಆರಂಭ ಮಾಡೋಣ ಎನ್ನುವ ಸಂದರ್ಭದಲ್ಲೇ ಕೋವಿಡ್ ಆರಂಭವಾಯಿತು. ನಂತರದ ದಿನಗಳಲ್ಲಿ ಎಸ್.ಪಿ.ಬಿ ಅವರೇ ನಮ್ಮಿಂದ ದೂರವಾದರು. ಈಗ ಅವರ ನೆನಪಿನಲ್ಲಿ ಈ ಕಾರ್ಯಕ್ರಮ ಇದೇ ಆಗಸ್ಟ್ 14ರಿಂದ ಆರಂಭವಾಗಲಿದೆ. ರಾಜೇಶ್ ಕೃಷ್ಣನ್, ವಿ.ಹರಿಕೃಷ್ಣ ಹಾಗೂ ರಘು ದೀಕ್ಷಿತ್ ಇದರ ತೀರ್ಪುಗಾರರಾಗಿರಲಿದ್ದು, ಎಸ್.ಪಿ.ಬಿ ಅವರ ಪುತ್ರ ಎಸ್.ಪಿ. ಚರಣ್ ಇರುತ್ತಾರೆ' ಎಂದರು.

'ಈಗಾಗಲೇ ಆಡಿಷನ್ ಮೂಲಕ ಹದಿನಾರರಿಂದ, ಹದಿನೆಂಟು ಗಾಯಕರನ್ನು ಆಯ್ಕೆ ಮಾಡಲಾಗಿದೆ' ಎಂದರು

'ಅಪ್ಪನ ನೇತೃತ್ವದಲ್ಲಿ ಮೂಡಿಬರುತ್ತಿದ್ದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮವನ್ನು ಮತ್ತೆ ಆರಂಭಿಸುತ್ತಿರುವುದಕ್ಕೆ ವಾಹಿನಿಗೆ ಧನ್ಯವಾದ. ರಾಮೋಜಿರಾವ್ ಅವರು ತೆಲುಗಿನಲ್ಲಿ 'ಪಾಡುತ ತಿಯಗ' ಎಂಬ ಕಾರ್ಯಕ್ರಮ ನಡೆಸುತ್ತಿದ್ದರು. ಆನಂತರ ಅಪ್ಪ ಈ ಕಾರ್ಯಕ್ರಮವನ್ನು ಕನ್ನಡದಲ್ಲಿ 'ಎದೆ ತುಂಬಿ ಹಾಡುವೆನು' ಎಂಬ ಶೀರ್ಷಿಕೆಯಡಿ ಆರಂಭಿಸಿದರು. ಕಾರ್ಯಕ್ರಮ ಅತ್ಯಂತ ಜನಪ್ರಿಯವೂ ಆಯಿತು. ಈ ಟಿವಿ ಅವರು ಈ ಕಾರ್ಯಕ್ರಮ ನಿಲ್ಲಿಸಿದಾಗ ಅಪ್ಪನಿಗೆ ಬೇಸರವಾಗಿದ್ದೂ ಇದೆ. ತೆಲುಗು, ಕನ್ನಡದಲ್ಲಿ ಜನಪ್ರಿಯವಾಗಿದ್ದ ಈ ಕಾರ್ಯಕ್ರಮವನ್ನು ತಮಿಳಿನಲ್ಲಿ ಮಾಡಲಿಲ್ಲ ಎಂಬ ಕೊರಗು ಅಪ್ಪನಲ್ಲಿತ್ತು' ಎಂದರು ಚರಣ್.



ರಘು ದೀಕ್ಷಿತ್, ವಿ.ಹರಿಕೃಷ್ಣ ಹಾಗೂ ರಾಜೇಶ್ ಕೃಷ್ಣನ್

'ನಮ್ಮ ಬಾಲ್ಯದಲ್ಲಿ ಅಪ್ಪನೊಂದಿಗೆ ಹೆಚ್ಚು ಸಮಯ ಕಳೆಯಲಿಲ್ಲ. ನನ್ನ ಕಿರಿಯ ಸಹೋದರನಂತಿರುವ ರಾಜೇಶ್ ಕೃಷ್ಣನ್ ಅಪ್ಪನೊಂದಿಗೆ ಸಾಕಷ್ಟು ಸಮಯ ಕಳೆದಿದ್ದಾರೆ' ಎಂದು ಚರಣ್ ನೆನಪುಗಳನ್ನು ಮೆಲುಕು ಹಾಕಿದರು.

'ರಾಮಾಯಣ ಹಾಗೂ ಮಹಾಭಾರತ ಧಾರಾವಾಹಿಗಳಷ್ಟೇ ಜನಪ್ರಿಯವಾಗಿದ್ದು 'ಎದೆ ತುಂಬಿ ಹಾಡುವೆನು'. ತೀರ್ಪುಗಾರರಾಗಿ ಎಸ್.ಪಿ.ಬಿ ಕಾರ್ಯಕ್ರಮ ನಡೆಸಿಕೊಡುತ್ತಿದ್ದ ರೀತಿ ಅನುಕರಣೀಯ' ಎಂದರು ವಿ.ಹರಿಕೃಷ್ಣ.

ಸಿದ್ದರಾಮಯ್ಯಗೆ 74ರ ಸಂಭ್ರಮ; ಶುಭಾಶಯಗಳ ಮಹಾಪೂರ

‘ಸಂವಿಧಾನ ಆಶಯ ಈಡೇರಿಸೋಣ’

ಪ್ರಜಾವಾಣಿ ವಾರ್ತೆ



ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವ ನಾರಾಯಣ, ಸಲೀಂ ಅಹಮದ್, ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮತ್ತೊಬ್ಬ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಅವರು ಸಿದ್ದರಾಮಯ್ಯ ಅವರಿಗೆ ಜನ್ಮ ದಿನದ ಶುಭಾಶಯ ಕೋರಿದರು

ಬೆಂಗಳೂರು: ಗುರುವಾರ (ಆಗಸ್ಟ್ 12) 74ನೇ ಜನ್ಮದಿನ ಆಚರಿಸಿಕೊಂಡ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಎಐಸಿಸಿ ನಾಯಕ ರಾಹುಲ್ ಗಾಂಧಿ, ಜೆಡಿಎಸ್ ವರಿಷ್ಠ ದೇವೇಗೌಡ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು, ಮುಖಂಡರು, ಹಾಲಿ, ಮಾಜಿ ಶಾಸಕರು, ಸಂಸದರು ಶುಭ ಕೋರಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕೂಡಲ ಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸೇರಿದಂತೆ ವಿವಿಧ ಮಠಗಳ ಮಠಾಧೀಶರು ಕೂಡಾ ಶುಭ ಹಾರೈಸಿ, ಆಶೀರ್ವದಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಅವರ ನಿವಾಸಕ್ಕೆ ನೂರಾರು ಸಂಖ್ಯೆಯಲ್ಲಿ ಬಂದ ಪಕ್ಷದ ಕಾರ್ಯಕರ್ತರು ಶುಭ ಕೋರಿ, ಸಿಹಿ ವಿತರಿಸಿ ಸಂಭ್ರಮಿಸಿದರು. ಅಭಿಮಾನಿಯೊಬ್ಬರು ಹಾಡೊಂದಕ್ಕೆ ಕುಣಿದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, ‘ನಾನು ಐದನೇ ತರಗತಿಗೆ ನೇರವಾಗಿ ದಾಖಲಾತಿಯಾದ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು ಬರೆದುಕೊಂಡ ಪ್ರಕಾರ ನನಗೀಗ 74 ವರ್ಷ ತುಂಬಿ 75ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ನಾನು ಯಾವತ್ತೂ ಜನ್ಮದಿನ ಆಚರಿಸಿಕೊಂಡವನಲ್ಲ’ ಎಂದರು.

‘ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗುತ್ತಿರುವ ಸಂದರ್ಭದಲ್ಲಿ, ನಾವು ಹಿಂದಿನ 74 ವರ್ಷಗಳ ಇತಿಹಾಸವನ್ನು ಹಿಂತಿರುಗಿ ನೋಡಬೇಕು. ಸಂವಿಧಾನದ ಆಶಯಗಳು ಈಡೇರಿವೆಯೊ, ಇಲ್ಲವೊ ಎಂಬುದನ್ನು ಗಮನಿಸಿ, ಈಡೇರದೇ ಇದ್ದರೆ ಅದನ್ನು ಈಡೇರಿಸುವ ಶಪಥ ಮಾಡಬೇಕು’ ಎಂದರು.

ಬಿಜೆಪಿ ವಿಫಲ: ‘ಚುನಾವಣೆಗೆ ಇನ್ನೂ ಒಂದು ವರ್ಷ ಎಂಟು ತಿಂಗಳು ಬಾಕಿ ಇದೆ. ರಾಜ್ಯದ ಜನ ಬಿಜೆಪಿ ಆಡಳಿತದಿಂದ ಬೇಸತ್ತಿದ್ದಾರೆ. ಸರ್ಕಾರ ಕೋವಿಡ್ ನಿಯಂತ್ರಣ, ನೆರೆ ಪರಿಹಾರ ನೀಡುವಲ್ಲಿ ವಿಫಲವಾಗಿದೆ. ಭರವಸೆಗಳನ್ನು ನೀಡುವುದಷ್ಟೇ ಅಲ್ಲದೆ, ಕೋವಿಡ್‌ನಿಂದ ಸಾವಿಗೀಡಾದವರ ಲೆಕ್ಕದಲ್ಲೂ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕ ಎಂ.ಪಿ. ಕುಮಾರಸ್ವಾಮಿ, ತಮ್ಮದೇ ಸರ್ಕಾರ ಅನುದಾನ ಕೊಡುತ್ತಿಲ್ಲ ಎಂದು ಪ್ರತಿಭಟನೆ ಮಾಡುತ್ತಿದ್ದಾರೆಂದರೆ ಇನ್ನು ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ಸಿಗುವ ಅನುದಾನದ ಬಗ್ಗೆ ನೀವೆ ಊಹಿಸಿ’ ಎಂದರು.

‘ಜಾತಿ ಸಮೀಕ್ಷೆ ವರದಿಯನ್ನೇ ಸ್ವೀಕರಿಸಿಯೇ ಇಲ್ಲ. ಹಾಗಿರುವಾಗ ಈ ಸಮೀಕ್ಷೆ ವೈಜ್ಞಾನಿಕವಾಗಿ ನಡೆದಿಲ್ಲ ಎಂದು ಬಿಜೆಪಿಯವರಿಗೆ ಹೇಗೆ ಗೊತ್ತಾಯಿತು. ಬಿಜೆಪಿಯವರಿಗೆ ಎಲ್ಲದರಲ್ಲೂ ಸಮಸ್ಯೆ ಕಾಣುತ್ತದೆ. ಸಮೀಕ್ಷೆಯ ವರದಿ ಸ್ವೀಕರಿಸಿ ಸದನದಲ್ಲಿ ಚರ್ಚೆ ಮಾಡಲಿ. ಆಗ ಅದು ವೈಜ್ಞಾನಿಕವೊ, ಅವೈಜ್ಞಾನಿಕವೊ ಗೊತ್ತಾಗಲಿದೆ’ ಎಂದರು.

ನಾಗರ ಪಂಚಮಿ ನಾಡಿಗೆ ದೊಡ್ಡದು

• ತೇಜಸ್ವಿ ಹೆಗಡೆ



ಇಂದು ನಾಗರ ಪಂಚಮಿ

ಚಿಕ್ಕಂದಿನಲ್ಲಿ ಅಜ್ಜಿ ಆಗೀಗ ಗುನುಗುತ್ತಿದ್ದ ಜನಪದ ಹಾಡೊಂದು ಸದಾ ನೆನಪಿನಲ್ಲಿದೆ. ‘ನಾಗರ ಪಂಚಮಿ ನಾಡಿಗೆ ದೊಡ್ಡದು... ನಾರಿಯಲ್ಲರೂ ನಲಿವರು...’ ಈ ಗೀತೆಯನ್ನು ಈ ದಿನದಂದು ಹಾಡುತ್ತಾ ಅವರು ಕಜ್ಜಾಯ ಮಾಡುತ್ತಿದ್ದಳು. ಶ್ರಾವಣಮಾಸದ ಶುಕ್ಲಪಕ್ಷದ ಪಂಚಮೀ ತಿಥಿಯಲ್ಲಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಆದರೆ ಸೌರಾಷ್ಟ್ರ ದೇಶದಲ್ಲಿ ಶ್ರಾವಣಮಾಸದ ಕೃಷ್ಣಪಕ್ಷದ ಪಂಚಮಿಯಂದು ಇದನ್ನು ಆಚರಿಸಲಾಗುತ್ತದೆ.

ನಾಗರ ಪಂಚಮಿಯನ್ನು ದೇಶದ ಎಲ್ಲಾ ಭಾಗಗಳಲ್ಲೂ ವಿವಿಧ ರೀತಿಯ ಆಚರಣೆ, ಸಂಪ್ರದಾಯಗಳ ಮೂಲಕ ಶ್ರದ್ಧೆಯಿಂದ ಆಚರಿಸಲಾಗುತ್ತದೆ. ಅದರಲ್ಲೂ ದಕ್ಷಿಣ ಕನ್ನಡದಲ್ಲಿ ಈ ಹಬ್ಬಕ್ಕೆ ವಿಶೇಷವಾದ ಸ್ಥಾನವಿದೆ. ಇದಕ್ಕೆ ಮುಖ್ಯ ಕಾರಣಗಳು ಎರಡು. ಸುಪ್ರಸಿದ್ಧ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ಕರಾವಳಿ-ಮಲೆನಾಡಿನಲ್ಲಿ ಭಾಗಗಳಲ್ಲಿ ನಾಗನಿಗೆ ಇರುವ ಪ್ರಮುಖ ಸ್ಥಾನ.

ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಸಂಪ್ರದಾಯ ಆಚರಣೆಗಳಿರುತ್ತವೆ. ಉತ್ತರ ಕರ್ನಾಟಕದ ಕಡೆ ಇದೊಂದು ಸಾಂಸ್ಕೃತಿಕ ಹಬ್ಬವಾಗಿದೆ. ಸಹೋದರ ಸಹೋದರಿಯರು ಒಂದೆಡೆ ಸೇರಿಕೊಂಡು, ಪ್ರೀತಿ, ವಾತ್ಸಲ್ಯಭಾವದಿಂದ ಸಹೋದರರನ್ನು ಹಾರೈಸುವುದು, ಅವರ ಆಶೀರ್ವಾದಗಳನ್ನು ಪಡೆಯುವುದು ನಡೆಯುತ್ತದೆ. ಹೊಸ ಉಡುಗೆಯನ್ನುಟ್ಟು ಸಂಭ್ರಮದಿಂದ ಹೆಣ್ಮಕ್ಕಳು ಉಯ್ಯಾಲೆ ಜೀಕುತ್ತಾರೆ. ಮನೆಯ ಹೆಣ್ಮಕ್ಕಳಿಗೆ (ಮದುವೆಯಾದ) ಚಕ್ಕುಲಿ, ಚೂಡ, ಅರಳು, ಉಂಡೆ – ಇವೆಲ್ಲವನೂ ಕೊಬ್ಬರಿಯೊಟ್ಟಿಗಿಟ್ಟು ಕುಪ್ಪುಸದ ಕಣದೊಂದಿಗೆ ಬಾಗೀನ ನೀಡಲಾಗುತ್ತದೆ. ಹಳೆಯ ಮೈಸೂರಿನ ಭಾಗದಲ್ಲೂ ಈ ಹಬ್ಬ ಅಣ್ಣ-ತಮ್ಮಂದಿರ ಹಬ್ಬ ಎಂದೇ ಪ್ರಸಿದ್ಧವಾಗಿದೆ. ಸಹೋದರರ ಒಳಿತನ್ನು ಕೋರಿ ಸಹೋದರಿಯರು ಅವರಿಗೆ ಬೆನ್ನುಪೂಜೆಯನ್ನು ಮಾಡುವುದು ಈ ಹಬ್ಬದ ವಿಶೇಷವಾಗಿದೆ.

ಇಂದು ಪೂಜೆಯ ಭಾಗವಾಗಿ ನಾಗರ ಕಲ್ಲುಗಳಿಗೆ ಎಳನೀರು ಹಾಗೂ ಹಾಲಿನಿಂದ ಅಭಿಷೇಕವನ್ನು ಮಾಡಲಾಗುತ್ತದೆ. ಇದಕ್ಕೆ ‘ತನಿ ಎರೆಯುವುದು’ ಎಂದು ಕರೆಯಲಾಗುತ್ತದೆ. ಈ ಸಮಯದಲ್ಲಿ ಹೆಚ್ಚು ಬೆಳೆಯುವ ಅರಿಶಿನದ ಎಲೆಗಳಿಂದ ‘ಪಾತೋಳಿ’ ಎನ್ನುವ ಸಿಹಿಗಜ್ಜಾಯವನ್ನು ತಯಾರಿಸಿ ನೈವೇದ್ಯ ಮಾಡಲಾಗುತ್ತದೆ. ನಾಗತಂಬಿಲದ (ಅರಳಿನ ಉಂಡೆ) ಸೇವೆಯನ್ನೂ ನಡೆಸಲಾಗುತ್ತದೆ. ಉತ್ತರ ಕನ್ನಡದ ಕಡೆ ನಾಗನಿಗೆ ಉಪ್ಪು ಹಾಕದ ಚಪ್ಪೆ ಅಕ್ಕಿರೊಟ್ಟಿಯ ನೈವೇದ್ಯ ಹಾಗೂ ಕ್ಷೀರಾಭಿಷೇಕವನ್ನು ಮಾಡಲಾಗುತ್ತದೆ. ಹುತ್ತಗಳಿಗೆ ಪೂಜಿಸುವ ಕ್ರಮ ಉಂಟು. ಆದರೆ ಹಾವುಗಳು ವಾಸಿಸುವ ಹುತ್ತಗಳಿಗೆ ಹಾಲನ್ನು ಬಹಳ ಎರೆದರೆ ಅವುಗಳಿಗೆ ಹಾನಿಯಾಗುವ ಸಂಭವವಿರುವುದರಿಂದ, ಎಚ್ಚರವನ್ನು ವಹಿಸುವುದು ಒಳ್ಳೆಯದು.

ನಮ್ಮಲ್ಲಿ ಅಧ್ಯಾತ್ಮಕ್ಕೂ ನಾಗನಿಗೂ ಅವಿನಾಭಾವದ ನಂಟಿದೆ. ವೇದಗಳಲ್ಲಿ ನಾಗವು ಅಧ್ಯಾತ್ಮಿಕತೆ ಸಂಕೇತ; ಇದು ಭೂಮಿ, ಅಂತರಿಕ್ಷ ಮತ್ತು ದಿವಿ (ಬೆಳಕಿನ ಲೋಕ) - ಈ ಮೂರು ಲೋಕಗಳಲ್ಲೂ ಇವೆ ಎಂದು ಹೇಳಲಾಗಿದೆ. ಭೂಮಿಯಲ್ಲಿ ಸರೀಸೃಪ ರೂಪದಲ್ಲಿ, ಅಂತರಿಕ್ಷದಲ್ಲಿ ಮಿಂಚಿನ ಬಳ್ಳಿಯ ರೂಪದಲ್ಲಿ, ದ್ಯುಲೋಕದಲ್ಲಿ ಸೂರ್ಯರಶ್ಮಿಯ ರೂಪದಲ್ಲಿ ನಾಗವನ್ನು ಯಜುರ್ವೇದ ಮಂತ್ರವೊಂದು ನಿರೂಪಿಸಿದೆ. ಅಲ್ಲದೆ, ಯೋಗಿಗಳ ಪ್ರಾಣಶಕ್ತಿಯಾಗಿರುವ ಕುಂಡಲಿನೀ ಶಕ್ತಿಯು ದೇಹದೊಳಗೆ ಹರಿಯುವುದು ನಾಗಸರ್ಪದಂತೆಯೇ ಎಂದು ಶಾಸ್ತ್ರಗಳು ಹೇಳುತ್ತವೆ. ಎಚ್ಚೆತ್ತ ಫಣೀಂದ್ರನು ಸರ್ರನೇ ಮೇಲೇರುವಂತೇ ಮೂಲಾಧಾರಚಕ್ರದಿಂದ ಸಹಸ್ರಾರದವರೆಗೂ ಆವರಿಸಿಕೊಂಡಿರುವಂಥದ್ದು ಈ ಶಕ್ತಿ. ಈ ಕುಂಡಲಿನಿಯು ಮೂಲಾಧಾರದಲ್ಲಿ ಮಲಗಿದ ಸರ್ಪದಂತೇ ಇರುತ್ತದೆ ಎಂದು ನಂಬಲಾಗಿದೆ.

ಶ್ರಾವಣಮಾಸದ ಆರಂಭದಲ್ಲಿಯೇ ಬರುವ ನಾಗರ ಪಂಚಮಿಯು, ಮುಂಬರುವ ಎಲ್ಲಾ ಹಬ್ಬಗಳಿಗೂ ಆದಿಯಾಗಿದೆ. ಇದರ ಆಚರಣೆಯಲ್ಲಿ ಪ್ರಕೃತಿಯ ಆರಾಧನೆ ಇದೆ; ಜೊತೆಗೆ ಮನುಷ್ಯ ಮತ್ತು ಸಕಲ ಜೀವಿಗಳ ಸಾಮರಸ್ಯದ ಸಂಬಂಧದ ಆಶಯವೂ ಇದರಲ್ಲಿ ಅಡಗಿದೆ.

ಕ್ಯಾಂಟೀನ್‌ಗೆ ಮಣ್ಣಿನ ಮಗನ ಹೆಸರನ್ನೂ ಇಡಬಹುದಿತ್ತಲ್ಲವೇ: ಶಾಸಕ ಸಿ.ಟಿ.ರವಿ ಪ್ರಶ್ನೆ

‘ಇಂದಿರಾ ಬಾರ್, ನೆಹರೂ ಹುಕ್ಕಾ ಬಾರ್ ತೆರೆಯಲಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕಾಂಗ್ರೆಸ್‌ನವರು ಅವರ ಕಚೇರಿಯಲ್ಲಿ ಬೇಕಿದ್ದರೆ ಇಂದಿರಾ ಬಾರ್, ನೆಹರೂ ಹುಕ್ಕಾ ಬಾರ್ ತೆರೆಯಲಿ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಕಾಂಗ್ರೆಸ್‌ನವರು ಇಂದಿರಾಗಾಂಧಿ ಅವರ ಮೇಲೆ ಪ್ರೇಮದಿಂದ ಇಂದಿರಾ ಕ್ಯಾಂಟೀನ್ ಆರಂಭಿಸಲಿಲ್ಲ. ರಾಜಕಾರಣಕ್ಕಾಗಿ ಮತ್ತು ದುಡ್ಡು ಹೊಡೆಯಲು ಮಾಡಿದ ನಿರ್ಧಾರ. ಇಂದಿರಾ ಗಾಂಧಿಯವರು ನಿಜವಾಗಲೂ ಗರೀಬಿ ಹಟಾವೋ ಮಾಡಿದ್ದಿದ್ದರೆ ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಅವಶ್ಯಕತೆ ಏನಿತ್ತು? ಅವರ ಹೆಸರಿಡುವ ಬದಲು ಇಲ್ಲಿನ ಮಣ್ಣಿನ ಮಗನ ಹೆಸರಿಡಬಹುದಿತ್ತಲ್ಲವೇ ಎಂದು ಅವರು ಪ್ರಶ್ನಿಸಿದರು.

‘ಅನ್ನಪೂರ್ಣೇಶ್ವರಿ ರಾಜಕೀಯ ವ್ಯಕ್ತಿಯಲ್ಲ. ಅನ್ನದ ದೇವತೆ; ದುರ್ಭಿಕ್ಷೆ ಬಂದಾಗ ಅನ್ನ ಕೊಡುವ ತಾಯಿ ಅವಳು. ಅದಕ್ಕೇ ಅನ್ನಪೂರ್ಣೇಶ್ವರಿ ಹೆಸರು ಇಡಲು ಸಲಹೆ ನೀಡಿದ್ದೇನೆ. ನಾನೇನಾದರೂ ರಾಜಮಾತೆ ವಿಜಯ ರಾಜೇಸಿಂಧಿಯಾ ಹೆಸರು ಇಡಲು ಹೇಳಿದರೆ, ಅದು ರಾಜಕಾರಣ ಆಗುತ್ತಿತ್ತು. ಈ ಬಗ್ಗೆ ಚರ್ಚೆ ನಡೆಯಲಿ’ ಎಂದರು.

> **ಇಂದಿರಾ ಕ್ಯಾಂಟೀನ್ ಹೆಸರು ಬದಲಾವಣೆ ಬಗ್ಗೆ ಶಾಸಕ ಸಿ.ಟಿ. ರವಿ ಅಭಿಪ್ರಾಯ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಸರ್ಕಾರವು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ರವಿ ಮಾತು ಬಿಜೆಪಿ ಸಂಸ್ಕೃತಿಯ ಪ್ರತಿಬಿಂಬ: ಡಿಕೆಶಿ



ಬೆಂಗಳೂರು: ‘ಈ ದೇಶದ ಅಭಿವೃದ್ಧಿಗೆ ನೆಹರೂ ಕುಟುಂಬ ನೀಡಿದ ಕೊಡುಗೆ, ತ್ಯಾಗ, ಸೇವೆಗೆ ಇಡೀ ಬಿಜೆಪಿ ಸರಿಸಾಟಿ ಅಲ್ಲ. ಆದರೂ, ಅವರ ಹೆಸರಿಗೆ ಮಸಿ ಬಳಿಯಲು ಸಿ.ಟಿ. ರವಿ ಆಡುತ್ತಿರುವ ಮಾತುಗಳು ಬಿಜೆಪಿಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ರವಿ ಕೇವಲ ಶಾಸಕರಲ್ಲ. ಸಚಿವರಾಗಿದ್ದವರು. ಅವರ ಮಾತುಗಳು ಅವರ ಪಕ್ಷದ ಸಂಸ್ಕೃತಿ ಏನು ಎಂಬುದನ್ನು ಎತ್ತಿ ತೋರಿಸುತ್ತದೆ’ ಎಂದು ಹೇಳಿದರು.

‘ನೆಹರೂ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅವರ ಹೆಸರಿಗೆ ಮಸಿ ಬಳಿದು, ಜನರ ಮನಸ್ಸಿನಲ್ಲಿ ತಪ್ಪು ಭಾವನೆ ಮೂಡಿಸಲು ರವಿ ವಿಫಲ ಯತ್ನ ನಡೆಸುತ್ತಿದ್ದಾರೆ’ ಎಂದು ಆರೋಪಿಸಿದ ಅವರು, ‘ಇಂದಿರಾ ಕ್ಯಾಂಟೀನ್‌ಗೆ ಹೆಸರು ಸೂಚಿಸಿದವರು ಯಾರು ಎಂದು ಅವರ ಸಚಿವ ಸಂಪುಟದಲ್ಲಿ ಇರುವವರನ್ನೇ ಕೇಳಲಿ. ಅಲ್ಲಿರುವವರು ಅರ್ಜಿಗೆ ಸಹಿ ಹಾಕಿ, ಶಾಸಕರಿಂದಲೂ ಸಹಿ ಹಾಕಿಸಿದ ನಂತರ ಈ ಹೆಸರು ಇಡಲಾಗಿದೆ’ ಎಂದು ತಿಳಿಸಿದರು.

‘ನೆಹರೂ ಮತ್ತು ಇಂದಿರಾಗಾಂಧಿ ಅವರ ಎಲ್ಲ ನಿರ್ಧಾರಗಳನ್ನು ವಿರೋಧಿಸುವ ಪೂರ್ವಗ್ರಹ ಪೀಡಿತ ಮನಸ್ಥಿತಿ ನಮ್ಮದಲ್ಲ. ಒಳ್ಳೆಯ ಕಾರ್ಯಗಳನ್ನು ಒಪ್ಪಿದ್ದೇವೆ. ಎಡಬಿಡಂಗಿ ಕಾರ್ಯಗಳನ್ನು ಟೀಕಿಸಿದ್ದೇವೆ. ಆದರೆ, ದೇಶಕ್ಕೆ ಕೇವಲ ನೆಹರೂ, ಇಂದಿರಾಗಾಂಧಿ ಮಾತ್ರ ಕೊಡುಗೆ ಕೊಟ್ಟಿದ್ದಾರೆ. ಬೇರೆ ಯಾರೂ ಕೊಡುಗೆಯೇ ನೀಡಿಲ್ಲ ಎಂಬುದನ್ನು ಗುಲಾಮರು ಮಾತ್ರ ಒಪ್ಪಿಕೊಳ್ಳಲು ಸಾಧ್ಯ. ಸ್ವಾತಂತ್ರ್ಯ ಗಳಿಸಲು ಈ ಕುಟುಂಬದವರು ಮಾತ್ರವೇ ಕೊಡುಗೆ ನೀಡಿದ್ದಾರೆ ಎಂದು ಬಿಂಬಿಸುವುದನ್ನು ಮೂರ್ಖರು ಮತ್ತು ಗುಲಾಮರು ಒಪ್ಪಿಕೊಳ್ಳುತ್ತಾರೆ. ನಾವು ಮೂರ್ಖರೂ ಮತ್ತು ಗುಲಾಮರು ಅಲ್ಲ’ ಎಂದು ಹೇಳಿದರು.

ವಿವಿಧೆಡೆ ಧಾರಾಕಾರ ಮಳೆ

ಹುಬ್ಬಳ್ಳಿ: ಧಾರವಾಡ, ವಿಜಯಪುರ ಹಾಗೂ ತಾಳಿಕೋಟೆಯಲ್ಲಿ ಗುರುವಾರ ಸಂಜೆ ಧಾರಾಕಾರ ಮಳೆಯಾಗಿದ್ದು ಉಳಿದಂತೆ ಬೆಳಗಾವಿ, ಹಾವೇರಿ, ಹೊಸಪೇಟೆ, ಗದಗ, ಶಿರಸಿ, ಕಾರವಾರ ಮತ್ತಿತರ ಕಡೆ ಸಾಧಾರಣ ಮಳೆಯಾಗಿದೆ.

ಧಾರವಾಡದಲ್ಲಿ ಬೆಳಿಗ್ಗೆಯಿಂದ ಬಿಟ್ಟೂಬಿಡದೆ ಜಡಿಮಳೆ ಸುರಿಯಿತು. ಕಳೆದ ಕೆಲ ದಿನಗಳಿಂದ ಬಿಸಿಲಿನ ವಾತಾವರಣವಿತ್ತು. ಕೆಲವೊಮ್ಮೆ ಸೋನೆಯಾಗಿ ಇನ್ನೂ ಕೆಲವೊಮ್ಮೆ ರಭಸದಿಂದ ಸುರಿಯಿತು. ಹುಬ್ಬಳ್ಳಿಯಲ್ಲೂ ದಿನವಿಡೀ ಬಿಟ್ಟು ಬಿಟ್ಟೂ ಮಳೆಯಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಎರಡು ವಾರಗಳಿಂದ ಮರೆಯಾಗಿದ್ದ ಮಳೆ ಮತ್ತೆ ಆರಂಭವಾಗಿದೆ. ಮಳೆ ಕೊರತೆಯಿಂದಾಗಿ ಬೆಳೆ ಬಾಡತೊಡಗಿತ್ತು. ಇದರಿಂದ ರೈತರು ಆತಂಕಕ್ಕೆ ಒಳಗಾಗಿದ್ದರು. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಸಾಧಾರಣ ಮಳೆಯಾಗಿದೆ. ಕಾರವಾರ, ಶಿರಸಿಯಲ್ಲಿ ತುಂತುರು ಮಳೆಯಾಗಿದೆ.

ಗದಗ ಬೆಟಗೇರಿ ಅವಳಿ ನಗರ ಹಾಗೂ ಗಜೇಂದ್ರಗಡ ತಾಲ್ಲೂಕಿನ ನರೇಗಲ್‌ನಲ್ಲಿ ಮಳೆಯಾಗಿದೆ. ಕೊಪ್ಪಳ ಜಿಲ್ಲೆಯ ಕೆಲವೆಡೆ ಗುರುವಾರ ಮಧ್ಯಾಹ್ನ ಉತ್ತಮ ಮಳೆ ಸುರಿಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.97	5,393	5,483
ಹಾರಂಗಿ	2,859	2,855.61	3,322	2,816
ಕಬಿನಿ	2284.00	2,282.25	4,471	700
ಹೇಮಾವತಿ	2,922	2,920.41	3,828	4,105
ಲಿಂಗನಮಕ್ಕಿ	1,819	1,812	11,174	-
ಸೂಪಾ (ಮೀ)	564	554.50	5,551	3,412
ಮಾಣಿ	594	584.84	1,800	-
ತುಂಗಭದ್ರಾ	1,633	1,632.62	29,244	10,523
ಮಲಪ್ರಭಾ	2079.5	2,077.00	1,544	1,544
ಘಟಪ್ರಭಾ	2175	2,173.70	4,459	1,589
ಭದ್ರಾ	186	184.6	5909	5609
ಆಲಮಟ್ಟಿ (ಮೀ)	519.6	519.33	24,098	2,582
ನಾರಾಯಣಪುರ (ಮೀ)	492.25	491.62	00	00

* ನೆಲಮಟ್ಟದಿಂದ

ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟನೆ

‘ಸಚಿವ ಸ್ಥಾನದ ಆಕಾಂಕ್ಷಿಯಲ್ಲ’

ಪ್ರಜಾವಾಣಿ ವಾರ್ತೆ



ಕಲಬುರ್ಗಿ: ‘ನಾನು ಉಪ ಮುಖ್ಯಮಂತ್ರಿ ಅಥವಾ ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ನನಗೆ ಸಚಿವ ಸ್ಥಾನ ಕೊಡಿಸಲು ತಂದೆಯವರಾದ ಬಿ.ಎಸ್. ಯಡಿಯೂರಪ್ಪ ಅವರು ಹೈಕಮಾಂಡ್ ಮೇಲೆ ಒತ್ತಡ ಹೇರಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನಗೇನೂ 77–78 ವರ್ಷ ವಯಸ್ಸಾಗಿಲ್ಲ. ಸದ್ಯಕ್ಕೆ 45 ವರ್ಷಗಳಾಗಿದ್ದು, ಮುಂದೆ ಪಕ್ಷದಲ್ಲಿ ಉನ್ನತ ಹುದ್ದೆಗಳು ದೊರೆಯಬಹುದು. ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ನಮ್ಮ ತಂದೆಯವರೂ ಸೈಕಲ್ ತುಳಿದು ಹೋರಾಟ ಮಾಡಿ ಪಕ್ಷ ಸಂಘಟನೆ ಮಾಡಿದ ಸಂದರ್ಭದಲ್ಲಿ ತಾವು ಮುಖ್ಯಮಂತ್ರಿ ಆಗುತ್ತೇನೆ ಎಂದು ನಿರೀಕ್ಷೆ ಮಾಡಿರಲಿಲ್ಲ. ನನಗೂ ಅಂತಹ ಮಹತ್ವಾಕಾಂಕ್ಷೆಗಳು ಇಲ್ಲ’ ಎಂದರು.

ವಿಜಯೇಂದ್ರ ಸಭೆಗೆ ಶಾಸಕರು ಗೈರು: ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸಿರುವ ಜಿಲ್ಲೆಯ ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ, ರಾಜಕುಮಾರ ಪಾಟೀಲ ತೆಲ್ಕೂರ ಅವರು ವಿಜಯೇಂದ್ರ ಸಭೆಯಿಂದ ದೂರ ಉಳಿದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಿಲ್ಲೆಗೆ ವಿಜಯೇಂದ್ರ ಭೇಟಿ ನೀಡಿದ ಬಹುತೇಕ ಸಂದರ್ಭಗಳಲ್ಲಿ ಈ ಇಬ್ಬರೂ ಶಾಸಕರು ಜೊತೆಗಿರುತ್ತಿದ್ದರು.

ರಾಜ್ಯ ನಾಯಕರಿಂದಲೇ ಸಚಿವ ಸ್ಥಾನಕ್ಕೆ ಕತ್ತರಿ: ಕೆ.ಶಿವನಗೌಡ ನಾಯಕ



ರಾಯಚೂರು: ‘ಸಚಿವ ಸ್ಥಾನ ನೀಡುವಂತೆ ರಾಷ್ಟ್ರೀಯ ನಾಯಕರು ಶಿಫಾರಸು ಮಾಡಿದ್ದರೂ ರಾಜ್ಯದ ಕೆಲವು ನಾಯಕರು ಕತ್ತರಿ ಹಾಕಿದ್ದಾರೆ. ನಾಲ್ಕು ಬಾರಿ ಶಾಸಕನಾಗಿ, ಪಕ್ಷಕ್ಕೆ ನಿಷ್ಠನಾಗಿದ್ದರೂ ನನಗೆ ಸಚಿವ ಸ್ಥಾನ ಸಿಗಲಿಲ್ಲ’ ಎಂದು ದೇವದುರ್ಗ ಶಾಸಕ ಕೆ.ಶಿವನಗೌಡ ನಾಯಕ ಅಸಮಾಧಾನ ಹೊರಹಾಕಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಅನ್ಯಾಯವಾಗಿದೆ. ಪರಿಶಿಷ್ಟ ಪಂಗಡಕ್ಕೆ ಕನಿಷ್ಠ ಮೂರು ಸ್ಥಾನ ನೀಡಬೇಕಿತ್ತು. ರಮೇಶ ಜಾರಕಿಹೊಳಿ ಅವರಿಗೆ ಎಸ್‌ಟಿ ಕೋಟಾದಲ್ಲಿ ಸಚಿವ ಸ್ಥಾನ ನೀಡುವುದಲ್ಲ. ಬಿಜೆಪಿ ಅಧಿಕಾರಕ್ಕೆ ಬರಲು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಂದಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಲೇಬೇಕು’ ಎಂದರು.

ಸಿ.ಡಿ ತನಿಖಾ ವರದಿಗೆ ಬದ್ಧ: ಸೌಮೇಂದು ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ಬಗ್ಗೆ ತಮ್ಮ ಅನುಪಸ್ಥಿತಿಯಲ್ಲಿ ನಡೆಸಿರುವ ತನಿಖೆಗೆ ಬದ್ಧನಾಗಿದ್ದೇನೆ’ ಎಂದು ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ಅವರು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ತನಿಖಾ ವರದಿಯನ್ನು ವೈದ್ಯಕೀಯ ರಜೆಯಲ್ಲಿದ್ದ ಸೌಮೇಂದು ಮುಖರ್ಜಿ ಅನುಮೋದಿಸಿರಲಿಲ್ಲ. ಇದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ವರದಿ ಸ್ವೀಕರಿಸಲು ನಿರಾಕರಿಸಿತ್ತು.

‘ಎಸ್‌ಐಟಿ ಮುಖ್ಯಸ್ಥರು ಇಲ್ಲದಿದ್ದರೂ ತನಿಖೆಯನ್ನು ಸಮರ್ಪಕವಾಗಿ ನಡೆಸಲಾಗಿದೆ. ವರದಿ ಸಲ್ಲಿಸಲು ಸಂದೀಪ್ ಪಾಟೀಲ ಅವರಿಗೆ ಸೌಮೇಂದು ಮುಖರ್ಜಿ ಅವರು ಅಧಿಕಾರ ನೀಡಿದ್ದಾರೆ’ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ತಿಳಿಸಿದರು.

ಎಸ್‌ಐಟಿ ಸಲ್ಲಿಸಿದ ಹೆಚ್ಚುವರಿ ಹೇಳಿಕೆ ಪರಿಶೀಲಿಸಿದ ಪೀಠ, ‘ಅನುಪಸ್ಥಿತಿಯಲ್ಲಿ ನಡೆದ ತನಿಖೆ ಸರಿಯಾಗಿದೆಯೇ ಎಂಬುದನ್ನು ಅವರು ಪರಿಶೀಲಿಸಿದ್ದಾರೆಯೇ, ಸರಿಯಾಗಿ ನಡೆದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವರು ಪ್ರಯತ್ನಿಸಿದ್ದಾರೆಯೇ’ ಎಂದು ಪ್ರಶ್ನಿಸಿತು.

‘ತನಿಖೆಗೆ ಬದ್ಧ ಎಂದು ಅವರು ಒಪ್ಪಿಗೆ ಸೂಚಿಸಿದ್ದಾರೆ’ ಎಂದು ವಕೀಲರು ವಿವರಿಸಿದರು. ವಿಚಾರಣೆಯನ್ನು ಪೀಠ ಸೆ.3ಕ್ಕೆ ಮುಂದೂಡಿತು.

ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 8 ಹೊಸ ಕೋರ್ಸ್

ಮೊದಲ ಪುಟದಿಂದ

‘ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರವೇ ಶಿಷ್ಯವೇತನ ನೀಡುತ್ತದೆ. ಟ್ಯಾಬ್ಲೆಟ್‌ಗಳನ್ನು ವಿತರಿಸಲಾಗುತ್ತದೆ. ಉತ್ತಮ ಗುಣಮಟ್ಟದ ಬೋಧನೆಯೂ ಇರುತ್ತದೆ’ ಎಂದರು.

ರಾಜ್ಯದ ಎಲ್ಲ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಅರ್ಜಿ ನೀಡಲಾಗುತ್ತದೆ. 26 ಪಾಲಿಟೆಕ್ನಿಕ್‌ಗಳಲ್ಲಿ ಮೆರಿಟ್ ಆಧಾರಿತ ಪ್ರವೇಶ ನೀಡಲಾಗುತ್ತದೆ. ಉಳಿದ ಪಾಲಿಟೆಕ್ನಿಕ್‌ಗಳಲ್ಲಿ ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಇವತ್ತಿನಿಂದಲೇ (ಆ.12) ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.


ಚಾರ್ಮಾಡಿ ಘಾಟಿ: ಲಘು ವಾಹನ ಸಂಚಾರಕ್ಕೆ ಮುಕ್ತ

ಚಿಕ್ಕಮಗಳೂರು: ಚಾರ್ಮಾಡಿ ಘಾಟಿಯಲ್ಲಿ ದಿನದ 24 ಗಂಟೆಯೂ ಲಘು ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಾರಿ ವಾಹನಗಳ ಸಂಚಾರಕ್ಕೆ ವಿಧಿಸಿರುವ ನಿರ್ಬಂಧ ಮುಂದುವರಿಸಲಾಗಿದೆ.

ಟೆಂಪೊ, ಆಂಬುಲೆನ್ಸ್, ಕಾರು, ಜೀಪು, ವ್ಯಾನು, ದ್ವಿಚಕ್ರ ವಾಹನಗಳ ಓಡಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಈವರೆಗೆ ಲಘುವಾಹನಗಳು ಹಗಲಿನಲ್ಲಿ ಮಾತ್ರ ಸಂಚಾರಕ್ಕೆ ಅವಕಾಶ ಇತ್ತು.

ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್, ಆರು ಚಕ್ರದ ಲಾರಿಗಳು ಹಗಲಿನಲ್ಲಿ (ಬೆಳಿಗ್ಗೆ 6ರಿಂದ ಸಂಜೆ 7 ಗಂಟೆ) ಮಾತ್ರ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ. ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ಇಲ್ಲ ಎಂದು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ತಿಳಿಸಿದ್ದಾರೆ.

ಅಕ್ರಮ ಕಸಾಯಿಖಾನೆ ಬಂದ್: ಪ್ರಭು ಚವ್ಹಾಣ್



ಬೆಂಗಳೂರು: ‘ಎರಡನೇ ಅವಧಿಗೆ ಪಶುಸಂಗೋಪನೆ ಇಲಾಖೆಯ ಜವಾಬ್ದಾರಿ ದೊರೆತಿರುವ ಈ ಅವಧಿಯಲ್ಲಿ ಗೋಹತ್ಯೆ ಸಂಪೂರ್ಣ ನಿಷೇಧ ಮತ್ತು ಅಕ್ರಮ ಕಸಾಯಿಖಾನೆಗಳನ್ನು ಬಂದ್ ಮಾಡಿಸಲು ಅಗತ್ಯ ಕ್ರಮಕೈಗೊಳ್ಳುತ್ತೇನೆ’ ಎಂದು ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯನ್ನು ಗುರುವಾರ ನಡೆಸಿದ ಸಚಿವರು ಅಧಿಕಾರಿಗಳಿಂದ ಮಾಹಿತಿ ಪಡೆದರು.

‘ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಅಕ್ರಮ ಕಸಾಯಿಖಾನೆಗಳು ನಡೆಯುತ್ತಿರುವ ಬಗ್ಗೆ ದೂರುಗಳು ಬಂದಿವೆ. ಗೃಹ ಇಲಾಖೆ ಸಹಯೋಗದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಅಕ್ರಮ ಕಸಾಯಿಖಾನೆಗಳನ್ನು ಬಂದ್ ಮಾಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾಗಿ’ ಸಚಿವ ಚವ್ಹಾಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಪಶು ಲೋಕ ಸ್ಥಾಪನೆ ಮಾಡುವುದಾಗಿ ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಐದು ತಿಂಗಳು ಕಳೆದರೂ ಯಾವುದೇ ಪ್ರಗತಿ ಆಗದಿರುವುದು ಸರಿಯಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ಕೊಡಲಾಗಿದೆ. ಗಾಂಧಿ ಜಯಂತಿಯ ಸಮಯದಲ್ಲಿ ಜಿಲ್ಲೆಗೊಂದು ಗೋಶಾಲೆ ತೆರೆಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕಾಗಿದ್ದು, ಕೆಲಸವನ್ನು ಆದಷ್ಟು ವೇಗವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಪಶುವೈದ್ಯರ ಕೆಲಸಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹಸ್ತಕ್ಷೇಪ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇಲಾಖೆ ವೈದ್ಯರು ಹಾಗೂ ಅಧಿಕಾರಿಗಳು ಧೈರ್ಯದಿಂದ ಕೆಲಸಮಾಡಬೇಕು ಯಾವುದಕ್ಕೂ ಹೆದರುವ ಅಗತ್ಯವಿಲ್ಲ. ಅನಾವಶ್ಯಕವಾಗಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲವೆಂದು ಎಚ್ಚರಿಸಿದ್ದೇನೆ’ ಎಂದು ತಿಳಿಸಿದ್ದಾರೆ.




ಸುಭಾಷಿತ

ಧರ್ಮ ಒಂದೇ ಆದಮಾತ್ರಕ್ಕೆ ಮನುಷ್ಯರ ಮನೋಧರ್ಮ ಒಂದೇ ಆಗಲು ಸಾಧ್ಯವೇ?

–ಕೆ.ಎಸ್.ನಿಸಾರ್ ಅಹಮದ್

ರೈತರಿಗೂ ಗುಣಮಟ್ಟದ ವಿದ್ಯುತ್ ಒದಗಿಸುವುದು ಸರ್ಕಾರದ ಹೊಣೆಗಾರಿಕೆ

ಬಹುತೇಕ ಎಲ್ಲ ಕ್ಷೇತ್ರಗಳ ಅಭಿವೃದ್ಧಿಯೂ ವಿದ್ಯುತ್ ಪೂರೈಕೆಯ ಮೇಲೆ ಅವಲಂಬಿತವಾಗಿದೆ. ಕೈಗಾರಿಕೆ, ಕೃಷಿ, ಪಶುಸಂಗೋಪನೆಯಿಂದ ಹಿಡಿದು ಎಲ್ಲ ಕ್ಷೇತ್ರಗಳ ಚಟುವಟಿಕೆಗೂ ವಿದ್ಯುತ್ ಅನಿವಾರ್ಯ ಎಂಬ ಸ್ಥಿತಿ ಇದೆ. ಯಾವ ಕ್ಷೇತ್ರಕ್ಕೆ ಎಷ್ಟು ಅವಧಿಯವರೆಗೆ ಗುಣಮಟ್ಟದ ವಿದ್ಯುತ್ ಪೂರೈಕೆಯಾಗುತ್ತದೆ ಎಂಬುದೇ ಆ ಕ್ಷೇತ್ರದ ಅಭಿವೃದ್ಧಿಯ ಅಥವಾ ಹಿನ್ನಡೆಯನ್ನು ನಿರ್ಧರಿಸುವಂತಾಗಿದೆ. ಈವರೆಗೂ ಹೆಚ್ಚಿನ ಸಂದರ್ಭಗಳಲ್ಲಿ ಕೈಗಾರಿಕೆಗಳಿಗೆ ಮಾತ್ರ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗೆ ಪೂರಕವಾಗಿ ನೀರಾವರಿ ಪಂಪ್‌ಸೆಟ್‌ಗಳ ಬಳಕೆಗೆ ಹೆಚ್ಚು ಅವಧಿಯ ನಿರಂತರ ವಿದ್ಯುತ್ ಪೂರೈಕೆಯಾಗುತ್ತಿರಲಿಲ್ಲ. ಹಗಲಿನ ಅವಧಿಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ 'ತ್ರೀಫೇಸ್' ವಿದ್ಯುತ್ ಪೂರೈಕೆಗೆ ಇಂಧನ ಇಲಾಖೆ ಆಸಕ್ತಿ ತೋರುತ್ತಿಲ್ಲ. ಕೈಗಾರಿಕೆಗಳಿಗೆ ಹಗಲಿನ ವೇಳೆಯಲ್ಲಿ ಹೆಚ್ಚು ವಿದ್ಯುತ್ ಪೂರೈಕೆ ಮಾಡಿ, ಗ್ರಾಮೀಣ ಪ್ರದೇಶದಲ್ಲಿ ತಡರಾತ್ರಿಯ ಬಳಿಕ ತ್ರೀಫೇಸ್ ವಿದ್ಯುತ್ ಪೂರೈಕೆ ಮಾಡುವ ಕ್ರಮ ಸಾಮಾನ್ಯ ಎಂಬಂತೆ ನಡೆದುಕೊಂಡು ಬಂದಿದೆ. ಇದರಿಂದಾಗಿ ರೈತರು ತ್ರೀಫೇಸ್ ವಿದ್ಯುತ್ ಪೂರೈಕೆಗಾಗಿ ನಿದ್ದೆ ಬಿಟ್ಟು ಕಾದು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ. ತಡರಾತ್ರಿ ನೀರಾವರಿ ಪಂಪ್‌ಸೆಟ್‌ಗಳನ್ನು ಚಾಲನೆ ಮಾಡಲು ಹೋಗುವ ರೈತರು ಹಾವು, ಚೇಳು ಮುಂತಾದ ವಿಷಜಂತುಗಳ ಕಡಿತದಿಂದ ಸಾವು, ನೋವು ಅನುಭವಿಸುವ ಘಟನೆಗಳು ಆಗಾಗ ನಡೆಯುತ್ತಲೇ ಇರುತ್ತವೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೈಗಾರಿಕೆ, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಬಳಕೆಗೆ ಗುಣಮಟ್ಟದ ವಿದ್ಯುತ್ ಪೂರೈಸುವುದಕ್ಕೆ ಏಕರೂಪದ ನೀತಿಯನ್ನು ಅನುಸರಿಸುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಸಮಯ ಗುಣಮಟ್ಟದ ವಿದ್ಯುತ್ ಪೂರೈಕೆ ಆಗುತ್ತಿದ್ದರೆ, ಇನ್ನು ಕೆಲವು ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ದೀಪ ಉರಿಸುವುದಕ್ಕೂ ಕಷ್ಟಪಡಬೇಕಾದ ಕಡಿಮೆ ಸಾಮರ್ಥ್ಯದ ವಿದ್ಯುತ್ ಪೂರೈಕೆಯಾಗುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮಾಣದಲ್ಲಿ ಹಲವು ಪಟ್ಟು ಹೆಚ್ಚಳ ಆಗಿದ್ದರೂ ಸರಿಯಾದ ವಿತರಣಾ ನೀತಿ ಮತ್ತು ಪೂರೈಕೆ ವ್ಯವಸ್ಥೆ ಇಲ್ಲದಿರುವುದರಿಂದ ಗ್ರಾಮೀಣ ಪ್ರದೇಶದ ಜನರು ಪರದಾಡಬೇಕಾದ ಸ್ಥಿತಿ ಇದೆ. ರಾಜ್ಯದಲ್ಲಿ ಬೇಡಿಕೆಗಿಂತಲೂ ಹೆಚ್ಚು ವಿದ್ಯುತ್ ಲಭ್ಯ ಇರುವಾಗಲೂ 15 ಜಿಲ್ಲೆಗಳಲ್ಲಿ ಮಾತ್ರ ಏಳು ಗಂಟೆಗಳ ಕಾಲ ತ್ರೀಫೇಸ್ ವಿದ್ಯುತ್ ಪೂರೈಕೆಯಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ಐದು ಗಂಟೆಗಳಷ್ಟು ಕೂಡ ತ್ರೀಫೇಸ್ ವಿದ್ಯುತ್ ಪೂರೈಕೆ ಆಗುತ್ತಿಲ್ಲ ಎಂಬುದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಬಹಿರಂಗಪಡಿಸಿದ್ದಾರೆ. ಇದು, ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಇರುವ ಅಸಮಾನತೆಗೆ ಸಾಕ್ಷ್ಯ ಒದಗಿಸಿದೆ.



ಗುಣಮಟ್ಟದ ವಿದ್ಯುತ್ ಪೂರೈಕೆಯು ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿ ಆಗಲಿದೆ

ರಾಜ್ಯದಲ್ಲಿ ಬಹುತೇಕ ಅಣೆಕಟ್ಟೆಗಳು ಭರ್ತಿಯಾಗುವ ಹಂತ ತಲುಪಿದ್ದು, ಜಲ ವಿದ್ಯುತ್ ಘಟಕಗಳಲ್ಲಿ ಸಾಮರ್ಥ್ಯದ ಪೂರ್ಣ ಪ್ರಮಾಣದಲ್ಲಿ ಉತ್ಪಾದನೆ ಆಗುತ್ತಿದೆ. ಸೌರಶಕ್ತಿ ಮತ್ತು ಪವನ ವಿದ್ಯುತ್ ಉತ್ಪಾದನೆಯಲ್ಲೂ ಹಲವು ಪಟ್ಟು ಹೆಚ್ಚಳವಾಗಿದೆ. ರಾಜ್ಯ ಸರ್ಕಾರದ ಒಡೆತನದ ಜಲ ವಿದ್ಯುದಾಗಾರಗಳು, ಉಷ್ಣ ವಿದ್ಯುತ್ ಸ್ಥಾವರಗಳು, ಸೌರಶಕ್ತಿ ಘಟಕಗಳು, ಪವನ ವಿದ್ಯುತ್ ಘಟಕಗಳು, ಕೇಂದ್ರ ಸರ್ಕಾರಿ ಸ್ವಾಮ್ಯದ ಉಷ್ಣ ವಿದ್ಯುತ್ ಸ್ಥಾವರಗಳು, ಅಣು ವಿದ್ಯುತ್ ಸ್ಥಾವರಗಳು ಹಾಗೂ ಖಾಸಗಿ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯಕ್ಕೆ ವಿದ್ಯುತ್ ಪೂರೈಕೆಯಾಗುತ್ತಿದೆ. ಒಟ್ಟು ಉತ್ಪಾದನೆ ಮತ್ತು ಪೂರೈಕೆಯ ಸಾಮರ್ಥ್ಯಕ್ಕಿಂತಲೂ ಕಡಿಮೆ ವಿದ್ಯುತ್ ಬಳಕೆಯಾಗುತ್ತಿದೆ ಎಂಬುದನ್ನು ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಂಧನ ಇಲಾಖೆಯ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಈಗಲೂ ಮಳೆಯ ಕೊರತೆಯಿಂದ ಬರದ ವಾತಾವರಣ ಇದೆ. ಇಂತಹ ಸ್ಥಿತಿಯಲ್ಲಿ ಹೆಚ್ಚು ಅವಧಿಯವರೆಗೆ ತ್ರೀಫೇಸ್ ವಿದ್ಯುತ್ ಪೂರೈಸುವ ಮೂಲಕ ರೈತರ ನೆರವಿಗೆ ಬರಬೇಕಾದುದು ರಾಜ್ಯ ಸರ್ಕಾರದ ಜವಾಬ್ದಾರಿ. ವಿದ್ಯುತ್ ಉತ್ಪಾದನೆಯಲ್ಲಿ ಮಿಗತೆ ಸಾಧಿಸಿರುವ ಪ್ರಯೋಜನವು ಗ್ರಾಮೀಣ ಪ್ರದೇಶಗಳ ರೈತರಿಗೆ ಸಿಗುವಂತಾಗಬೇಕು. ಅಧಿಕ ಮಳೆ ಬೀಳುತ್ತಿರುವ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಹೆಚ್ಚಿನ ಅವಧಿಯಲ್ಲಿ ತ್ರೀಫೇಸ್ ವಿದ್ಯುತ್ ಒದಗಿಸಬೇಕು. ಈ ದಿಸೆಯಲ್ಲಿ ಮುಖ್ಯಮಂತ್ರಿ ನೀಡಿರುವ ಸೂಚನೆ ಸ್ವಾಗತಾರ್ಹ. ಆದರೆ, ಮುಖ್ಯಮಂತ್ರಿಯವರ ಸೂಚನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುವ ಮೂಲಕ ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆ ತರಬೇಕಿರುವುದು ಇಂಧನ ಇಲಾಖೆಯ ಹೊಣೆಗಾರಿಕೆ. ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಬಳಕೆಯಾಗುವ ವಿದ್ಯುತ್‌ಗೆ ರೈತರ ಬಿಲ್ ಪಾವತಿಸುವುದಿಲ್ಲ ಎಂಬ ಕಾರಣ ಮುಂದಿಟ್ಟುಕೊಂಡು ಗುಣಮಟ್ಟದ ವಿದ್ಯುತ್ ಒದಗಿಸದೇ ಇರುವುದು ಸಮಂಜಸವಲ್ಲ. ಗುಣಮಟ್ಟದ ವಿದ್ಯುತ್ ಪೂರೈಕೆಯಿಂದ ಕೃಷಿ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾಗುತ್ತದೆ. ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಲು ಅನುಕೂಲ ಆಗುತ್ತದೆ. ಎಲ್ಲ ಕ್ಷೇತ್ರಗಳು ಮತ್ತು ರಾಜ್ಯದ ಎಲ್ಲ ಜಿಲ್ಲೆಗಳನ್ನೂ ಸಮಾನವಾಗಿ ಪರಿಗಣಿಸಿ ವಿದ್ಯುತ್ ಪೂರೈಸುವ ನೀತಿಯೊಂದನ್ನು ರೂಪಿಸಿ, ಅನುಷ್ಠಾನಕ್ಕೆ ತರಬೇಕು. ನಗರ– ಗ್ರಾಮೀಣ, ಉದ್ದಿಮೆಗಳು– ಕೃಷಿಕರು ಮುಂತಾದ ಅಂಶಗಳ ಆಧಾರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ತಾರತಮ್ಯಕ್ಕೆ ಅವಕಾಶ ನೀಡದಂತೆ ಕ್ರಮ ಕೈಗೊಳ್ಳಬೇಕು. ಹೆಚ್ಚಿನ ವಿದ್ಯುತ್ ಲಭ್ಯವಿರುವಾಗಲೂ ರೈತರು ತಮ್ಮ ಹೊಲ, ತೋಟಗಳಿಗೆ ನೀರು ಹಾಯಿಸಲು ತಡರಾತ್ರಿಯವರೆಗೂ ನಿದ್ದೆಬಿಟ್ಟು ಕಾಯಬೇಕಾದ ಪರಿಸ್ಥಿತಿಯನ್ನು ನಿವಾರಿಸುವ ಮೂಲಕ ಇಂಧನ ಇಲಾಖೆಯು ಜನಸ್ನೇಹಿಯಾಗಿ ವರ್ತಿಸಬೇಕಿದೆ.

ದಿನದ ಟ್ವೀಟ್

ಆನೆಗಳಿಂದ ಪ್ರಕೃತಿಯ ಉಳಿವು



27 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಏಷ್ಯಾ ಆನೆಗಳನ್ನು ಹೊಂದುವ ಮೂಲಕ ಭಾರತವು ಈ ಬಗೆಯ ಆನೆಗಳ ಒಟ್ಟು ಪ್ರಮಾಣದಲ್ಲಿ ಶೇ 55ರಷ್ಟನ್ನು ಒಳಗೊಂಡಿದೆ. ವಿಶ್ವ ಆನೆ ದಿನಾಚರಣೆಯ ಈ ಸಂದರ್ಭದಲ್ಲಿ, ದಂತದ ಉತ್ಪನ್ನಗಳ ಬಳಕೆಯಿಂದ ದೂರವುಳಿದು, ಆನೆಗಳು ಈ ಭೂಮಿಯಲ್ಲಿ ಬದುಕಲು ನೆರವಾಗುವಂತೆ ಜಾಗೃತಿ ಮೂಡಿಸೋಣ.

ವಿನಯ್ ಪ್ರಸಾದ್ ಎಲ್.ಆರ್., ನಾಗರಿಕ

ಕಿಡಿನುಡಿ



ಕಾಂಗ್ರೆಸ್ ಪಕ್ಷ ಬಡವರ ಹಸಿವು ನೀಗಿಸಲು ರಾಜ್ಯದಾದ್ಯಂತ ಇಂದಿರಾ ಕ್ಯಾಂಟೀನ್ ಆರಂಭಿಸಿದೆ. ಇಂದಿರಾ ಗಾಂಧಿ ಹೆಸರಲ್ಲಿ ಹುಕ್ಕಾ ಬಾರ್ ಬೇಕಾದರೆ ಮಾಡಿಕೊಳ್ಳಲಿ ಎಂಬ ಸಿ.ಟಿ.ರವಿ ಹೇಳಿಕೆ ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಹುಕ್ಕಾ ಬಾರ್, ಗಾಂಜಾ, ಕುಡಿದು ಗಾಡಿ ಚಲಾಯಿಸಿ ಪ್ರಾಣ ಬಲಿ ಪಡೆಯುವುದು ಸಿ.ಟಿ.ರವಿ ಹಾಗೂ ಬಿಜೆಪಿಯವರ ಸಂಸ್ಕೃತಿ.

ರಾಮಲಿಂಗಾರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 13-8-1996

• **ಆಲಮಟ್ಟಿ: ತಜ್ಞರ ಖುದ್ದು ಸಮೀಕ್ಷೆ**

ನವದೆಹಲಿ, ಆಗಸ್ಟ್ 12– ಆಲಮಟ್ಟಿ ಅಣೆಕಟ್ಟು ವಿವಾದವನ್ನು ಶೀಘ್ರವಾಗಿ ಪರಿಹರಿಸುವ ಮೊದಲ ಯತ್ನವಾಗಿ ಸಂಯುಕ್ತ ರಂಗದ ನಾಲ್ವರು ಮುಖ್ಯಮಂತ್ರಿಗಳು ಇಂದು ವಿವಾದದ ವಾಸ್ತವ ಸ್ಥಿತಿ ಅಧ್ಯಯನಕ್ಕೆ 9 ಮಂದಿ ತಜ್ಞರ ಸಮಿತಿಯನ್ನು ರಚಿಸಿದ್ದಾರೆ. ಈ ಸಮಿತಿ ಬುಧವಾರ ಆಲಮಟ್ಟಿಗೆ ಆಗಮಿಸಿ ಖುದ್ದು ಸಮೀಕ್ಷೆ ನಡೆಸಲಿದೆ.

ಪ್ರಧಾನಿ ನಿವಾಸದಲ್ಲಿ ಬೆಳಿಗ್ಗೆ ಸಭೆ ಸೇರಿದ ಜ್ಯೋತಿ ಬಸು, ಎಂ. ಕರುಣಾನಿಧಿ, ಲಾಲೂ ಪ್ರಸಾದ್ ಯಾದವ್ ಮತ್ತು ಪ್ರಫುಲ್ಲ ಕುಮಾರ್ ಮಹಂತ ಅವರು ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರುಗಳ ಜತೆ ಚರ್ಚಿಸಿದರು. ಎರಡೂ ರಾಜ್ಯದವರು ತಮ್ಮ ವಾದಕ್ಕೆ ಅಂಟಿಕೊಂಡಿದ್ದರಿಂದ ಸತ್ಯಶೋಧನಾ ಸಮಿತಿ ರಚಿಸಲು ನಿರ್ಧರಿಸಲಾಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 13-8-1971

• **ರಾಜ್ಯಸಭೆಯಿಂದ ಹೊರಕ್ಕೆ**

ನವದೆಹಲಿ, ಆಗಸ್ಟ್ 12– ಸಭೆಯಿಂದ ಹೊರಹೋಗಲು ನಿರಾಕರಿಸಿದ ಎಸ್.ಎಸ್.ಪಿ.ಯ ರಾಜನಾರಾಯಣ್ ಅವರನ್ನು ರಾಜ್ಯಸಭೆಯ ಈ ಅಧಿವೇಶನದ ಉಳಿದ ಅವಧಿಯಿಂದ ಸಸ್ಪೆಂಡ್ ಮಾಡಿದ ನಂತರ ಅವರನ್ನು ಬಲಾತ್ಕಾರವಾಗಿ ಹೊರಕ್ಕೆ ಒಯ್ಯಲಾಯಿತು.

ಷೇಖ್ ಮುಜೀಬುರ್ ರಹಮಾನರ ಬಿಡುಗಡೆ ಕುರಿತ ಗಮನ ಸೆಳೆಯುವ ಸೂಚನೆಯನ್ನು ಸಭೆ ಚರ್ಚಿಸುತ್ತಿದ್ದಾಗ, ಪದೇ ಪದೇ ತಾವು ಮಾಡುತ್ತಿದ್ದ ಕೋರಿಕೆಯನ್ನು ಲೆಕ್ಕಿಸದೆ ರಾಜನಾರಾಯಣ್ ಮಾತನಾಡುತ್ತಲೇ ಇದ್ದುದರಿಂದ ಸಭಾಪತಿ ಜಿ.ಎಸ್.ಪಾಠಕ್, ಅವರನ್ನು ಹೊರಕ್ಕೆ ಒಯ್ಯುವಂತೆ ಮಾರ್ಷಲ್‌ಗೆ ಆಜ್ಞಾಪಿಸಿದರು.

ಭೂಶಾಖ ಶಕ್ತಿ ಸ್ಥಾವರಗಳಿಂದ ಶಕ್ತಿ ಪಡೆಯುವ ಚಿಂತನೆ ಈಗ ಗಟ್ಟಿಯಾಗುತ್ತಿದೆ

ಜಿಯೊಥರ್ಮಲ್ ಸುತ್ತ ಹರಿಯಲಿ ಚಿತ್ತ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ವಾಯುಗುಣ ತುರ್ತುಪರಿಸ್ಥಿತಿಯ ಇಂದಿನ ದಿನಗಳಲ್ಲಿ ಭೂಮಿಯನ್ನು ಈಗಿನ ಸ್ಥಿತಿಯಲ್ಲೇ ಕಾಪಾಡಿಕೊಳ್ಳಲು ಪಳೆಯುಳಿಕೆ (ಫಾಸಿಲ್) ಇಂಧನಗಳಾದ ಮೀಥೇನ್, ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು ಬಳಕೆಯನ್ನು ಸಂಪೂರ್ಣ ನಿಲ್ಲಿಸಬೇಕು ಎಂದು ತಜ್ಞರು ಹೇಳುತ್ತಿದ್ದಾರೆ. ಲೆಕ್ಕದ ಪ್ರಕಾರ, ನಮ್ಮೆಲ್ಲರ ಚಟುವಟಿಕೆಗಳಿಂದ ವಾರ್ಷಿಕ 5,100 ಕೋಟಿ ಟನ್‌ಗಳಷ್ಟು ಶಾಖವರ್ಧಕ ಅನಿಲಗಳು ವಾತಾವರಣಕ್ಕೆ ಸೇರುತ್ತಿವೆ. ಇದುವರೆಗೂ ಭೂಮಿ 'ಬೆಚ್ಚಗಾಗುತ್ತಿದೆ' ಎನ್ನುತ್ತಿದ್ದೆವು, ಈಗ ಬಿಸಿಯಾಗುತ್ತಿದೆ ಎಂದು ಹೇಳಬೇಕಿದೆ.

ವಿಶ್ವದ ಎಲ್ಲ ರಾಷ್ಟ್ರಗಳೂ ಮಾಡಿಕೊಂಡ ಒಪ್ಪಂದ ಮತ್ತು ಆಡಿದ ಮಾತಿನಂತೆ ನಡೆದು ಬಿಸಿಯನ್ನು ಕಡಿಮೆ ಮಾಡಬೇಕಿದೆ. ಅಭಿವೃದ್ಧಿಗಾಗಿ ನಮಗೆ ಬೇಕಾದ ಶಕ್ತಿಯನ್ನು ಕಾರ್ಬನ್‌ಮುಕ್ತ ಮೂಲಗಳಿಂದಲೇ ಪಡೆಯಬೇಕು ಮತ್ತು ಉನ್ನತ ತಂತ್ರಜ್ಞಾನ ಬಳಸಿ ಗುರಿ ತಲುಪಬೇಕು.

ಆದರೆ, ಪ್ರಸ್ತುತ ಜಗತ್ತಿನ ಒಟ್ಟು ಶಕ್ತಿ ಉತ್ಪಾದನೆಯಲ್ಲಿ ಪಳೆಯುಳಿಕೆ ಇಂಧನಗಳ ಪಾಲು ಶೇಕಡ 65ರಷ್ಟಿದೆ. ಕಲ್ಲಿದ್ದಲಿನಿಂದ ಶೇ 36, ನೈಸರ್ಗಿಕ ಅನಿಲದಿಂದ ಶೇ 23, ನೀರಿನಿಂದ ಶೇ 10, ಪರಮಾಣು ಸ್ಥಾವರದಿಂದ ಶೇ 10, ಪೆಟ್ರೋಲ್– ಡೀಸೆಲ್‌ನಿಂದ ಶೇ 3, ಸೂರ್ಯ, ಗಾಳಿ ಮತ್ತು ಬಯೊಮಾಸ್‌ಗಳಿಂದ ಶೇ 11 ಮತ್ತು ಇತರ ಮೂಲಗಳಿಂದ ಶೇ 1ರಷ್ಟು ಶಕ್ತಿ ಉತ್ಪಾದನೆಯಾಗುತ್ತಿದೆ. ಉಷ್ಣ ಸ್ಥಾವರಗಳಲ್ಲಿ ಉರಿಸುವ ಕಲ್ಲಿದ್ದಲು ಅಪಾರ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಹೊಮ್ಮಿಸುವುದರಿಂದ ಭೂಮಿಯ ಬಿಸಿ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಈಗ ಅದರ ಬದಲಿಗೆ ಭೂಶಾಖ ಶಕ್ತಿ (Geo Thermal energy) ಸ್ಥಾವರಗಳಿಂದ ಶಕ್ತಿ ಪಡೆಯುವ ಚಿಂತನೆ ಗಟ್ಟಿಯಾಗುತ್ತಿದೆ.

ಭೂಮಿಯ ಒಳಪದರಗಳಲ್ಲಿ ಹರಿಯುವ ಲಾವಾ, ಬಿಸಿನೀರ ಬುಗ್ಗೆಗಳು, ಸೂರ್ಯನಿಂದ ಹೀರಿಕೊಂಡ ಬಿಸಿ, ಶಿಲಾಸ್ತರಗಳಲ್ಲಿರುವ ತಾಪಮಾನ ಮತ್ತು ಭೂಮಿಯಾಳದ ಪೊಟ್ಯಾಶಿಯಂ, ಥೋರಿಯಂ ಮತ್ತು ಯುರೇನಿಯಂ ಕ್ಷಯಿಸುವುದರಿಂದ ಹುಟ್ಟುವ ಶಾಖದಿಂದ ಪಡೆಯುವ ಶಕ್ತಿಯ ಇನ್ನೊಂದು ಹೆಸರು ಜಿಯೊಥರ್ಮಲ್ ಎನರ್ಜಿ.

ನಮಗೆ ಬೇಕೆನಿಸಿದಷ್ಟು ಭೂಶಾಖ ಶಕ್ತಿ ಪಡೆಯಲು ಸುಮಾರು 3,000 ಮೀಟರ್‌ವರೆಗೆ ಭೂಮಿಯ ಆಳಕ್ಕೆ ಕೊರೆಯಬೇಕು. ಲಭ್ಯವಿರುವ ಅತ್ಯಂತ ಮುಂದುವರಿದ ತಂತ್ರಜ್ಞಾನ ಬಳಸಿ ಈಗಾಗಲೇ ಹತ್ತತ್ತಿರ 2,700 ಮೀಟರ್‌ವರೆಗೆ ಕೊರೆದಾಗಿದೆ. 1,500 ಮೀಟರ್‌ವರೆಗೆ ಈಗಾಗಲೇ ಕೊರೆದು ಶೇ 10ರಷ್ಟು ಭೂಶಾಖ ಶಕ್ತಿಯನ್ನು ಪಡೆಯುತ್ತಿದ್ದೇವೆ. ಇಟಲಿಯ ಲಾರ್ಡೆರೆಲ್ಲೊ ಟುಸ್ಕಾನಿಯಲ್ಲಿ ಈಗಾಗಲೇ 1,800 ಮೀಟರ್ ಆಳಕ್ಕೆ ಕೊರೆಯಲಾಗಿದ್ದು, ಅಲ್ಲಿಂದ ವಿಶ್ವದ ಒಟ್ಟು ಭೂಶಾಖ ಶಕ್ತಿಯ ಶೇ 10ರಷ್ಟನ್ನು ವಿದ್ಯುತ್ತನ್ನಾಗಿ ಪರಿವರ್ತಿಸಿ ಬಳಸಲಾಗುತ್ತಿದೆ. ಅಮೆರಿಕದ ಕ್ಯಾಲಿಫೋರ್ನಿಯ ಪ್ರಾಂತ್ಯದ 117 ಚದರ ಕಿ.ಮೀ ವಿಸ್ತೀರ್ಣದ 'ದ ಗೀಸರ್ಸ್' ಎಂಬಲ್ಲಿ 22 ಸ್ಥಾವರಗಳನ್ನು ನಿರ್ಮಿಸಿದ್ದು, ವಾರ್ಷಿಕ 1.5 ಗಿಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

1907ರಲ್ಲಿ ಐಸ್‌ಲ್ಯಾಂಡ್‌ನಲ್ಲಿ ಶುರುವಾದ ಸ್ಥಾವರದಿಂದ ದೇಶದ ಶೇ 25ರಷ್ಟು ವಿದ್ಯುತ್ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ಅಲ್ಲಿರುವ 600 ಬಿಸಿನೀರು ಬುಗ್ಗೆಗಳು ಮತ್ತು 200 ಜ್ವಾಲಾಮುಖಿಗಳಿಂದ ಇದು ಸಾಧ್ಯವಾಗುತ್ತಿದೆ. ವಿಶ್ವದಾದ್ಯಂತ 22 ದೇಶಗಳಲ್ಲಿ 450ಕ್ಕೂ ಹೆಚ್ಚು ಭೂಶಾಖ ಶಕ್ತಿಯ ಸ್ಥಾವರಗಳಿವೆ. 18 ಗಿಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಆರು ಕೋಟಿ ಜನ ಬಳಸುತ್ತಿದ್ದಾರೆ. ಜಗತ್ತಿನ ಒಟ್ಟು ವಿದ್ಯುತ್ ಬೇಡಿಕೆಯ ಶೇ 6.5ರಷ್ಟನ್ನು ಜಿಯೊಥರ್ಮಲ್‌ಗಳಿಂದ ಉತ್ಪಾದಿಸಬಹುದಾದ ಸಾಧ್ಯತೆಗಳಿವೆ.

ಬ್ರಿಟಿಷ್ ಜಿಯಾಲಾಜಿಕಲ್ ಸರ್ವೆ ಪ್ರಕಾರ, ಭೂಶಾಖ ಶಕ್ತಿಯು ಸಂಪೂರ್ಣ ಇಂಗಾಲಮುಕ್ತವಾಗಿದ್ದು ಸುಸ್ಥಿರ ಶಕ್ತಿ ಮೂಲ ಎಂದೇ ಪ್ರಸಿದ್ಧವಾಗಿದೆ. ನೈಸರ್ಗಿಕ ಅನಿಲ ಸ್ಥಾವರ ಹೊಮ್ಮಿಸುವ ಇಂಗಾಲದ ಪ್ರಮಾಣಕ್ಕಿಂತ ಆರು ಪಟ್ಟು ಕಡಿಮೆ ಇಂಗಾಲವು ಭೂಶಾಖ ಶಕ್ತಿ ಸ್ಥಾವರಗಳಿಂದ ಹೊಮ್ಮುವುದರಿಂದ ಇದು ತಜ್ಞರ ಫೇವರಿಟ್ ಎನ್ನಿಸಿದೆ. ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಂಡಲ್ಲಿ ಇಡೀ ಜಗತ್ತು ಈಗ ಉತ್ಪಾದಿಸುತ್ತಿರುವ ಒಟ್ಟು ಶಕ್ತಿಯ ಮೂರು ಪಟ್ಟು ಹೆಚ್ಚಿನ ವಿದ್ಯುತ್ತನ್ನು ಭೂಶಾಖ ಶಕ್ತಿ ಸ್ಥಾವರಗಳಿಂದ ಪಡೆಯಬಹುದಾಗಿದೆ.

ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದವರು ಹಿಮಾಲಯ, ಕ್ಯಾಂಬೇ ಕೊಳ್ಳ, ಸೋನ್- ನರ್ಮದ- ತಾಪಿ ನದಿಗಳ ಸಾಲು, ಪಶ್ಚಿಮ ಕರಾವಳಿ, ಗೋದಾವರಿ ಹಾಗೂ ಮಹಾನದಿ ಕೊಳ್ಳಗಳಲ್ಲಿರುವ 340 ಭೂಶಾಖ ಶಕ್ತಿ ಜಾಗಗಳನ್ನು ಗುರುತಿಸಿದ್ದಾರೆ. ಅಲ್ಲಿನ ಉಷ್ಣತೆ 37ರಿಂದ 90 ಡಿಗ್ರಿ ಸೆಂಟಿಗ್ರೇಡ್ ಒಳಗಿರುವುದರಿಂದ ಬಿಸಿಯನ್ನು ನೇರವಾಗಿ ಬಳಸಿಕೊಂಡು ವಸ್ತು, ಮನೆಗಳನ್ನು ಹೀಟ್ ಮಾಡಬಹುದು. ಲೇಹ್- ಲಡಾಕ್‌ನಿಂದ 180 ಕಿ.ಮೀ. ದೂರದಲ್ಲಿರುವ ಪುಗದಲ್ಲಿ ಬಿಸಿನೀರಿನ ಬುಗ್ಗೆಗಳ ತಾಪಮಾನ 30- 80 ಡಿ.ಸೆಂ. ಇದ್ದು, ನಮ್ಮ ಭೂಶಾಖ ಶಕ್ತಿ ಸ್ಥಾವರಗಳಿಂದ 10.6 ಗಿಗಾವಾಟ್ ಶಕ್ತಿ ಉತ್ಪಾದಿಸಲು ಅವಕಾಶವಿದೆ. ಹಿಮಾಚಲದ ಕುಲು ಕಣಿವೆಯಿಂದ ಪೂರ್ವಕ್ಕೆ 50 ಕಿ.ಮೀ. ದೂರ ಮತ್ತು 1,700 ಮೀಟರ್ ಎತ್ತರವಿರುವ ಮಣಿಕರಣ್‌ನಲ್ಲಿ 707 ಮೀಟರ್ ಆಳಕ್ಕೆ 9 ಬಾವಿಗಳನ್ನು ಕೊರೆಯಲಾಗಿದ್ದು 8ರಲ್ಲಿ 45ರಿಂದ 96 ಡಿ.ಸೆಂ. ಬಿಸಿನೀರು ಉಕ್ಕುತ್ತಿದೆ.

ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳ ಒಟ್ಟು 51 ಜಿಯೊಥರ್ಮಲ್ ಜಾಗಗಳಲ್ಲಿ ಭೂಶಾಖ 35ರಿಂದ 88 ಡಿ.ಸೆಂ.ವರೆಗಿದೆ. ದಕ್ಷಿಣದ ಗೋದಾವರಿ ಕೊಳ್ಳದ ಅಗ್ನಿಗುಂಡಂ ಮತ್ತು ಇರಾಡೆ ಭಾಗಗಳಲ್ಲಿ ಬಿಸಿನೀರು ಚಿಲುಮೆಯ ತಾಪಮಾನ 62 ಡಿ.ಸೆಂ. ಇರುವುದು ಪತ್ತೆಯಾಗಿದೆ. ಅಂಡಮಾನ್ ಮತ್ತು ನಿಕೋಬಾರ್ ಭಾಗದ ಟರ್ರೆನ್ ಮತ್ತು ನಾರ್ಕೊಂಡಂ ದ್ವೀಪಗಳ ಎಳೆಯ ಜ್ವಾಲಾಮುಖಿಗಳಲ್ಲಿನ ಭೂಶಾಖ ಶಕ್ತಿ 100ರಿಂದ 500 ಡಿಗ್ರಿ ಸೆಂಟಿಗ್ರೇಡ್‌ವರೆಗಿದೆ.

ಆದರೆ ಇದರಿಂದ ಹೊಮ್ಮುವ ಗಂಧಕದ ಡೈ ಆಕ್ಸೈಡ್ ಮತ್ತು ಹೈಡ್ರೋಜನ್ ಸಲ್ಫೈಡ್‌ಗಳು ಇಂಗಾಲಕ್ಕಿಂತ ಹೆಚ್ಚು ಅಪಾಯಕಾರಿಯಾಗಿದ್ದು ವಾತಾವರಣದ ಮಾಲಿನ್ಯಕ್ಕೆ ಕಾರಣವಾಗುತ್ತವೆ. 3 ಕಿ.ಮೀ. ಆಳದವರೆಗೆ ಬಾವಿ ಕೊರೆದರೆ ಭೂಕಂಪದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇನ್ನೂ ಆಳಕ್ಕೆ ಹೋದಾಗ ಭೂಮಿಯ ಚಟುವಟಿಕೆಯಲ್ಲಿ ಏನೆಲ್ಲ ವ್ಯತ್ಯಾಸಗಳಾಗಬಹುದು ಎಂಬುದಕ್ಕೆ ತಜ್ಞರ ಬಳಿ ಸದ್ಯಕ್ಕೆ ಉತ್ತರಗಳಿಲ್ಲ. ಈಗಾಗಲೇ ಕೊರೆದ ಶೇ 40ರಷ್ಟು ಜಾಗಗಳಲ್ಲಿ ಥರ್ಮಲ್ ನಿಕ್ಷೇಪಗಳಿಲ್ಲದಿರುವುದು, ಖರ್ಚು ಮತ್ತು ವಿದ್ಯುತ್ತಿನ ಬಳಕೆ ಅಗಾಧವಾಗಿರುವುದು ಉತ್ಪಾದಕರನ್ನು ನಿರುತ್ಸಾಹಗೊಳಿಸಿದೆ. ಅದಕ್ಕಾಗಿ ಜಿಯೊಥರ್ಮಲ್ ಜಾಗಗಳನ್ನು ಪತ್ತೆಹಚ್ಚುವ ಅತ್ಯಾಧುನಿಕ ಸೆನ್ಸರ್‌ಗಳನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ. ಜ್ವಾಲಾಮುಖಿಯ ಜಾಗಗಳಲ್ಲಿ ಜಿಯೊಥರ್ಮಲ್ ಸ್ಥಾವರಗಳು ಯಶಸ್ವಿಯಾಗುತ್ತವೆ ಎಂಬುದು ತಜ್ಞರ ಅಭಿಮತ.

ವಿಶ್ವದ ಪ್ರತಿಯೊಂದು ರಾಷ್ಟ್ರವೂ ಶಾಖವರ್ಧಕ ಅನಿಲಗಳ ನಿಯಂತ್ರಣಕ್ಕೆ ಪಣ ತೊಡುತ್ತಲೇ ಇದೆ. ನಮಗಿಂತ ಜಾಸ್ತಿ ಜನಬಾಹುಳ್ಯವಿರುವ ಚೀನಾ 2060ರ ವೇಳೆಗೆ ತನಗೆ ಬೇಕಾದ ಎಲ್ಲ ಶಕ್ತಿಯನ್ನು ಪಡೆಯಲು ಸೌರ ವಿದ್ಯುತ್ ಘಟಕಗಳ ಮೊರೆ ಹೋಗುತ್ತಿದೆ. ಜೋ ಬೈಡೆನ್ ಇನ್ನು ಹತ್ತು ವರ್ಷಗಳಲ್ಲಿ ಅಮೆರಿಕದ ಅರ್ಧದಷ್ಟು ಕಾರುಗಳು ಬ್ಯಾಟರಿಯಿಂದ ಓಡಲಿವೆ ಎಂದಿದ್ದಾರೆ. ಯುರೋಪಿಯನ್ ಸಮುದಾಯವು ಕ್ಲೀನ್ ಎನರ್ಜಿಗಾಗಿ ಕೋಟ್ಯಂತರ ಪೌಂಡ್ ಖರ್ಚು ಮಾಡುತ್ತಿದೆ. ನಾವು ಸಹ ಫಾಸಿಲ್ ಇಂಧನಗಳ ಬಳಕೆಯನ್ನು ಇನ್ನು 30 ವರ್ಷಗಳಲ್ಲಿ ಸಂಪೂರ್ಣ ನಿಲ್ಲಿಸಬಹುದೇ ಎಂದು ಯೋಚಿಸಿ, ಸೂರ್ಯನಿಂದ 100, ಗಾಳಿಯಿಂದ 60, ಬಯೊಮಾಸ್‌ನಿಂದ 10 ಹಾಗೂ ನೀರಿನಿಂದ 5 ಹೀಗೆ ಒಟ್ಟು 175 ಗಿಗಾವಾಟ್‌ಗಳ ಹೆಚ್ಚುವರಿ ವಿದ್ಯುತ್ ಶಕ್ತಿ ಉತ್ಪಾದನೆಯ ಕೆಲಸ ಪ್ರಾರಂಭಿಸಿದ್ದೇವೆ.



ಚುರುಮುರಿ



ಆಶೀರ್ವಾದ ಯಾಕೆ?

• ಬಿ.ಎನ್.ಮಲ್ಲೇಶ್

'ಹಲೋ... ಸಿದ್ರಾಮಣ್ಣ ಸಾಹೇಬ್ರಿಗೆ ಹುಟ್ಟುಹಬ್ಬದ ಶುಭಾಶಯಗಳು'.

'ಓ ಏನಪ್ಪಾ ಬೊಮ್ಮಾಯಿ... ಸ್ಸಾರಿ, ಮುಖ್ಯಮಂತ್ರಿಗಳೆ... ನಂಗೆ ಶುಭಾಶಯ ಕೋರೋಕೆ ನಿಮ್ ಹೈಕಮಾಂಡ್ ಪರ್ಮಿಶನ್ ಕೊಡ್ತೋ?'

'ಇದೆಲ್ಲ ಮನುಷ್ಯ ಸಂಬಂಧಗಳು ಸಿದ್ರಾಮಣ್ಣ, ಎಲ್ಲದ್ರಲ್ಲೂ ರಾಜಕೀಯ ಮಾಡೋಕಾಗುತ್ತಾ? ಪೇಪರ್‌ನಲ್ಲಿ ನಿಮ್ಮನ್ನ ಭಾಗ್ಯವಿದಾತ, ಲೋಕನಾಯಕ ಅಂತೆಲ್ಲ ಹೊಗಳಿ ಬರೆದಿದಾರೆ. ನೋಡಿ ಖುಷಿಯಾತು'.

'ಅದೆಲ್ಲ ಯಾರೋ ನಮ್ಮುಡುಗ್ರು, ಮುಂದೆ ಎಮ್ಮೆಲ್ಲೆ ಟಿಕೆಟ್ ಕೇಳೋರು ಹಾಕ್ಸಿರ್ತಾರೆ ಬಿಡಪ್ಪ. ಸತ್ಯ ಏನ್ ಗೊತ್ತಾ? ನನ್ ಹುಟ್ಟಿದಬ್ಬ ಯಾವತ್ತು ಅಂತ ನಂಗೇ ಗೊತ್ತಿಲ್ಲ'.

'ಹೌದಾ? ನೀವು ನೂರು ವರ್ಷ ಚೆನ್ನಾಗಿರ್ಬೇಕು ಸಿದ್ರಾಮಣ್ಣ'.

'ನಾನು ಚೆನ್ನಾಗೇ ಇರ್ತೀನಿ, ಅದಿರ್ಲಿ ನೀನು ಮುಖ್ಯಮಂತ್ರಿ ಆದ ತಕ್ಷಣ ದೊಡ್ಡಗೌಡ್ರ ಕಾಲಿಗೆ ಬಿದ್ದು ಆಶೀರ್ವಾದ ತಗಂಬಂದೆ. ನಂಗೆ ಒಂದು ಹೂಗುಚ್ಛನೂ ಕೊಡಲಿಲ್ಲ?'

'ಅದಕ್ಕೆ ಕಾರಣ ಆಮೇಲೇಳ್ತೀನಿ, ನಿಮ್ ಪಕ್ಷದಲ್ಲಿ ಮುಂದಿನ ಮುಖ್ಯಮಂತ್ರಿ ಕಿತ್ತಾಟ ಜೋರಾಗೈತೆ?'

'ಅದು ಎಲೆಕ್ಷನ್ ಬಂದಾಗ ನೋಡ್ಕಳಾಣ ಬಿಡಪ್ಪ, ನಿನ್ ಕತೆ ಏನು? ಆಗ್ಲೇ ಭಿನ್ನಮತ, ಖಾತೆ ಕಿತ್ತಾಟ ಅಂತಿದ್ಯು?'

'ಅದು ಎಲ್ಲ ಪಕ್ಷದಲ್ಲೂ ಇರೋದೆ. ಆದ್ರೆ ಜನತಾ ಪರಿವಾರದಲ್ಲಿದ್ದಷ್ಟು ಭಿನ್ನಮತ ಬೇರೆಲ್ಲೂ ಇದ್ದಿರಲಿಲ್ಲ ಅಲ್ವ?'

'ಅದ್ಕೇ ಅಲ್ವ ನಾನು ಆ ಪಕ್ಷ ಬಿಟ್ಟು ಕಾಂಗ್ರೆಸ್ ಸೇರ್ಕಂಡಿದ್ದು? ಅದಿರ್ಲಿ, ಏನದು ಖಾತೆ ಕ್ಯಾತೆ?'

'ಅದೂ... ಕೆಲವರಿಗೆ ಇನ್ನೂ ದೊಡ್ಡ ಖಾತೆ, ಪ್ರಬಲ ಖಾತೆ ಬೇಕಂತೆ'.

'ಹುಷಾರು ಕಣಪ್ಪ, ಆಮೇಲೆ ನಿನ್ ಬುಡಕ್ಕೇ ಬಂದುಬಿಟ್ಟಾರು'.

'ನಾನು ದೊಡ್ಡಗೌಡ್ರ ಆಶೀರ್ವಾದ ತಗಂಡಿದ್ದು ಅದ್ಕೇ ಸಿದ್ರಾಮಣ್ಣ, ನನ್ ಕುರ್ಚಿಗೇನಾದ್ರೂ ಆದ್ರೆ ಗೌಡ್ರು ಸಪೋರ್ಟ್ ಮಾಡ್ಲಿ ಅಂತ. ನೀವು ಸಪೋರ್ಟ್ ಮಾಡಲ್ಲ ಅಂತ ಗೊತ್ತು. ಗೊತ್ತಿದ್ದೂ ಗೊತ್ತಿದ್ದೂ ನಿಮಗ್ಯಾಕೆ ಹೂಗುಚ್ಛ ಕೊಟ್ಟು ನಮ್ಮೋರತ್ರ ಬೈಸ್ಕಳ್ಲಿ?'

ಸಂಗತ

ಗೋವಿನಲ್ಲಿ ಗ್ಯಾಸ್ಟ್ರಿಕ್: ಯಾರು ದೋಷಿ?

ಅನ್ನಭಾಗ್ಯದ ಪುಕ್ಕಟೆ ಅಕ್ಕಿಯೆಂದು ಸೇರುಗಟ್ಟಲೆ ಗಂಜಿ ಮಾಡಿ ಜಾನುವಾರುಗಳಿಗೆ ಉಣಿಸುವುದು ಅಪರಾಧ

• ಡಾ. ಮುರಳೀಧರ ಕಿರಣಕೆರೆ

ಹಬ್ಬ ಹರಿದಿನಗಳ ಹೆಬ್ಬಾಗಿಲು ತೆರೆಯುವ ಶ್ರಾವಣ ನಾಡಿಗೆ ಅಡಿಯಿಟ್ಟಿದೆ. ಜನರ ಈ ಹೊತ್ತಿನ ರಸಗವಳದ ಸಂಭ್ರಮ ಜಾನುವಾರುಗಳ ಆರೋಗ್ಯಕ್ಕೆ ಕುತ್ತು ತರುತ್ತಿರುವುದು ಮಾತ್ರ ಗಣನೆಗೆ ಬಾರದ ವಾಸ್ತವ. ಹಬ್ಬದಡುಗೆಯ ಉಳಿಕೆಯೆಲ್ಲಾ ಸೇರುವುದು ಮನೆಯ ದನ-ಕರುಗಳ ಉದರವನ್ನು. ಇನ್ನು ತಮ್ಮಲ್ಲಿ ಗೋವುಗಳಿಲ್ಲದವರು ಮನೆ ಮುಂದೆ ಬರುವ ಹಸುಗಳಿಗೆ ವಿಶೇಷದಡುಗೆಯನ್ನು ಉಣಿಸಿ ಪಾವನರಾಗುತ್ತಾರೆ!

ಹೀಗೆ ಬಹುತೇಕ ಮನೆಗಳಲ್ಲಿ ಪಾಯಸ, ಅನ್ನ, ಗಂಜಿ, ಕಲಗಚ್ಚು ಎಂದೆಲ್ಲಾ ತಿಂದು, ಕುಡಿಯುವ ಜಾನುವಾರುಗಳಿಗೆ ಆ ಕ್ಷಣದಲ್ಲಿ ತೊಂದರೆಯಾಗದಿದ್ದರೂ ಐದಾರು ಗಂಟೆ ಕಳೆಯುತ್ತಿದ್ದಂತೆ ಸಮಸ್ಯೆ ಆರಂಭವಾಗುತ್ತದೆ. ಇದೇ ಸಾಮಾನ್ಯ ಭಾಷೆಯಲ್ಲಿ ಗ್ಯಾಸ್ಟ್ರಿಕ್ ತೊಂದರೆ. 'ರೂಮಿನಲ್ ಅಸಿಡೋಸಿಸ್' ಎಂದು ಕರೆಸಿಕೊಳ್ಳುವ ಜಠರದ ಆಮ್ಲೀಯತೆಯ ಬಾಧೆ ದನ, ಎಮ್ಮೆ, ಕುರಿ, ಮೇಕೆಗಳಲ್ಲಿ ಸಾಮಾನ್ಯ.

ಹಸುಗಳಲ್ಲಿ ಹೊಟ್ಟೆಯದು ತುಂಬಾ ಸಂಕೀರ್ಣ ರಚನೆ. ಮಾನವನಿಗಿರುವುದು ಒಂದೇ ಉದರ. ಅದೇ ಹುಲ್ಲು, ಸೊಪ್ಪುಸದೆಗಳನ್ನು ಮೇಯುವ ಜಾನುವಾರುಗಳ ಹೊಟ್ಟೆಯಲ್ಲಿ ರೂಮೆನ್, ರೆಟಿಕ್ಯುಲಮ್, ಒಮೇಸಮ್ ಮತ್ತು ಅಬೊಮೇಸಮ್ ಎಂಬ ನಾಲ್ಕು ಪ್ರತ್ಯೇಕ ಕೋಣೆಗಳಿರುವುದು ವಿಶೇಷ. ತಮಗೆ ಸಿಕ್ಕಿದ್ದು, ಮಾನವ ಕೊಟ್ಟಿದ್ದನ್ನೆಲ್ಲಾ ಹಿಂದೆ ಮುಂದೆ ನೋಡದೆ ಗಬಗಬನೆ ನುಂಗಿದಾಗ ಅವು ಸೇರುವುದು ಉದರದ ಮೊದಲ ಚೀಲವನ್ನು. ಇದು ಗಾತ್ರದಲ್ಲಿ ತುಂಬಾ ದೊಡ್ಡದು. ಆಹಾರ ತಿಂದು ಮುಗಿಸಿ ವಿಶ್ರಾಂತಿ ತೆಗೆದುಕೊಳ್ಳುವಾಗ ಹೊಟ್ಟೆಯಿಂದ ಬಾಯಿಗೆ ವಾಪಸ್ ತಂದುಕೊಂಡು ಜೊಲ್ಲುರಸದೊಂದಿಗೆ ಚೆನ್ನಾಗಿ ಜಗಿದು ಪುನಃ ನುಂಗುತ್ತವೆ. ಇದೇ ಮೆಲುಕು ಹಾಕುವ ಕ್ರಿಯೆ.

ಹೀಗೆ ಜಗಿದು ನುಂಗಿದ ಆಹಾರ ಒಂದು ಹಂತದವರೆಗೆ ಜೀರ್ಣವಾಗಿ, ಜೇನುಗೂಡಿನಂತಿರುವ ಮುಂದಿನ ಕೋಣೆಗೆ ಹೋಗುತ್ತದೆ. ಮೇವು ತಿನ್ನುವಾಗ ಅಕಸ್ಮಾತ್ತಾಗಿ ಸೇರಿಕೊಂಡ ಮೊಳೆ, ತಂತಿ, ಕಬ್ಬಿಣದ ಚೂರುಗಳು ಇಲ್ಲಿಯೇ ತಡೆಯಲ್ಪಟ್ಟು ಮುಂದೆ ಕರುಳಿಗೆ ಗಾಸಿಯಾಗುವುದು ತಪ್ಪುತ್ತದೆ.

ಮೂರನೇ ಭಾಗದಲ್ಲಿ ಆಹಾರ ಮತ್ತಷ್ಟು ಜೀರ್ಣವಾಗಿ ಬಹುಪಾಲು ನೀರಿನಂಶ ಹೀರಲ್ಪಡುತ್ತದೆ. ಹೊಟ್ಟೆಯ ಕೊನೆಯ ಕೋಣೆಯದ್ದು ಮಾನವನ ಜಠರದ ರೀತಿಯ ಕಾರ್ಯನಿರ್ವಹಣೆ. ಇಲ್ಲಿನ ಜಠರಾಮ್ಲದಿಂದಾಗಿ ಪಚನಕ್ರಿಯೆ ಸರಾಗವಾಗುತ್ತದೆ.

ಉದರದ ಒಳಾವರಣದ್ದು ಹೆಚ್ಚುಕಮ್ಮಿ ತಟಸ್ಥ ರಸಸಾರ ಮಟ್ಟ. ಅಂದರೆ ಒಡಲ ಪಿಎಚ್ 6.5ರಿಂದ 7.0. ಆಹಾರದಲ್ಲಿ ಹೆಚ್ಚು ನಾರಿನಂಶವಿದ್ದಾಗ ಮಾತ್ರ ಜಾನುವಾರುಗಳು ಮೆಲುಕು ಹಾಕಲು ಸಾಧ್ಯ. ಹಾಗಾಗಿ ಹುಲ್ಲು, ಸೊಪ್ಪುಸದೆ, ಹಣ್ಣು ತರಕಾರಿಗಳ ಸಿಪ್ಪೆಗಳನ್ನು ಸರಾಗವಾಗಿ ಮತ್ತೊಮ್ಮೆ ಬಾಯಿಗೆ ತಂದುಕೊಂಡು ಜಗಿದು ನುಂಗುತ್ತವೆ. ತುಂಬಾ ಮೆದುವಾಗಿರುವ ಅನ್ನ, ಗಂಜಿ, ಪಾಯಸಗಳು ಮೆಲುಕಿಗೆ ಸಿಗವು. ಮೆಲುಕು ಹಾಕುವ ಕ್ರಿಯೆ ನಿಂತಾಗ ಹೊಟ್ಟೆಯಲ್ಲಿರುವ ಬ್ಯಾಕ್ಟೀರಿಯಾಗಳು ಈ ಶರ್ಕರಪಿಷ್ಟಭರಿತ ಆಹಾರವನ್ನು ಲ್ಯಾಕ್ಟಿಕ್ ಆಮ್ಲವಾಗಿ ಪರಿವರ್ತಿಸುವುದರಿಂದ ಉದರದ ಆಮ್ಲೀಯತೆ ಹೆಚ್ಚುತ್ತದೆ. ಪಿಎಚ್ ಮಟ್ಟವು 5.5ಕ್ಕಿಂತ ಕೆಳಗೆ ಕುಸಿದಾಗ ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸುತ್ತವೆ.

ಇಂತಹ ವಾತಾವರಣದಲ್ಲಿ ಜೀರ್ಣಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಉಪಯುಕ್ತ ಸೂಕ್ಷ್ಮಾಣು ಜೀವಿಗಳು ನಾಶವಾಗುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ. ಹೊಟ್ಟೆಯ ಚಲನೆ ಸ್ಥಗಿತವಾಗುವುದರಿಂದ ಮೇವು ಮುಟ್ಟವು. ಹಾಲಿನ ಇಳುವರಿಯಲ್ಲೂ ಏಕಾಏಕಿ ಕುಸಿತ. ಶರೀರ ತಣ್ಣಗಾಗಿ ಎದ್ದೇಳಲಾಗದೆ ಒದ್ದಾಡುತ್ತವೆ. ಅದರಲ್ಲೂ ಗರ್ಭ ಧರಿಸಿದ ಹಸುಗಳು, ಸಣ್ಣ ಕರು ಹೊಂದಿರುವ ದನಗಳಲ್ಲಿ ಇದು ಮಾರಣಾಂತಿಕವಾಗಬಹುದು.



ಯಕೃತ್ ಸೇರಿದಂತೆ ಅಂಗಗಳ ಮೇಲೆ ಆಮ್ಲದ ಪರಿಣಾಮ ಅಧಿಕವಾಗಿದ್ದರೆ ಚಿಕಿತ್ಸೆಗೆ ಸ್ಪಂದನೆ ಕಷ್ಟ. ಔಷಧೋಪಚಾರದಿಂದ ಚೇತರಿಸಿಕೊಂಡರೂ ಹಾಲಿನ ಉತ್ಪಾದನೆ ಸಹಜ ಸ್ಥಿತಿಗೆ ಮರಳಲು ತುಂಬಾ ದಿನಗಳು ಬೇಕು. ಹಾಗಾಗಿ ರೈತರಿಗೆ ಆರ್ಥಿಕವಾಗಿ ತುಂಬಾ ನಷ್ಟ. ಜೊತೆಗೆ ನಿರಂತರ ಆಮ್ಲೀಯತೆಯ ಕಾರಣ ಜಾನುವಾರುಗಳ ಗೊರಸು ಮೃದುವಾಗಿ, ಅಲ್ಲಲ್ಲಿ ಹುಣ್ಣಾಗಿ ಕುಂಟು ರೋಗಕ್ಕೂ ಕಾರಣವಾಗುತ್ತದೆ.

ಜಾನುವಾರುಗಳು ಇಷ್ಟದಿಂದ ತಿನ್ನುವ ಮುರುವಿನ ಸೊಪ್ಪಿನ ಜೊತೆಯಲ್ಲಿ ಪ್ರತಿನಿತ್ಯ ಒಂದು ಮಿತಿಯಲ್ಲಿ ಗಂಜಿ ಬೇಯಿಸಿಕೊಡುವುದು ದೇಹಾರೋಗ್ಯಕ್ಕೆ ಒಳ್ಳೆಯದು. ಹಿಂದಿದ್ದ ಈ ಪದ್ಧತಿ ಮರೆಯಾಗಿ ನೇರವಾಗಿ ಗಂಜಿ ಉಣಿಸುವ ಕ್ರಮ ಮಲೆನಾಡು, ಕರಾವಳಿ ಭಾಗಗಳಲ್ಲಿ ಈಗ ಮಾಮೂಲಾಗಿದೆ.

ಅನ್ನಭಾಗ್ಯದ ದೊಡ್ಡ ಪಾಲು ಅಕ್ಕಿಅನ್ನ, ಗಂಜಿಯ ರೂಪದಲ್ಲಿ ಜಾನುವಾರುಗಳ ದೇಹ ಸೇರುತ್ತಿರುವುದು ಆತಂಕಕಾರಿ. ಪಶು ಆಹಾರ, ಹಿಂಡಿಯ ಬೆಲೆ ದಿನೇ ದಿನೇ ಹೆಚ್ಚುತ್ತಿರುವುದೇ ಇದರ ಹಿಂದಿರುವ ತರ್ಕ! ಪಡಿತರ ಅಕ್ಕಿ ಮಿಕ್ಕಿದರೆ ವಿಲೇವಾರಿಗೆ ಬೇರೆ ದಾರಿ ಹುಡುಕಬೇಕೇ ಹೊರತು ಅನ್ನ ಬೇಯಿಸಿ ಅನವಶ್ಯಕವಾಗಿ ಬೀದಿಯಲ್ಲಿ ಚೆಲ್ಲುವುದು, ಪುಕ್ಕಟೆ ಅಕ್ಕಿಯೆಂದು ಸೇರುಗಟ್ಟಲೆ ಗಂಜಿ ಮಾಡಿ ಜಾನುವಾರುಗಳಿಗೆ ಉಣಿಸುವುದು ಅಪರಾಧ.

ಇಂದಿಗೂ ಹಬ್ಬ ಹರಿದಿನಗಳು, ಜಾತ್ರೆ, ಮದುವೆ ಎಂದೆಲ್ಲಾ ಕಾರ್ಯಕ್ರಮಗಳಾದಾಗ ಹೊರಗೆ ಚೆಲ್ಲಿದ ಅನ್ನ, ಪಾಯಸ, ಸಿಹಿಪದಾರ್ಥಗಳಿಗೆ ಅಮಾಯಕ ಜಾನುವಾರುಗಳು ತೊಂದರೆಗೀಡಾಗುತ್ತಿರುವುದು ನಿಜಕ್ಕೂ ಆಘಾತಕಾರಿ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ಬಾಳೆಬೈಲು, ತೀರ್ಥಹಳ್ಳಿ

ವಾಚಕರ ವಾಣಿ

ಸ್ಪರ್ಧಾರ್ಥಿಗಳು ನಂಬುವುದು ಹೇಗೆ?

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರ ನೇಮಕವೇ ಅಕ್ರಮ ಎಂಬ ಆರೋಪ ಕೇಳಿಬಂದಿರುವುದನ್ನು ತಿಳಿದು (ಪ್ರ.ವಾ., ಆ. 12) ಒಂದು ಕ್ಷಣ ದಿಗ್ಭ್ರಮೆಗೊಂಡೆ. ದ್ವಿತೀಯ ದರ್ಜೆ ಸಹಾಯಕರಂತಹ ನೇಮಕಾತಿಗೂ ಅಭ್ಯರ್ಥಿಯ ಜನ್ಮದಿನಾಂಕ, ವಿದ್ಯಾರ್ಹತೆ, ಪ್ರಸ್ತುತ ಹುದ್ದೆಯ ನಿರಾಕ್ಷೇಪಣಾ ಪತ್ರ, ಜಾತಿ ಪ್ರಮಾಣಪತ್ರದಂತಹ ಪ್ರತಿಯೊಂದು ಮಾಹಿತಿಯನ್ನೂ ಕೆಪಿಎಸ್‌ಸಿ ಪಡೆಯುತ್ತದೆ. ಇಂತಹ ಸಾಂವಿಧಾನಿಕ ಸಂಸ್ಥೆಗೆ ಸದಸ್ಯ ಅಥವಾ ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಅವರ ಅರ್ಹತೆಯ ಕನಿಷ್ಠ ಮಾಹಿತಿಯನ್ನೂ ಪಡೆಯದೆ ಆಯ್ಕೆ ಮಾಡುವುದು ಸೋಜಿಗ ಮೂಡಿಸುತ್ತದೆ. ಈಗಾಗಲೇ ಭ್ರಷ್ಟಾಚಾರ, ಪಕ್ಷಪಾತ, ಪ್ರಶ್ನೆಪತ್ರಿಕೆ ಸೋರಿಕೆಯಂತಹ ಹಗರಣಗಳಿಗೆ ಸಂಸ್ಥೆ ಹೆಸರಾಗಿದೆ. ಈಗ ಅದರ ಅಧ್ಯಕ್ಷರ ಅರ್ಹತೆ ಬಗೆಗೇ ಅಪಸ್ವರ ಕೇಳಿಬಂದಿದೆ. ಇನ್ನು ಸ್ಪರ್ಧಾರ್ಥಿಗಳು ಸಂಸ್ಥೆಯನ್ನು ನಂಬುವುದಾದರೂ ಹೇಗೆ?

ಮೋನಿಕ ಆರ್., ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ

ಸತ್ಸಂಪ್ರದಾಯಕ್ಕೆ ವಿರೋಧ ಸಲ್ಲ

ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೆಡಿಎಸ್ ಮುಖಂಡ ಎಚ್.ಡಿ.ದೇವೇಗೌಡ ಅವರನ್ನು ಭೇಟಿಯಾದುದಕ್ಕೆ ಶಾಸಕರೊಬ್ಬರು ವಿರೋಧ ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸಾಮಾನ್ಯವಾಗಿ, ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡವರು ರಾಜ್ಯದ ಹಿರಿಯ ರಾಜಕಾರಣಿಗಳನ್ನು ಭೇಟಿ ಮಾಡಿ ಅವರ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವುದು ಒಂದು ಒಳ್ಳೆಯ ಸಂಪ್ರದಾಯವಾಗಿ ಬೆಳೆದುಬಂದಿದೆ.

ಈ ಹಿಂದೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಂತಹ ಅನೇಕ ವ್ಯಕ್ತಿಗಳು ಈ ಸಂಪ್ರದಾಯ ಪಾಲಿಸಿದ್ದಾರೆ. ದೇವೇಗೌಡರು ಮುಖ್ಯಮಂತ್ರಿಯಾಗಿ, ಪ್ರಧಾನಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಂತಹ ದೊಡ್ಡ ವ್ಯಕ್ತಿಯನ್ನು ಭೇಟಿ ಮಾಡಿ ಅವರ ಆಶೀರ್ವಾದ, ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವುದು ಸುಸಂಸ್ಕೃತ ನಡೆಯಾಗಿದೆ. ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಸಣ್ಣತನದ ನಡೆ ಎನಿಸಿಕೊಳ್ಳುತ್ತದೆ.

ಕೆ.ವಿ.ವಾಸು, ಮೈಸೂರು

ಪಶ್ಚಿಮಘಟ್ಟದಲ್ಲಿ ಡ್ಯಾಂ: ಚರ್ಚೆ ನಡೆಯಲಿ

ಪಶ್ಚಿಮಘಟ್ಟದ ಒಡಲಿನಲ್ಲಿ ಈಗಾಗಲೇ ಕಾರ್ಯಗತಗೊಂಡಿರುವ ಹಲವಾರು ಅವೈಜ್ಞಾನಿಕ ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣದ ಯೋಜನೆಗಳಿಂದಾಗಿ ಅಗಾಧ ಪ್ರಮಾಣದ ಅರಣ್ಯ ಸಂಪತ್ತು ನಾಶವಾಗಿದೆ. ಯೋಜನೆಗಳ ಅನುಷ್ಠಾನಕ್ಕೆ ದೊಡ್ಡ ಪ್ರಮಾಣದ ಯಂತ್ರಗಳ ಬಳಕೆಯಿಂದ, ವಾಹನಗಳ ಭರದ ಓಡಾಟದಿಂದ ಅರಣ್ಯ ಪರಿಸರ, ವನ್ಯಮೃಗಗಳ ಬದುಕು ಅಸ್ತವ್ಯಸ್ತವಾಗಿದೆ. ಹೀಗಾಗಿ, ಇತ್ತೀಚಿನ ವರ್ಷಗಳಲ್ಲಿ ಮಳೆಯ ತೀವ್ರತೆಗೆ ಹಿಂದೆಂದೂ ಕಂಡು ಕೇಳರಿಯದಷ್ಟು ಅಪಾರ ಪ್ರಮಾಣದಲ್ಲಿ ಗುಡ್ಡ ಕುಸಿತ, ಭೂಕುಸಿತಗಳು ಉಂಟಾಗುತ್ತಿವೆ.

ಇದಿಷ್ಟೇ ಸಾಲದೆಂಬಂತೆ ಮತ್ತೆ ಪಶ್ಚಿಮಘಟ್ಟದ ಒಡಲೊಳಗೆ 1,400 ಚಿಕ್ಕ ಚಿಕ್ಕ ಡ್ಯಾಂಗಳ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದ್ದು, ಅದಕ್ಕೆ ನೆರವು ನೀಡುವಂತೆ ಕೇಂದ್ರ ಜಲಶಕ್ತಿ ಸಚಿವರೊಂದಿಗೆ ಚರ್ಚಿಸಿ, ಪ್ರಸ್ತಾವ ಸಲ್ಲಿಸಲಾಗಿದೆ ಎಂದು ರಾಜ್ಯದ ಸಣ್ಣ ನೀರಾವರಿ ಸಚಿವರು ಹೇಳಿರುವುದು ವರದಿಯಾಗಿದೆ. ಅರಣ್ಯದಲ್ಲಿ ನಡೆಯುವ ಇಂತಹ ಯೋಜನೆಗಳಿಂದ ಶಾಶ್ವತ ಹಾನಿಗೀಡಾಗುವ ಒಟ್ಟು ಪರಿಸರ, ಅರಣ್ಯ, ಜನಜೀವನವನ್ನು ಕುರಿತು ಮೊದಲು ಸರ್ಕಾರವು ವಿಜ್ಞಾನಿಗಳು, ತಜ್ಞರೊಂದಿಗೆ ಚರ್ಚೆ ಮಾಡಲಿ. ಈಗಾಗಲೇ ಪ್ರಕೃತಿಯ ಮೇಲಿನ ಅವ್ಯಾಹತ ಪ್ರಹಾರದಿಂದ ಅವನತಿಯ ಹಾದಿ ಹಿಡಿದಿರುವ ಮನುಕುಲ, ವಿವೇಚನೆ ಇಲ್ಲದೇ ಇಂತಹ ಮತ್ತಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸದಿರಲಿ.

ರೂಪ ಹಾಸನ, ಹಾಸನ

ಪುಸ್ತಕಗಳಿಗೆ ರಿಯಾಯಿತಿ: ಅವಧಿ ವಿಸ್ತರಿಸಿ

ಪ್ರಸಕ್ತ ವರ್ಷದ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಪುಸ್ತಕಗಳಿಗೆ ಆಗಸ್ಟ್ ಪೂರ್ತಿ ಶೇ 10ರಿಂದ 75ರವರೆಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಪ್ರಕಟಿಸಿದ ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದೆ. ರಾಜ್ಯ ಸರ್ಕಾರವು ಕಳೆದ ವರ್ಷ, ರಾಜ್ಯೋತ್ಸವದ ದಿನವಾದ ನವೆಂಬರ್ 1ರಿಂದ ಈ ವರ್ಷದ ನವೆಂಬರ್ 30ರವರೆಗೆ 'ಕನ್ನಡ ವರ್ಷಾಚರಣೆ' ಘೋಷಿಸಿ, ಈ ಅವಧಿಯಲ್ಲಿ ಬರಹ, ವ್ಯವಹಾರ, ಆಡಳಿತದಲ್ಲಿ ಕನ್ನಡ ಭಾಷೆಯನ್ನು ಬಳಸಲು, ಕನ್ನಡ ಪುಸ್ತಕಗಳನ್ನು ಓದುವ ಮೂಲಕ ಕನ್ನಡ ಭಾಷೆಯನ್ನು ಬೆಳಗಿಸಲು ಕೋರಿತ್ತು. ಇದಕ್ಕೆ ಪೂರಕವಾಗಿ, ಕನ್ನಡ ಪುಸ್ತಕಗಳಿಗೆ ಘೋಷಿಸಿರುವ ರಿಯಾಯಿತಿ ದರವನ್ನು ಕನ್ನಡ ವರ್ಷಾಚರಣೆ ಅವಧಿ ಇರುವವರೆಗೂ ವಿಸ್ತರಿಸಬೇಕು. ಪುಸ್ತಕಗಳು ರಾಜ್ಯದ ಎಲ್ಲ ಭಾಗಗಳ ಓದುಗರಿಗೂ ತಲುಪಲು ಅನುವಾಗುವಂತೆ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕಗಳ ಮೂಲಕ ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ದಿಕ್ಕು ತಪ್ಪುತ್ತಿರುವ ಮಾರ್ಗದರ್ಶನದ ಮೌಲ್ಯ

ಉನ್ನತ ಶಿಕ್ಷಣದ ವಿದ್ಯಾರ್ಥಿಗಳಲ್ಲಿ ಹಲವರು ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆಯುವ ಮಹದಾಸೆ ಹೊಂದಿರುತ್ತಾರೆ. ಹಿಂದೆಲ್ಲಾ ಸ್ನಾತಕೋತ್ತರ ಪದವೀಧರರನ್ನು ನೇರವಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆಗೆ ಬೇಕಾದ ಮಾರ್ಗದರ್ಶನವನ್ನು ನೀಡಲಾಗುತ್ತಿತ್ತು. ಆದರೆ ಈ ಆಯ್ಕೆ ಪ್ರಕ್ರಿಯೆಯಲ್ಲಿದ್ದ ಸಮಸ್ಯೆಯನ್ನು ಮನಗಂಡ ವಿಶ್ವವಿದ್ಯಾಲಯಗಳು ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡುವ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿದವು. ಆದರೆ ಇತ್ತೀಚೆಗೆ ಸಂಶೋಧನಾ ಮಾರ್ಗದರ್ಶನದ ವಿಚಾರವಾಗಿ ಲಂಚ ಕೇಳುವ, ಲೈಂಗಿಕ ಶೋಷಣೆಗೆ ಗುರಿಪಡಿಸುವ ಆರೋಪ ಕೇಳಿಬರುತ್ತಿರುವುದನ್ನು ನೋಡಿದರೆ, ಸಂಶೋಧನೆ ಮತ್ತು ಸಂಶೋಧನಾ ಮಾರ್ಗದರ್ಶನದ ಮೌಲ್ಯವು ದಾರಿ ತಪ್ಪಿದೆಯೇ ಎಂಬ ಅನುಮಾನ ಮೂಡುತ್ತದೆ.

ಸಂಶೋಧನಾ ಕ್ಷೇತ್ರದಲ್ಲಿ ಇಂತಹ ಸಮಸ್ಯೆಗಳನ್ನು ತಡೆಗಟ್ಟಲು ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೆ ತರಬೇಕು ಮತ್ತು ದೋಷಿಗಳೆಂದು ಕಂಡುಬರುವವರಿಗೆ ಮಾರ್ಗದರ್ಶನಕ್ಕೆ ನೀಡಿರುವ ಅನುಮತಿಯನ್ನೇ ರದ್ದು ಮಾಡಬೇಕು. ವಿದ್ಯಾರ್ಥಿಗಳ ಏಳ್ಗೆಗಾಗಿಯೇ ತಮ್ಮ ಜ್ಞಾನವನ್ನು ಮುಡಿಪಾಗಿಟ್ಟಿರುವ ನಿಜವಾದ ಮಾರ್ಗದರ್ಶಕರಿಗೆ ಇಂತಹವರಿಂದ ಆಗುವ ಕಳಂಕವನ್ನು ತಪ್ಪಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು.

ಮಹದೇವಪ್ಪ ಪಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಮಾ ವಲಯ ಸರ್ಕಾರದ ಪಾರಮ್ಯಕ್ಕೆ ಕೊನೆ



ಭಾರತದ ವಿಮಾ ಮಾರುಕಟ್ಟೆ


₹ 20.78 ಲಕ್ಷ ಕೋಟಿ
2020-21ನೇ ಆರ್ಥಿಕ ವರ್ಷದ ಅಂತ್ಯಕ್ಕೆ ಭಾರತದ ವಿಮಾ ಕ್ಷೇತ್ರದ ಮಾರುಕಟ್ಟೆ ಗಾತ್ರ

58 ದೇಶದಲ್ಲಿರುವ ವಿಮಾ ಕಂಪನಿಗಳ ಸಂಖ್ಯೆ


24 ಜೀವವಿಮೆ ಕ್ಷೇತ್ರದಲ್ಲಿರುವ ವಿಮಾ ಕಂಪನಿಗಳ ಸಂಖ್ಯೆ

34 ಸಾಮಾನ್ಯ ವಿಮೆ ಕ್ಷೇತ್ರದಲ್ಲಿರುವ ವಿಮಾ ಕಂಪನಿಗಳ ಸಂಖ್ಯೆ

ಜೀವ ವಿಮೆಯಲ್ಲಿ ಮಾರುಕಟ್ಟೆ ಪಾಲು



ಸಾಮಾನ್ಯ ವಿಮೆಯಲ್ಲಿ ಮಾರುಕಟ್ಟೆ ಪಾಲು



ಸಾಮಾನ್ಯ ವಿಮೆ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆ 2021ಕ್ಕೆ ಸಂಸತ್ತಿನ ಅಂಗೀಕಾರವು ಬುಧವಾರ ದೊರೆತಿದೆ. ಪೆಗಾಸಸ್ ಕುತಂತ್ರಾಂಶ ಬಳಸಿ ನಡೆಸಿದೆ ಎನ್ನಲಾದ ಗೂಢಚರ್ಯೆಯ ಬಗ್ಗೆ ಚರ್ಚೆಗೆ ಮುಂಗಾರು ಅಧಿವೇಶನದಲ್ಲಿ ವಿರೋಧ ಪಕ್ಷಗಳು ಒತ್ತಾಯಿಸಿದ್ದವು. ಸರ್ಕಾರ ನಿರಾಕರಿಸಿತ್ತು. ಹೀಗಾಗಿ, ಅಧಿವೇಶನ ಮಳೆಯಲ್ಲಿ ಕೊಚ್ಚಿ ಹೋದಂತೆಯೇ ಆಗಿತ್ತು.

ಆದರೆ, ಇತರ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡುವ ಸಂವಿಧಾನದ 127ನೇ ತಿದ್ದುಪಡಿಯನ್ನು ವಿರೋಧ ಪಕ್ಷಗಳು ಬೆಂಬಲಿಸಿದ್ದವು. ಹಾಗಾಗಿ ರಾಜ್ಯಸಭೆ ಕಲಾಪ ಬುಧವಾರ ಸ್ವಲ್ಪ ಮಟ್ಟಿಗೆ ಸುಗಮವಾಗಿ ನಡೆದಿತ್ತು. ಸಾಮಾನ್ಯ ವಿಮೆ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆಯನ್ನು ಸರ್ಕಾರವು ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳುವುದರೊಂದಿಗೆ ರಾಜ್ಯಸಭೆಯ ಚಿತ್ರಣ ಮತ್ತೆ ಬದಲಾಯಿತು. ವಿರೋಧ ಪಕ್ಷಗಳ ಸದಸ್ಯರು ಮತ್ತೆ ಕೋಲಾಹಲ ಎಬ್ಬಿಸಿದರು. ನಿರಂತರ ಗದ್ದಲದಲ್ಲಿಯೇ ಇದ್ದ ಮುಂಗಾರು ಅಧಿವೇಶನವು ಗದ್ದಲದೊಂದಿಗೇ ಕೊನೆಯಾಯಿತು.

ಜೀವ ವಿಮಾ ನಿಗಮ (ಎಲ್‌ಐಸಿ), ಜನರಲ್ ಇನ್ಶೂರೆನ್ಸ್ ಕಾರ್ಪೊರೇಷನ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿ., ಓರಿಯೆಂಟಲ್ ಇನ್ಶ್ಯೂರೆನ್ಸ್ ಕಂಪನಿ ಲಿ., ಮುಂತಾದ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳು ಈಗ ಅಸ್ತಿತ್ವದಲ್ಲಿವೆ. ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಶೇ 51ಕ್ಕಿಂತ ಹೆಚ್ಚಿನ ಪಾಲು ಸರ್ಕಾರದ ವಶದಲ್ಲಿಯೇ ಇರಬೇಕು ಎಂಬ ನಿಯಮ ಈವರೆಗೆ ಇತ್ತು. ಶೇ 51ರಷ್ಟು ಪಾಲನ್ನು ಸರ್ಕಾರ ಹೊಂದಿರಬೇಕಿಲ್ಲ ಎಂದು ಈಗ ತಿದ್ದುಪಡಿ ಮಾಡಲಾಗಿದೆ.

ಈಗ ಸರ್ಕಾರಿ ಸ್ವಾಮ್ಯದಲ್ಲಿರುವ ವಿಮಾ ಕಂಪನಿಗಳ ಮೇಲಿನ ಹತೋಟಿಯನ್ನು ಸರ್ಕಾರವು ಮುಂದೊಂದು ದಿನ ಕೈಬಿಡುವುದಕ್ಕೆ ತಿದ್ದುಪಡಿ ಕಾಯ್ದೆಯು ಅವಕಾಶ ಕೊಡುತ್ತದೆ. ಈ ಎಲ್ಲ ಬದಲಾವಣೆಗಳು ವಿಮಾ ಕ್ಷೇತ್ರವನ್ನು ಪೂರ್ಣವಾಗಿ ಖಾಸಗಿ ಕ್ಷೇತ್ರಕ್ಕೆ ಬಿಟ್ಟುಕೊಡುವ ಪ್ರಕ್ರಿಯೆಯ ಭಾಗ ಎಂದು ಹೇಳಲಾಗುತ್ತಿದೆ. ಇದನ್ನೇ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿವೆ.

ವಿಲೀನದಿಂದ ಹಿಂದೆ ಸರಿದ ಸರ್ಕಾರ

ದೇಶದ ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮೆ ಕಂಪನಿಗಳಾದ ಓರಿಯಂಟಲ್ ಇನ್ಶ್ಯೂರೆನ್ಸ್, ಯುನೈಟೆಡ್ ಇಂಡಿಯಾ ಇನ್ಶ್ಯೂರೆನ್ಸ್ ಮತ್ತು ನ್ಯಾಷನಲ್ ಇನ್ಶ್ಯೂರೆನ್ಸ್ ಲಿಮಿಟೆಡ್‌ಗಳನ್ನು ವಿಲೀನ ಮಾಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ 2018ರಲ್ಲಿ ಸಿದ್ಧಪಡಿಸಿತ್ತು. ಈ ಮೂರೂ ಕಂಪನಿಗಳನ್ನು ವಿಲೀನಗೊಳಿಸಿದ ನಂತರ, ಆ ಕಂಪನಿಯನ್ನು ಷೇರು ಮಾರುಕಟ್ಟೆ ವಹಿವಾಟಿಗೆ ತರುವುದು ಸರ್ಕಾರದ ಮುಖ್ಯ ಉದ್ದೇಶವಾಗಿತ್ತು. ಕಂಪನಿಯ ಕೆಲವು ಷೇರುಗಳನ್ನು ಕಾರ್ಪೊರೇಟ್ ಕಂಪನಿಗಳಿಗೆ ಮಾರಾಟ ಮಾಡುವ ಪ್ರಸ್ತಾವವೂ ಸರ್ಕಾರದ ಮುಂದೆ ಇತ್ತು. ಆದರೆ ವಿವಿಧ ಕಾರಣಗಳಿಂದಾಗಿ ಸರ್ಕಾರವು ಆ ಪ್ರಸ್ತಾವವನ್ನು ಕೈಬಿಟ್ಟಿತು.

‘ಮೂರೂ ಕಂಪನಿಗಳ ಆರ್ಥಿಕ ವಹಿವಾಟು ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ. ಈ ಕಂಪನಿಗಳನ್ನು ವಿಲೀನಗೊಳಿಸಿ, ರಚಿಸಲಾದ ಹೊಸ ಕಂಪನಿಯು ಆರಂಭದಲ್ಲೇ ಹಣಕಾಸಿನ ಮುಗ್ಗಟ್ಟನ್ನು ಎದುರಿಸಬೇಕಾಗುತ್ತದೆ. ಹೊಸ ಕಂಪನಿಯು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕಾದರೆ, ಸರ್ಕಾರವು ₹12,500 ಕೋಟಿಯಷ್ಟು ಬಂಡವಾಳವನ್ನು ತೊಡಗಿಸಬೇಕಾಗುತ್ತದೆ. ಇದು ಹೆಚ್ಚು ಲಾಭಕರವಲ್ಲದ ಕ್ರಮ ಎಂದು ತಜ್ಞರು ವರದಿ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ಮೂರೂ ಕಂಪನಿಗಳು ಬಳಸುತ್ತಿರುವ ತಂತ್ರಜ್ಞಾನ ಭಿನ್ನವಾದದು. ಕಾರ್ಯನಿರ್ವಹಣೆ ವಿಧಾನವೂ ಸಂಪೂರ್ಣ ಭಿನ್ನ. ವಿಲೀನಗೊಳಿಸಲು ಏಕೈಕ ತಂತ್ರಜ್ಞಾನ ರೂಪಿಸಬೇಕು ಮತ್ತು ಏಕರೂಪದ ಕಾರ್ಯನಿರ್ವಹಣೆ ವಿಧಾನವನ್ನು ಅಭಿವೃದ್ಧಿಪಡಿಸಬೇಕು. ಜತೆಗೆ ಆ ಕಾರ್ಯನಿರ್ವಹಣೆ ವಿಧಾನಕ್ಕೆ ಸಿಬ್ಬಂದಿಯನ್ನು ತಯಾರು ಮಾಡಬೇಕು. ಇವೆಲ್ಲವೂ ಹೆಚ್ಚು ಹಣ ಮತ್ತು ಸಮಯ ಬೇಡುವ ಪ್ರಕ್ರಿಯೆಗಳು. ವಿಲೀನ ಮತ್ತು ತರಬೇತಿ ಪ್ರಕ್ರಿಯೆ ಪರಿಣಾಮಕಾರಿಯಾಗಿ ಅನುಷ್ಠಾನವಾಗದೇ ಇದ್ದರೆ, ಕಂಪನಿ ಮತ್ತಷ್ಟು ಆರ್ಥಿಕ ಮುಗ್ಗಟ್ಟಿಗೆ ಸಿಲುಕಬಹುದು. ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ವಿಲೀನ ಪ್ರಕ್ರಿಯೆ ಒಳ್ಳೆಯದಲ್ಲ ಎಂಬ ತಜ್ಞರ ಸಲಹೆಯನ್ನು ಸರ್ಕಾರ ಮಾನ್ಯ ಮಾಡಿತು’ ಎಂದು ಮೂಲಗಳು ಹೇಳಿವೆ.

ಈ ಕಂಪನಿಗಳನ್ನು ಖಾಸಗೀಕರಣ ಮಾಡಲಾಗುತ್ತದೆ ಎಂದು ಸಿಬ್ಬಂದಿಯು ಆತಂಕ ವ್ಯಕ್ತಪಡಿಸಿದ್ದರು. ವಿಲೀನ ಮತ್ತು ಖಾಸಗೀಕರಣದ ವಿರುದ್ಧ ಸಿಬ್ಬಂದಿ ಮುಷ್ಕರ ನಡೆಸಿದ್ದರು. ವಿಲೀನ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಸಿದ್ಧತೆ ನಡೆಸುತ್ತಿದ್ದ ಸಂದರ್ಭದಲ್ಲಿ ಕೋವಿಡ್ ಸಾಂಕ್ರಾಮಿಕವು ಅಕ್ರಮಿಸಿತು. ಲಾಕ್‌ಡೌನ್‌ನಲ್ಲಿ ಈ ಕಂಪನಿಗಳ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಹೀಗಾಗಿ ವಿಲೀನ ಪ್ರಕ್ರಿಯೆಯನ್ನು ಸರ್ಕಾರ ರದ್ದುಗೊಳಿಸಿತು.



ಅಖಿಲ ಭಾರತ ವಿಮಾ ನೌಕರರ ಸಂಘವು ಎಲ್‌ಐಸಿಯ ಸ್ವಲ್ಪ ಭಾಗ ಷೇರುಗಳನ್ನು ಐಪಿಒ ಮೂಲಕ ಖಾಸಗಿಯವರಿಗೆ ನೀಡುವ ನಿರ್ಧಾರದ ವಿರುದ್ಧ ಚೆನ್ನೈಯಲ್ಲಿ ಕಳೆದ ವರ್ಷ ನಡೆಸಿದ್ದ ಪ್ರತಿಭಟನೆಯ ದೃಶ್ಯ ಪಿಟಿಐ ಚಿತ್ರ

2021ರ ತಿದ್ದುಪಡಿ ಕಾಯ್ದೆ

ಮೂರು ಮುಖ್ಯ ಬದಲಾವಣೆಗಳನ್ನು ತಿದ್ದುಪಡಿ ಕಾಯ್ದೆ ಪ್ರಸ್ತಾಪಿಸಿದೆ. ಸಾರ್ವಜನಿಕ ವಲಯದ ವಿಮಾ ಸಂಸ್ಥೆಗಳಲ್ಲಿ ಕೇಂದ್ರ ಸರ್ಕಾರವು ಹೊಂದಿರುವ ಪಾಲುದಾರಿಕೆಯ ಕನಿಷ್ಠ ಮಿತಿಯನ್ನು ಈ ಕಾಯ್ದೆ ತೆಗೆದುಹಾಕಿದೆ. ಕೇಂದ್ರ ಸರ್ಕಾರದ ಪಾಲು ಶೇ 51ರಷ್ಟು ಇರಬೇಕು ಎಂಬ ನಿಬಂಧನೆಯನ್ನು ತಿದ್ದುಪಡಿ ಮಸೂದೆ ತೆರವುಗೊಳಿಸಿದೆ. ಇದರರ್ಥ ಈ ವಿಮಾ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಬಹುದಾಗಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021-22ರ ಬಜೆಟ್‌ನಲ್ಲಿ ಸಾಮಾನ್ಯ ವಿಮಾ ಕಂಪನಿಗಳನ್ನು ಖಾಸಗೀಕರಣಗೊಳಿಸುವುದಾಗಿ ಘೋಷಿಸಿದ್ದರು.

ಹೊಸದಾಗಿ ಸೆಕ್ಷನ್ 24 ಬಿ ಅನ್ನು ಸೇರಿಸಲಾಗಿದೆ. ಒಂದು ನಿರ್ದಿಷ್ಟ ದಿನಾಂಕದಿಂದ, ಈ ಸಾರ್ವಜನಿಕ ಸಾಮಾನ್ಯ ವಿಮಾ ಕಂಪನಿಗಳ ಮೇಲೆ ಕೇಂದ್ರ ಸರ್ಕಾರ ಹೊಂದಿರುವ ನಿಯಂತ್ರಣವನ್ನು ನಿಲ್ಲಿಸಬಹುದು ಎಂದು ಈ ಸೆಕ್ಷನ್ ವಿವರಿಸುತ್ತದೆ. ನಿರ್ದೇಶಕರನ್ನು ನೇಮಿಸುವ ಅಧಿಕಾರ, ನಿರ್ವಹಣೆ ಅಥವಾ ನೀತಿ ನಿರ್ಧಾರಗಳ ಮೇಲೆ ಸರ್ಕಾರದ ಅಧಿಕಾರ ಕೊನೆಯಾಗಲಿದೆ.

ಆಡಳಿತಾತ್ಮಕ ದೃಷ್ಟಿಯಿಂದ ಸೆಕ್ಷನ್ 31 ಎ ಅನ್ನು ಸೇರ್ಪಡೆ ಮಾಡಲಾಗಿದೆ. ವಿಮಾ ಕಂಪನಿಗಳ ನಿರ್ದೇಶಕರು ಕೆಲವೊಂದು ಕ್ರಿಯೆಗಳಿಗೆ ಮಾತ್ರ ಜವಾಬ್ದಾರರಾಗಿರುತ್ತಾರೆ. ಯಾವ ಕೆಲಸಗಳು ನಿರ್ದೇಶಕರ ತಿಳಿವಳಿಕೆ ಮತ್ತು ಒಪ್ಪಿಗೆಯೊಂದಿಗೆ ಆಗಿರುತ್ತವೆಯೋ ಅದಕ್ಕೆ ಮಾತ್ರ ಅವರು ಬಾಧ್ಯಸ್ಥರಾಗಿರುತ್ತಾರೆ ಎಂದು ತಿದ್ದುಪಡಿ ಕಾಯ್ದೆ ಹೇಳುತ್ತದೆ.

ವಿಮೆ ನೌಕರರ ಸೇವಾ ನಿಯಮಗಳು ಮತ್ತು ಷರತ್ತುಗಳನ್ನು ನಿಗದಿಪಡಿಸಲು ಕೇಂದ್ರ ಸರ್ಕಾರಕ್ಕೆ ಈ ಕಾಯ್ದೆ ಅಧಿಕಾರ ನೀಡುತ್ತದೆ. ಈ ಸಂಬಂಧ ಸರ್ಕಾರವು ಯೋಜನೆಗಳನ್ನು ರೂಪಿಸಬಹುದು. ಆದರೆ ವಿಮಾ ಸಂಸ್ಥೆಗಳ ಆಡಳಿತ ಮಂಡಳಿಗಳು ಈ ಯೋಜನೆಗಳನ್ನು ಬದಲಾಯಿಸಬಹುದು ಅಥವಾ ಹೊಸ ನೀತಿಗಳನ್ನು ರೂಪಿಸಬಹುದು. ಇಂತಹ ಯೋಜನೆಗಳನ್ನು ರೂಪಿಸುವ ಕೇಂದ್ರ ಸರ್ಕಾರದ ಅಧಿಕಾರವು ಮುಂದೆ ವಿಮಾ ಕಂಪನಿಗಳ ನಿರ್ದೇಶಕರ ಮಂಡಳಿಗೆ ವರ್ಗಾವಣೆಯಾಗಲಿದೆ.

ಪ್ರತಿಪಕ್ಷಗಳ ಆಕ್ರೋಶ

ವಿಮಾ ಮಸೂದೆಯ ಸಾಧಕ-ಬಾಧಕಗಳ ಬಗ್ಗೆ ಸರಿಯಾದ ಚರ್ಚೆಯನ್ನು ನಡೆಸದೇ ತರಾತುರಿಯಲ್ಲಿ ಅಂಗೀಕರಿಸಿದ್ದು ಪ್ರತಿಪಕ್ಷಗಳನ್ನು ಸಿಟ್ಟಿಗೇಳಿಸಿದೆ. ಮಸೂದೆ ಅಂಗೀಕಾರದ ಸಮಯದಲ್ಲಿ ಸರ್ಕಾರ ನಡೆದುಕೊಂಡ ರೀತಿಯು ಚರ್ಚೆ ಹುಟ್ಟುಹಾಕಿವೆ. ವಿಮೆ ಮಸೂದೆಗೆ ಶತಾಯಗತಾಯ ಅಂಗೀಕಾರ ಪಡೆದುಕೊಳ್ಳಲು ನಿರ್ಧರಿಸಿದ್ದ ಕೇಂದ್ರ ಸರ್ಕಾರವು, ರಾಜ್ಯಸಭೆಯಲ್ಲಿ ಬೃಹತ್ ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿತ್ತು ಎಂದು ಕಾಂಗ್ರೆಸ್ ಮುಖಂಡ ಜೈರಾಂ ರಮೇಶ್ ಆರೋಪಿಸಿದ್ದಾರೆ. ಇದಕ್ಕೆ ದನಿಗೂಡಿಸಿರುವ ಟಿಎಂಸಿ ಸಂಸದ ಡೆರೆಕ್ ಓಬ್ರಿಯಾನ್, ರಾಜ್ಯಸಭೆಯಲ್ಲಿ ಸಂಸದರಿಗಿಂತ ಭದ್ರತಾ ಸಿಬ್ಬಂದಿಯೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು ಎಂದಿದ್ದಾರೆ.

ಕಾಯ್ದೆಯಾಗಿ ಇದು ಜಾರಿಗೆ ಬಂದ ನಂತರ ದೊಡ್ಡ ಪ್ರಮಾಣದ ನೌಕರರ ವಜಾ ಪ್ರಕ್ರಿಯೆ ನಡೆಯುವ ಸಾಧ್ಯತೆಯಿದೆ ಎಂದು ಪ್ರತಿಪಕ್ಷಗಳು ಹೇಳಿವೆ.

ಉದ್ಯೋಗಿಗಳಲ್ಲಿ ಆತಂಕ

ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳ ಉದ್ಯೋಗಿಗಳು ತಿದ್ದುಪಡಿ ಮಸೂದೆಯಿಂದ ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರದ ಪಾಲು ಮಿತಗೊಳಿಸುವಿಕೆ ಹಾಗೂ ಖಾಸಗೀಕರಣಗೊಳಿಸುವ ನಿರ್ಧಾರಗಳು ಆಕ್ರೋಶ ಸೃಷ್ಟಿಸಿವೆ. ಈ ಕಾಯ್ದೆಯನ್ನು ವಿರೋಧಿಸಿ ಆಗಸ್ಟ್ 4ರಂದು ಒಂದು ದಿನದ ಮುಷ್ಕರವನ್ನೂ ನೌಕರರು ನಡೆಸಿದ್ದರು.

‘ಈ ಕಂಪನಿಗಳ ಸರಿಯಾದ ಕಾರ್ಯನಿರ್ವಹಣೆಗೆ ಕೇಂದ್ರ ಸರ್ಕಾರದ ಬೆಂಬಲ ಅತ್ಯಗತ್ಯ. ಇಲ್ಲದಿದ್ದರೆ, ಸಂಸ್ಥೆಗಳು ಕುಸಿಯಲಿದ್ದು, ಗ್ರಾಹಕರು ಮತ್ತು ಸಿಬ್ಬಂದಿ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ’ ಎಂದು ವಿಮಾ ಸಂಸ್ಥೆಯೊಂದರ ನಿವೃತ್ತ ನೌಕರ ಅಭಿಪ್ರಾಯಪಟ್ಟಿದ್ದಾರೆ.

ಕಾಯ್ದೆ ಜಾರಿಗೊಂಡ ಬಳಿಕ, ಖಾಸಗಿಯವರು ವಿಮೆ ಕ್ಷೇತ್ರದಲ್ಲಿ ಬಂಡವಾಳ ಹೂಡುತ್ತಾರೆ. ಕಡಿಮೆ ಅವಧಿಯಲ್ಲಿ ಲಾಭ ಗಳಿಸುವುದು ಅವರ ಉದ್ದೇಶವಾಗಿರುತ್ತದೆ. ಇದು ವಿಮಾ ಕ್ಷೇತ್ರಕ್ಕೆ ಹೊಂದಿಕೆಯಾಗುವುದಿಲ್ಲ ಎಂಬುದು ತಜ್ಞರ ಮಾತು. ಕೋವಿಡ್ ಪರಿಹಾರ ಹಣ ಪಾವತಿಯ ಕಾರಣ, ಭಾರತದಲ್ಲಿ ಸಾಮಾನ್ಯ ವಿಮಾ ಕಂಪನಿಗಳು ಶೇ 110ಕ್ಕಿಂತ ಹೆಚ್ಚು ಪ್ರಮಾಣದ ನಷ್ಟ ಎದುರಿಸುತ್ತಿರುವಾಗ ಖಾಸಗೀಕರಣ ಮಾಡುವ ಅಗತ್ಯ ಇರಲಿಲ್ಲ ಎಂಬುದು ನೌರರರ ಅಭಿಪ್ರಾಯವಾಗಿದೆ.

ಸರ್ಕಾರದ ಪ್ರತಿಪಾದನೆ: ವಿಮಾ ವಲಯದಲ್ಲಿ ಬಂಡವಾಳದ ತೀವ್ರ ಅವಶ್ಯಕತೆ ಇದೆ. ಆದ್ದರಿಂದ ಈ ತಿದ್ದುಪಡಿ ಕಾಯ್ದೆಯನ್ನು ಅಂಗೀಕರಿಸುವ ತುರ್ತು ಅವಶ್ಯಕತೆ ಇತ್ತು ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಖಾಸಗಿ ಹೂಡಿಕೆದಾರರು ಕ್ಷೇತ್ರಕ್ಕೆ ಬರುವುದರಿಂದ ಬಂಡವಾಳದ ಹರಿವು ಹೆಚ್ಚುತ್ತದೆ ಎಂದು ಸರ್ಕಾರ ಪ್ರತಿಪಾದಿಸಿದೆ.

‘ನ್ಯಾಯಮೂರ್ತಿಗಳ ನಿತ್ಯದ ಜೀವನ ಸುಖಕರವೇನಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳು ಸುಖವಾಗಿ ಬದುಕುತ್ತಿದ್ದಾರೆ ಎಂದು ಜನರ ಮನದಲ್ಲಿ ಇರುವ ಭಾವನೆಗಳು ಅಥವಾ ತಪ್ಪು ಗ್ರಹಿಕೆಗಳನ್ನು ಸರಿಪಡಿಸಬೇಕಾದ ಅಗತ್ಯ ಇದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಗುರುವಾರ ಹೇಳಿದ್ದಾರೆ.

ಸೀಮಿತವಾದ ಸಂಪನ್ಮೂಲವನ್ನು ಬಳಸಿಕೊಂಡು ನ್ಯಾಯಮೂರ್ತಿಗಳು ಎಷ್ಟು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನ್ಯಾಯಮೂರ್ತಿಗಳು ಮಾಡುವ ಅತ್ಯಂತ ದೊಡ್ಡ ತ್ಯಾಗ ಹಣಕಾಸಿಗೆ ಸಂಬಂಧಿಸಿದ್ದಾಗಿದೆ. ಆದರೆ, ಸಾರ್ವಜನಿಕ ಕರ್ತವ್ಯದ ಸ್ಫೂರ್ತಿಯ ದೃಷ್ಟಿಯಿಂದ ಇಂತಹ ನಿರ್ಧಾರ (ನ್ಯಾಯಾಂಗವನ್ನು ಸೇರುವ) ತೆಗೆದುಕೊಳ್ಳಲಾಗುತ್ತದೆ ಎಂದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರ್.ಎಫ್. ನರೀಮನ್ ಅವರಿಗೆ ವಿದಾಯ ಕೋರಲು ಸುಪ್ರೀಂ ಕೋರ್ಟ್ ವಕೀಲರ ಸಂಘವು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಮಣ ಮಾತನಾಡಿದರು. ನ್ಯಾಯಮೂರ್ತಿಗಳು ಸಮಾಜದ ಜತೆಗೆ ಸಂಪರ್ಕ ಹೊಂದಿರಬೇಕು, ಸಂಪೂರ್ಣವಾಗಿ ದೂರವೇ ಇರುವುದು ಸರಿಯಾದ ಕ್ರಮ ಅಲ್ಲ ಎಂದೂ ಅವರು ಅಭಿಪ್ರಾಯಪಟ್ಟರು.

‘ನ್ಯಾಯಮೂರ್ತಿಗಳು ಪ್ರತಿ ದಿನವೂ ಎಷ್ಟು ಕೆಲಸ ಮಾಡುತ್ತಿದ್ದಾರೆ ಎಂಬುದರತ್ತ ಗಮನ ಸೆಳೆಯಬೇಕು. ನ್ಯಾಯಮೂರ್ತಿಗಳು ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸಿಸುತ್ತಾರೆ. ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಮಾತ್ರ ಕೆಲಸ ಇರುತ್ತದೆ. ರಜಾ ದಿನಗಳನ್ನು ಆರಾಮವಾಗಿ ಕಳೆಯುತ್ತಾರೆ ಎಂಬ ತಪ್ಪು ಗ್ರಹಿಕೆ ಜನರಲ್ಲಿ ಇದೆ’ ರಮಣ ಹೇಳಿದರು.

ಪ್ರತಿ ವಾರವೂ ತಲಾ ನೂರು ಪ್ರಕರಣಗಳ ಬಗ್ಗೆ ಸಿದ್ಧತೆ ಮಾಡಿಕೊಳ್ಳುವುದು, ವಾದ–ಪ್ರತಿವಾದಗಳನ್ನು ಆಲಿಸುವುದು, ಸ್ವತಂತ್ರ ಸಂಶೋಧನೆ ನಡೆಸುವುದು ಮತ್ತು ತೀರ್ಪುಗಳನ್ನು ಬರೆಯುವುದು ಸುಲಭದ ಕೆಲಸವೇನೂ ಅಲ್ಲ. ಅದರ ಜತೆಗೆ, ವಿಶೇಷವಾಗಿ ಹಿರಿಯ ನ್ಯಾಯಮೂರ್ತಿಗಳು ಆಡಳಿತಾತ್ಮಕವಾದ ವಿವಿಧ ಕೆಲಸಗಳನ್ನೂ ನಿಭಾಯಿಸಬೇಕಾಗುತ್ತದೆ ಎಂದು ಅವರು ವಿವರಿಸಿದರು.

‘ನಾವು ಮಧ್ಯರಾತ್ರಿವರೆಗೆ ಕೂತು ಕೆಲಸ ಮಾಡುತ್ತೇವೆ ಇಲ್ಲವೇ ಬೆಳಿಗ್ಗಿನ ಜಾವ ಎದ್ದು ಕೆಲಸ ಮಾಡುತ್ತೇವೆ. ಒಮ್ಮೊಮ್ಮೆ ಎರಡನ್ನೂ ಮಾಡುತ್ತೇವೆ. ನ್ಯಾಯಾಲಯಕ್ಕೆ ರಜೆ ಇದ್ದಾಗಲೂ ನಾವು ಕೆಲಸ ಮಾಡುತ್ತೇವೆ. ಬಾಕಿ ಇರುವ ತೀರ್ಪುಗಳಿಗಾಗಿ ಸಂಶೋಧನಾ ಕೆಲಸ ನಡೆಸುತ್ತೇವೆ. ಹಾಗಾಗಿಯೇ, ನ್ಯಾಯಮೂರ್ತಿಗಳ ಜೀವನ ಕ್ರಮದ ಬಗ್ಗೆ ಹುಸಿ ಸಂಕಥನಗಳು ಸೃಷ್ಟಿಯಾದಾಗ ಅದನ್ನು ಸಹಿಸಿಕೊಳ್ಳುವುದು ಸುಲಭವಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು. ‘ನಮ್ಮನ್ನು ನಾವು ಸಮರ್ಥಿಸಿಕೊಳ್ಳುವಂತಿಲ್ಲ. ಹಾಗಾಗಿ, ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಿ ಜಾಗೃತಿ ಮೂಡಿಸುವುದು ವಕೀಲರ ಸಂಘದ ಕೆಲಸ’ ಎಂದು ರಮಣ ಸೂಚಿಸಿದರು.

‘ಪ್ರಾಮಾಣಿಕವಾಗಿ ಹೇಳುತ್ತೇನೆ, ನರೀಮನ್ ಅವರು ನ್ಯಾಯಮೂರ್ತಿ ಹುದ್ದೆ ವಹಿಸಿಕೊಳ್ಳುವ ಬದಲು ವಕೀಲರಾಗಿಯೇ ಮುಂದುವರಿದಿದ್ದರೆ ಈಗಿನದಕ್ಕಿಂತ ಹೆಚ್ಚು ಐಷಾರಾಮದ ಮತ್ತು ವಿರಾಮದ ಬದುಕು ನಡೆಸಬಹುದಾಗಿತ್ತು. ತಮ್ಮೆಲ್ಲ ಕೆಲಸಗಳನ್ನು ಸಮತೋಲನದಿಂದ ನಡೆಸಲು ಮತ್ತು ಗುಣಮಟ್ಟದ ಕೆಲಸ ಮಾಡಲು ಅವರಿಗೆ ಸಾಧ್ಯವಾಗಿದೆ. ಅದು ಅವರಿಗೆ ಕೆಲಸ ಮೇಲೆ ಇದ್ದ ಬದ್ಧತೆ ಮತ್ತು ಅವರ ಸಾಮರ್ಥ್ಯದ ಪ್ರಮಾಣಪತ್ರ’ ಎಂದು ಶ್ಲಾಘಿಸಿದರು.

‘ಕಾವಲು ಸಿಂಹ’

‘ನ್ಯಾಯಾಂಗ ಸಂಸ್ಥೆಯ ಕಾವಲು ಕಾಯುತ್ತಿದ್ದ ಸಿಂಹಗಳಲ್ಲಿ ಒಂದನ್ನು ಕಳೆದುಕೊಂಡ ಭಾವ ನನ್ನಲ್ಲಿದೆ. ಸಮಕಾಲೀನ ನ್ಯಾಯಾಂಗ ವ್ಯವಸ್ಥೆಯ ಬಲವಾದ ಸ್ತಂಭವಾಗಿ ಅವರು ಇದ್ದರು’ ಎಂದು ನರೀಮನ್ ಅವರನ್ನು ಮುಖ್ಯ ನ್ಯಾಯಮೂರ್ತಿ ಬಣ್ಣಿಸಿದ್ದಾರೆ.

ವಕೀಲ ಸಮುದಾಯದಿಂದ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾದ ಐದನೇ ವ್ಯಕ್ತಿ ನರೀಮನ್.

‘ನರೀಮನ್ ಅವರ ತೀರ್ಪುಗಳು ಸ್ಪಷ್ಟತೆ, ಪಾಂಡಿತ್ಯಪೂರ್ಣ ಧೋರಣೆ ಮತ್ತು ಜ್ಞಾನವನ್ನು ಪ್ರತಿಬಿಂಬಿಸುತ್ತಿದ್ದವು. ವೈಯಕ್ತಿಕವಾಗಿ ಹೇಳುವುದಾದರೆ ನನ್ನ ಮನಸ್ಸು ತುಂಬಿ ಬಂದಿದೆ. ಭಾವನೆಗಳನ್ನು ಪ್ರಕಟಿಸುವುದು ಕಷ್ಟವಾಗುತ್ತಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ನರೀಮನ್ ಅವರು 2014ರ ಜುಲೈ 7ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಈವರೆಗೆ ಅವರು 13,500 ಪ್ರಕರಣಗಳನ್ನು ಇತ್ಯರ್ಥ ಮಾಡಿದ್ದಾರೆ. ಖಾಸಗಿತನವೂ ಮೂಲಭೂತ ಹಕ್ಕು, ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿ ಬಂಧನ ರದ್ದತಿ, ಸಹಮತದ ಸಲಿಂಗ ಲೈಂಗಿಕತೆಯ ಅಪರಾಧ ಮುಕ್ತಿ ಮತ್ತು ಶಬರಿಮಲೆ ದೇಗುಲಕ್ಕೆ ಎಲ್ಲ ವಯೋಮಾನದ ಮಹಿಳೆಯರಿಗೆ ಮುಕ್ತ ಪ್ರವೇಶದಂತಹ ಚಾರಿತ್ರಿಕ ತೀರ್ಪು ನೀಡಿದ ಪೀಠಗಳಲ್ಲಿ ನರೀಮನ್ ಇದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೋವಿಡ್ ಎರಡನೇ ಅಲೆಯು ದೇಶದಲ್ಲಿ ಸಾವಿರಾರು ಜನರನ್ನು ಬಲಿ ಪಡೆಯಿತು. ಅದೇ ಹೊತ್ತಿಗೆ ಎದುರಾದ ಆಮ್ಲಜನಕ ಕೊರತೆಯು ಇನ್ನಷ್ಟು ಸಾವುನೋವಿಗೆ ಕಾರಣವಾಯಿತು. ಆದರೆ ಆಮ್ಲಜನಕ ಕೊರತೆಯಿಂದ ಮೃತಪಟ್ಟಿದ್ದು ಒಬ್ಬರು ಮಾತ್ರ ಎಂದು ಸರ್ಕಾರ ತಿಳಿಸಿದೆ ಎಂದು ಇಂಗ್ಲಿಷ್ ನಿಯತಕಾಲಿಕ ಔಟ್‌ಲುಕ್ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿದೆ. ಕೇಂದ್ರ ಆರೋಗ್ಯ ಇಲಾಖೆ ಜಂಟಿ ಕಾರ್ಯದರ್ಶಿ ಲವ ಅಗರ್ವಾಲ್ ಅವರು ಈ ಹೇಳಿಕೆ ನೀಡಿದ್ದಾರೆ ಎಂದು ವೆಬ್‌ಸೈಟ್ ಉಲ್ಲೇಖಿಸಿದೆ.



‘ಪತ್ರಿಕೆ ಉಲ್ಲೇಖಿಸಿರುವ ಮಾಹಿತಿಯು ತಪ್ಪಾಗಿದೆ. ಆಮ್ಲಜನಕ ಕೊರತೆಯಿಂದ ಕೇವಲ ಒಂದು ಸಾವು ಸಂಭವಿಸಿದೆ ಎಂಬುದಾಗಿ ಲವ ಅಗರ್ವಾಲ್ ಅವರು ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ’ ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ‘ಆಮ್ಲಜನಕ ಕೊರತೆಯಿಂದ ಸಂಭವಿಸಿದ ಸಾವುಗಳ ಬಗ್ಗೆ ವರದಿ ನೀಡಿ ಎಂದು ರಾಜ್ಯಗಳಿಗೆ ಸೂಚಿಸಲಾಗಿತ್ತು. ಈವರೆಗೆ 13 ರಾಜ್ಯಗಳಷ್ಟೇ ಪ್ರತಿಕ್ರಿಯೆ ನೀಡಿವೆ. ‘ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸಿರಬಹುದು’ ಎಂದು ಪಂಜಾಬ್ ಮಾತ್ರವೇ ಹೇಳಿದೆ. ಬೇರೆ ರಾಜ್ಯಗಳು ಮಾಹಿತಿಯೇ ನೀಡಿಲ್ಲ’ ಎಂದು ಲವ ಅಗರ್ವಾಲ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಆಗಸ್ಟ್ 13, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಪಂಚಮೀ ಗಂ. 19-10 (ಹ. 1-55) ಶುಕ್ರವಾರ ನಿತ್ಯ ನಕ್ಷತ್ರ ಹಸ್ತ ಗಂ. 7-28 (ಬೆ. 9-14) ಸಾಧ್ಯ ನಾಮ ಯೋಗ ಗಂ. 23-53 ಬಾಲವ ಕರಣ ಗಂ. 19-10 ವಿಷ ಗಂ. 26-26 ಅಮೃತ ಗಂ. 49-11 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-10 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 3 8

ಮೇಷ: ವೃತ್ತಿ ನೈಪುಣ್ಯತೆಯಿಂದಾಗಿ ನೌಕರಸ್ಥರಿಗೆ ವಿಶೇಷ ಸ್ಥಾನಮಾನ ದೊರಕಲಿದೆ. ಪದೋನ್ನತಿಯಿಂದಾಗಿ ಆರ್ಥಿಕ ಸುಧಾರಣೆ ಕಾಣಲಿದ್ದೀರಿ. ಚಿನ್ನಾಭರಣ ಖರೀದಿ ಸಾಧ್ಯತೆ. ಮನೆಗೆ ಹೊಸ ಸದಸ್ಯರ ಸೇರ್ಪಡೆ.

ವೃಷಭ: ಅಲಂಕಾರಿಕ ವಸ್ತುಗಳನ್ನು ಖರೀದಿಸಲಿದ್ದೀರಿ. ಸರಳ ವಿವಾಹದ ನಿಶ್ಚಯದಿಂದಾಗಿ ಮನೆಯಲ್ಲಿ ಸಂತಸ ಮೂಡಿಸಲಿದ್ದೀರಿ. ಮಹಿಳೆಯರಿಗೆ ಸಂಗಾತಿಯಿಂದ ವಿಶೇಷ ಉಡುಗೊರೆ. ಮನೆಯಲ್ಲಿ ಹಬ್ಬದ ವಾತಾವರಣ.

ಮಿಥುನ: ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಶ್ರಮವಹಿಸಿ ಮಾಡಿದ ಉತ್ತಮ ಸಾಧನೆಯ ಸಂತಸವನ್ನು ಮನೆಯವರೊಂದಿಗೆ ಹಂಚಿಕೊಳ್ಳಲಿದ್ದೀರಿ. ಸರ್ಕಾರಿ ಪದೋನ್ನತಿಯಿಂದಾಗಿ ಉತ್ತಮ ಆದಾಯ.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಸಂಪೂರ್ಣ ನಿಮ್ಮನ್ನು ನೀವು ತೊಡಗಿಸಿಕೊಳ್ಳಲಿದ್ದೀರಿ. ಮನೆಯ ಜವಾಬ್ದಾರಿಯನ್ನು ಯೋಗ್ಯ ರೀತಿಯಲ್ಲಿ ನಿಭಾಯಿಸಿ ಅನ್ಯರ ಪ್ರಶಂಸೆಗೆ ಪಾತ್ರರಾಗುವಿರಿ.

ಸಿಂಹ: ಬಂಧುವೊಬ್ಬರ ಮನೆಯಲ್ಲಿ ಸಂಜೆಯ ವರೆಗೂ ವಿಶೇಷ ಸಮಾರಂಭಗಳಲ್ಲಿ ಭಾಗಿ. ಮನೆಯವರ ವಿಷಯದಲ್ಲಿ ಉದಾಸೀನ ಸಲ್ಲದು. ವ್ಯವಹಾರಗಳು ಎಂದಿನಂತೆ ನಡೆಯಲಿವೆ.

ಕನ್ಯಾ: ಅನಗತ್ಯ ಮಾತುಕತೆ, ಚರ್ಚೆಗಳಲ್ಲಿ ಭಾಗವಹಿಸದಿರುವುದೇ ಉತ್ತಮ. ವಕೀಲ ವೃತ್ತಿಯಲ್ಲಿರುವವರಿಗೆ ಬಿಡುವಿನ ದಿನ. ಪ್ರವಾಸಗಳಿಗೆ ಶುಭದಿನವಾಗಲಿದೆ. ಚಿನ್ನಾಭರಣ ವ್ಯಾಪಾರಿಗಳಿಗೆ ವಿಶೇಷ ಲಾಭ ದೊರಕಲಿದೆ.

ತುಲಾ: ವೃತ್ತಿ ಜೀವನದಲ್ಲಿ ಬದಲಾವಣೆ ಸಾಧ್ಯತೆ. ಆದಾಯದಲ್ಲಿ ಹೆಚ್ಚಳದ ನಿರೀಕ್ಷೆ. ಶಿಕ್ಷಣ ಕ್ಷೇತ್ರದಲ್ಲಿರುವವರ ಸೇವೆಯನ್ನು ಗಮನಿಸಿ ಸಾಮಾಜಿಕ ಗೌರವ ಪ್ರಾಪ್ತವಾಗಲಿದೆ. ಸಂಗಾತಿಯ ಮಾತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ.

ವೃಶ್ಚಿಕ: ನಿಮ್ಮ ರಾಜಕೀಯ ವಿಷಯದಲ್ಲಿ ಬದಲಾವಣೆಯೊಂದನ್ನು ಕಾಣಲಿದ್ದೀರಿ. ನಿಮ್ಮ ಪ್ರಭಾವದಿಂದಾಗಿ ನೆರೆ ಹೊರೆಯವರ ಸಮಸ್ಯೆಗಳನ್ನು ಪರಿಹಾರ ಮಾಡಲಿದ್ದೀರಿ.

ಧನು: ಪ್ರಸಿದ್ಧ ಸಂಸ್ಥೆಯೊಂದಕ್ಕೆ ಸಲಹೆಗಾರರಾಗಿ ಸೇವೆ ಸಲ್ಲಿಸುವ ಅವಕಾಶ. ಗುಪ್ತ ಆಸ್ತಿ ಖರೀದಿಯ ಸಾಧ್ಯತೆ. ತುರ್ತು ವಿಷಯಗಳ ಬಗ್ಗೆ ಗಮನ ಹರಿಸುವಿರಿ. ಗೆಳೆಯರೊಂದಿಗೆ ವಿಚಾರ ವಿನಿಮಯ ನಡೆಸಲಿದ್ದೀರಿ.

ಮಕರ: ಕರಕುಶಲ ವೃತ್ತಿಗಳಲ್ಲಿ ತೊಡಗಿದವರಿಗೆ ಹೆಚ್ಚಿನ ವರಮಾನ ದೊರಕಲಿದೆ. ನನೆಗುದಿಗೆ ಬಿದ್ದಿರುವ ನಿರ್ಮಾಣ ಕೆಲಸಗಳು ಪೂರ್ಣಗೊಳ್ಳಲು ಚುರುಕು ಪಡೆದುಕೊಳ್ಳುವವು.

ಕುಂಭ: ಮುಂದಾಲೋಚನೆಯಿಂದ ಮುಂಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಸಮಾಜ ಕಲ್ಯಾಣ ಕಾರ್ಯಕ್ಕಾಗಿ ನಿಮ್ಮ ಸಲಹೆ ಸಹಕಾರಗಳನ್ನು ನೀಡಬೇಕಾದ ಅನಿವಾರ್ಯತೆ ಉಂಟಾಗಬಹುದು.

ಮೀನ: ಸ್ನೇಹಿತರು ಮತ್ತು ಬಂಧುಗಳೊಂದಿಗಿನ ಸಂಬಂಧಗಳು ಗಟ್ಟಿಗೊಳ್ಳುವ ಸಾಧ್ಯತೆ. ಮನೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಸಲ್ಲದು. ಮನೆಯವರ ಮನ ಮೆಚ್ಚಿಸಲು ಅನ್ಯ ಮಾರ್ಗ ಸರಿಯಾಗಲಾರದು.

ನಿಮ್ಮ ಜನ್ಮದಿನ 13-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಹೊಸ ಆಸ್ತಿಗಳನ್ನು ಖರೀದಿಸಲಿದ್ದೀರಿ. ಹೊಸ ಯೋಜನೆಗಳನ್ನು ಪ್ರಾರಂಭಿಸುವ ವಿಚಾರದಲ್ಲಿ ಎಚ್ಚರಿಕೆಯ ನಡೆಯ ಅಗತ್ಯ ಕಂಡುಬರುವುದು. ನಿಮ್ಮ ಮುಂದಿನ ಯೋಜನೆಗಳ ಬಗ್ಗೆ ಹೆಮ್ಮೆಯ ಜೊತೆಗೆ ಸೂಕ್ಷ್ಮ ಪರಿಶೀಲನೆಯ ಅಗತ್ಯವೂ ಕಂಡುಬರುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ



ನಾನಾತ್ವದಲ್ಲಿ ಏಕತ್ವ

ಸೌಂದರ್ಯದಾಲಯ ಬರಿ ದ್ವಂದ್ವವೇನಲ್ಲ |
ದ್ವಂದ್ವದೊಳಗನುವು; ಅದು ಪರಿಮಾಣದುಚಿತ ||
ಸಂಧಾನರೀತಿಯದು; ಸಹಕಾರ ನೀತಿಯದು |
ಸಂದರ್ಭಸಹಜತೆಯೊ – ಮಂಕುತಿಮ್ಮ || 449 ||

ಪದ-ಅರ್ಥ: ಸೌಂದರ್ಯದಾಲಯ = ಸೌಂದರ್ಯದ + ಆಲಯ (ಮನೆ), ದ್ವಂದ್ವದೊಳಗನುವು = ದ್ವಂದ್ವದೊಳಗೆ + ಅನುವು (ಹೊಂದಾಣಿಕೆ, ಅವಕಾಶ), ಪರಿಮಾಣದುಚಿತ = ಪರಿಮಾಣದ (ಅಳತೆಯ) + ಉಚಿತ (ಸರಿಯಾದದ್ದು)

ವಾಚ್ಯಾರ್ಥ: ಸೌಂದರ್ಯವೆನ್ನುವುದು ಬರೀ ದ್ವಂದ್ವವಲ್ಲ. ಅದು ದ್ವಂದ್ವದೊಳಗಿನ ಹೊಂದಾಣಿಕೆ. ಅದು ಸರಿಯಾದ ಪ್ರಮಾಣದಲ್ಲಿದ್ದರೆ ಉಚಿತ. ಅದು ಸಂಧಾನದ ಬಗೆಯದು, ಸಹಕಾರವನ್ನು ಬಯಸುವುದು ಮತ್ತು ಸಂದರ್ಭಕ್ಕೆ ಸಹಜವಾದದ್ದು.


ವಿವರಣೆ: ಬದುಕೊಂದು ಸೌಂದರ್ಯದ ತವರುಮನೆ. ಆ ಸೌಂದರ್ಯದ ಘಟಕಗಳು ಏಕದ್ರವ್ಯವಲ್ಲ. ಅದು ಅನೇಕ ಗುಣಗಳು ಮತ್ತು ಪ್ರಭಾವಗಳ ಸಂಮಿಶ್ರಣ. ಅದೊಂದು ಹೂವಿನ ಗುಚ್ಛವಿದ್ದಂತೆ. ಬರೀ ಹಳದಿ ಬಣ್ಣದ ಗುಲಾಬಿ ಹೂವುಗಳ ಗುಚ್ಛ ಚೆಂದ. ಆದರೆ ಅದರ ಮಧ್ಯದಲ್ಲೊಂದು ಕೆಂಪು ಗುಲಾಬಿ ಇನ್ನೂ ಸೌಂದರ್ಯವನ್ನು ವೃದ್ಧಿಸುತ್ತದೆ. ಕಪ್ಪು ತಲೆಗೂದಲಿನ ನಡುವೆ ಬಿಳೀ ಬೈತಲೆ ಚೆಂದ, ಬಿಳೀ ಮರುಭೂಮಿಯ ಮಧ್ಯದ ಕಪ್ಪು ರಸ್ತೆ ಚೆಂದ. ಕಪ್ಪು ಬಂಡೆಗಳ ನಡುವೆ ತೂರಿ ಬರುವ ನೀರಿನ ಬಿಳಿಯನೊರೆ ಬಲುಚೆಂದ. ಹೀಗೆ ಗುಣಭೇದ, ರೂಪಭೇದಗಳ ನಡುವಿನ ಅನ್ಯೋನ್ಯತೆ, ಸಹಕಾರ ಸೊಗಸಿನ ಕಾರಣ. ಯಾವುದೇ ಒಂದು ರೂಪ, ಗುಣ ತಾನೊಂದೇ ಇದ್ದಾಗ ಸೊಗಸಾಗದು. ಪ್ರತಿಯೊಂದು ರೂಪವೂ ತನ್ನ ನೆರೆಹೊರೆಯ ರೂಪ ಗುಣಗಳೊಡನೆ ಬೆರೆಯಬೇಕು, ತನ್ನ ಭಾವಚರ್ಯೆಗಳನ್ನು ಪರಿಷ್ಕಾರ ಮಾಡಿಕೊಂಡು ಒಟ್ಟಿನ ಸೊಗಸಿಗೆ ಕಾರಣವಾಗಬೇಕು.

ಸಾಂಬಾರಿನ ವಾಸನೆ ಬಂದದ್ದು ಯಾವುದರಿಂದ? ಬೇಳೆಯಿಂದಲೇ, ನೀರಿನಿಂದಲೇ, ಉಪ್ಪು, ಹುಳಿ, ಮೆಣಸಿನಿಂದಲೇ? ಬೆಲ್ಲದಿಂದಲೇ? ನೋಡಿದರೆ ಈ ಎಲ್ಲ ವಸ್ತುಗಳ ಬಣ್ಣ, ಗುಣಗಳು ತುಂಬ ಬೇರೆ. ಹುಣಿಸೆಹಣ್ಣು ಮತ್ತು ಬೆಲ್ಲಗಳು ವಿರುದ್ಧ ಗುಣವುಳ್ಳವುಗಳು. ಆದರೆ ಸಾಂಬಾರಿನಲ್ಲಿ ಸರಿಯಾದ ಪ್ರಮಾಣದಲ್ಲಿದ್ದಾಗ ವಿಶೇಷ ರುಚಿ ಕೊಡುತ್ತವೆ. ಈ ವಸ್ತುಗಳನ್ನು ಬೇರೆ ಬೇರೆಯಾಗಿ ತಿನ್ನುವುದಾಗುವುದಿಲ್ಲ. ಅವು ಸರಿಯಾದ ರೀತಿಯಲ್ಲಿ ಬೆರಕೆಯಾದಾಗ ಸಾಂಬಾರಿನ ಘಮಲು ಬರುತ್ತದೆ. ಇದು ವಿವಿಧತೆಯ ನಾಶವಲ್ಲ, ಅದು ವೈವಿಧ್ಯದ ಸಂಮಿಳಿತತೆ. ಅದೇ ಸಮರಸತೆ, ಇದೇ ದ್ವಂದ್ವಗಳ ಸಮನ್ವಯತೆ. ಶ್ರೀರಾಮಕೃಷ್ಣರ ಬದುಕು ಇದಕ್ಕೊಂದು ಸುಂದರ ಉದಾಹರಣೆ. ಅದು ವೈರುಧ್ಯಗಳ ಸಂಗಮ. ಅತ್ಯಂತ ಅಶಕ್ತ ದೇಹದಲ್ಲಿ ಅತ್ಯಂತ ಧೃಡವಾದ ಮನಸ್ಸು; ಹೊಟ್ಟೆಪಾಡಿನ ವಿದ್ಯೆಯನ್ನು ನಿರಾಕರಿಸಿದರೂ, ಜ್ಞಾನ ಮತ್ತು ಸಾಮಾನ್ಯಜ್ಞಾನದ ಗಣಿ; ಮದುವೆಯಾದರೂ ಸಾಮಾನ್ಯರಂತೆ ಗಂಡನಾಗದೆ ಉಳಿದವರು; ಯಾವುದೇ ವೈಯಕ್ತಿಕ ಸುಖಕ್ಕೆ ನಿರ್ಲಕ್ಷ್ಯ ಭಾವದಿಂದಿದ್ದವರಿಗೆ ಜಿಲೇಬಿ ಮತ್ತು ಮೀನಿನ ಬಗ್ಗೆ ಅಪಾರ ಪ್ರೀತಿ; ತಂತ್ರಸಾಧನೆ ಮಾಡಿದರೂ ಭೋಗಿಯಾಗದೆ ಉಳಿದವರು; ಸನ್ಯಾಸ ಪಡೆದರೂ ಸಂಸಾರ ತೊರೆದವರಲ್ಲ, ಕಾವಿ ಧರಿಸಿದವರಲ್ಲ. ನಿರಾಕಾರದ ನಿರ್ವಿಕಲ್ಪ ಸಮಾಧಿ ಪಡೆದರೂ ಕಾಳಿಮಾತೆಯ ದರ್ಶನಕ್ಕೆ ಹಾತೊರೆದವರು; ಸಾಧನೆಯಲ್ಲಿ ದೈವಿಕತೆಯನ್ನು ಮುಟ್ಟಿದ್ದರೂ, ಮಾನವೀಯ ಸಂಬಂಧಗಳಲ್ಲಿ ಅತಿಯಾದ ಸಂವೇದನೆ; ರಾಜರು, ಶ್ರೀಮಂತರ ಬಗ್ಗೆ ಅಲಕ್ಷ್ಯವಿದ್ದರೂ ಬಡಜನರ ಬಗ್ಗೆ, ಶಿಷ್ಯರ ಬಗ್ಗೆ ಅಪಾರ ಪ್ರೀತಿ. ಈ ಹದವಾದ ವೈರುಧ್ಯಗಳ ಮಿಶ್ರಣವೇ ಅವರನ್ನು ದೈವದ ಸ್ಥಾನದಲ್ಲಿ ನಿಲ್ಲಿಸಿತು. ನಾನಾತ್ವದಲ್ಲಿ ಏಕತ್ವದ ಅನುಸಂಧಾನ ಜ್ಞಾನಿಯ ವಿಶೇಷತೆ. ❖

ಪದಬಂಧ 4687 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ನೆನಪಿನಿಂದ ಮಾಸದ ತಿಂಗಳು (2)
5.ಉತ್ತೇಜನ ಇಲ್ಲಿದೆ (3)
6.ಕಂಬಿ ಹಿಡಿದು ತೋರಿದ ಬಿನ್ನಾಣ (2)
7.ಹೂವಿನಲ್ಲಿರುವ ಹುಡಿ (3)
9.ಮಂಕ ಹಿಡಿದಿರುವ ಕಪ್ಪೆ (3)
10.ಮನಸ್ಸಿಗೆ ತಾಕುವಂಥದ್ದು (5)
11.ಇದು ಮುಖ್ಯವಾದುದು (3)
12.ಕುದುರೆಯನ್ನೇರುವ ಬಳೆ (3)
15.ನವರತ್ನಗಳಲ್ಲಿ ಅತ್ಯಂತ ಬೆಲೆ ಬಾಳುವಂಥದ್ದು (2)
16.ಮಳೆಯಲ್ಲಿರುವ ಚರ್ಮ ವಾದ್ಯ (3)
17. ನುಡಿಗಟ್ಟುಇಲ್ಲಿ ಉಲ್ಟಾ ಆಗಿಬಿಟ್ಟಿದೆ (2)

ಮೇಲಿಂದ ಕೆಳಕ್ಕೆ
1.ಮುಕ್ತಾಯವನ್ನು ಹೀಗೆ ಹೇಳಿ (4)
2.ಹುರುಪಿನಿಂದ ಕೆಲಸ ಮಾಡುವಿಕೆ (3)
3.ಅನಿರೀಕ್ಷಿತ ಘಟನೆ (4)
8.ಲಕ್ಷ್ಯಕ್ಕೊಂದು ಪರ್ಯಾಯ ಪದ (3)
9.ಮಂಕ ಹಿಡಿದಿರುವ ಬುಟ್ಟಿ (3)
11.ವಿಗ್ರಹಗಳ ಹಿಂದೆ ಅಲಂಕಾರಕ್ಕಾಗಿಡುವ ಕಮಾನಿನ ಸಾಧನ (4)
13.ಚಿಲ್ಲರೆ ಹಣವಿದು (4)
14.ಹುರಿಯಲ್ಲಿರುವ ಒಳ್ಳೆ ಆಟಗಾರ ಕಾಣುವನೇ? (3)



4686ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಓಲಗ 3.ಕಂಸ 5.ಪರ 6.ಅಪರೂಪ 7.ವಿಶ್ವವಿದ್ಯಾಲಯ 10.ರಾಜಾರೋಷ 11.ಸ್ವಾರ್ಥ 13.ತರ್ಕ 14.ತಡಿಕೆ

ಮೇಲಿಂದ ಕೆಳಕ್ಕೆ: 1.ಓಘ 2.ಗಮಾರ 4.ಸಮೀಪ 5.ಪದವಿ 6.ಅವನಿ 8.ವಿಶೇಷ 9.ಯಥಾರ್ಥ 10.ರಾವುತ 11.ಸ್ವಾಗತ 12.ಶಂಕೆ

ಸುಡೊಕು 5073

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5072 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಶೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,282
ಇಂದಿನ ಅಂತ್ಯ	16,364
▲	82
ದಿನದ ಗರಿಷ್ಠ	16,375

ವಿನಿಮಯ ದರ

$ ಡಾಲರ್	74.25
£ ಪೌಂಡ್	102.96
€ ಯುರೊ	87.20
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1475)
ಸೋಯಾ (ರಿಫೈನ್ಡ್)	₹1390 (1390)
ಸೂರ್ಯಕಾಂತಿ (ರಿಫೈನ್ಡ್)	₹1460(1460)
ಪಾಮೋಲಿನ್	₹1275 (1270)

ಆರ್ಥಿಕ ಚೇತರಿಕೆಗೆ ಕ್ರಮ: ಉದ್ಯಮಕ್ಕೆ ನಿರ್ಮಲಾ ಭರವಸೆ

ನವದೆಹಲಿ (ಪಿಟಿಐ): 'ಆರ್ಥಿಕ ಚೇತರಿಕೆ ಮತ್ತು ಬೆಳವಣಿಗೆಗೆ ಅಗತ್ಯ ಇರುವ ಎಲ್ಲವನ್ನೂ ಮಾಡಲು ಸರ್ಕಾರ ಸಿದ್ಧವಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಉದ್ಯಮವಲಯಕ್ಕೆ ಗುರುವಾರ ಭರವಸೆ ನೀಡಿದರು.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಸಿಐಐ) ವಾರ್ಷಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ರಾಜ್ಯಗಳು ಕೋವಿಡ್ ನಿರ್ಬಂಧಗಳನ್ನು ಸಡಿಲಿಸಿದ ಬಳಿಕ ಆರ್ಥಿಕತೆಯು ಚೇತರಿಸಿಕೊಳ್ಳಲು ಆರಂಭಿಸಿದೆ' ಎಂದು ಹೇಳಿದರು.

'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿಯೂ ಆರ್ಥಿಕ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವ ಬದ್ಧತೆಯನ್ನು ತೋರಿಸಿದೆ' ಎಂದರು.

'ಪ್ರಸಕ್ತ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ ವಿದೇಶಿ ನೇರ ಬಂಡವಾಳ ಹೂಡಿಕೆಯು ಶೇ 37ರಷ್ಟು ಹೆಚ್ಚಾಗಿದೆ. ವಿದೇಶಿ ವಿನಿಯಮ ಮೀಸಲು ನಿಧಿಯು ಜುಲೈನಲ್ಲಿ ₹ 45.88 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ' ಎಂದು ತಿಳಿಸಿದರು.

ಎನ್‌ಎಂಡಿಸಿ ಲಾಭ ₹ 3,191 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿಯ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಆರು ಪಟ್ಟು ಹೆಚ್ಚಾಗಿದ್ದು, ₹ 3,191 ಕೋಟಿಗೆ ತಲುಪಿದೆ. ವರಮಾನದಲ್ಲಿ ಹೆಚ್ಚಳ ಆಗಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭ ₹ 531 ಕೋಟಿ ಇತ್ತು.

ಆಹಾರ ವಸ್ತುಗಳ ಬೆಲೆಯಲ್ಲಿ ಇಳಿಕೆ ಪರಿಣಾಮ: ಎನ್‌ಎಸ್‌ಒ ಮಾಹಿತಿ

ಚಿಲ್ಲರೆ ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಇಳಿಕೆ ಆಗಿರುವುದರಿಂದ ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.59ಕ್ಕೆ ಇಳಿಕೆ ಆಗಿದೆ.

ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು ಜೂನ್‌ನಲ್ಲಿ ಶೇ 6.26ರಷ್ಟು ಇತ್ತು. ಹಿಂದಿನ ವರ್ಷದ ಜುಲೈನಲ್ಲಿಯೂ ಶೇ 6.73ರಷ್ಟು ಗರಿಷ್ಠ ಮಟ್ಟದಲ್ಲಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಆಹಾರ ಹಣದುಬ್ಬರವು ಜೂನ್‌ನಲ್ಲಿ ಶೇ 5.15ರಷ್ಟು ಇದ್ದಿದ್ದು ಜುಲೈನಲ್ಲಿ ಶೇ 3.96ಕ್ಕೆ ಇಳಿಕೆ ಕಂಡಿದೆ.

ಬೇಳೆಕಾಳುಗಳ ದರವು ಶೇ 10.01ರಿಂದ ಶೇ 9.04ಕ್ಕೆ ಇಳಿಕೆ ಆಗಿದೆ. ಆದರೆ, ಮಾಂಸ, ಮೀನು, ಮೊಟ್ಟೆ ಮತ್ತು ಹಾಲಿನ ಹಣದುಬ್ಬರವು ಏರಿಕೆ ಕಂಡಿದೆ.

ಹಣದುಬ್ಬರವನ್ನು ಶೇ 4ರ



ಮಟ್ಟದಲ್ಲಿ (ಇದರಲ್ಲಿ ಶೇ 2ರಷ್ಟು ಹೆಚ್ಚು ಅಥವಾ ಶೇ 2ರಷ್ಟು ಕಡಿಮೆ ಆಗಬಹುದು) ಇರಿಸುವ ಗುರಿಯನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ನೀಡಿದೆ. 2021–22ನೇ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.7ರ ಮಟ್ಟದಲ್ಲಿ ಇರಲಿದೆ ಎಂದು ಆರ್‌ಬಿಐ ತನ್ನ ಈಚಿನ ಹಣಕಾಸು ನೀತಿ ಪರಾಮರ್ಶೆಯಲ್ಲಿ ಅಂದಾಜು ಮಾಡಿದೆ.

ಜೂನ್‌ನಲ್ಲಿ ಕೈಗಾರಿಕಾ ಉತ್ಪಾದನೆ ಶೇ 13.6ರಷ್ಟು ಬೆಳವಣಿಗೆ

ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ಜೂನ್‌ನಲ್ಲಿ ಶೇ 13.6ರಷ್ಟು ಬೆಳವಣಿಗೆ ಕಂಡಿದೆ. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಗುರುವಾರ ಈ ಮಾಹಿತಿ ಬಿಡುಗಡೆ ಮಾಡಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ವಲಯದ ಬೆಳವಣಿಗೆಯು 2020ರ ಜೂನ್‌ನಲ್ಲಿ ಶೇ 16.6ರಷ್ಟು ಇಳಿಕೆ ಕಂಡಿತ್ತು.

ತಯಾರಿಕೆ, ಗಣಿಗಾರಿಕೆ ಮತ್ತು ವಿದ್ಯುತ್ ವಲಯಗಳ ಉತ್ತಮ ಬೆಳವಣಿಗೆಯಿಂದ ಜೂನ್‌ನಲ್ಲಿ ಈ ಮಟ್ಟದ ಪ್ರಗತಿ ಸಾಧ್ಯವಾಗಿದೆ ಎಂದು ಅದು ಹೇಳಿದೆ.

ಐಐಪಿಗೆ ಶೇ 77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯದ ಉತ್ಪಾದನೆಯು ಜೂನ್‌ನಲ್ಲಿ ಶೇ 13ರಷ್ಟು ಹೆಚ್ಚಾಗಿದೆ. ಗಣಿಗಾರಿಕೆಯ ಉತ್ಪಾದನೆಯು ಶೇ 23.1ರಷ್ಟು, ವಿದ್ಯುತ್ ಉತ್ಪಾದನೆಯು ಶೇ 8.3ರಷ್ಟು ಏರಿಕೆ ಕಂಡಿದೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಐಐಪಿಯು ಶೇ 45ರಷ್ಟು ಬೆಳವಣಿಗೆ ಕಂಡಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 35.6ರಷ್ಟು ಇಳಿಕೆಯಾಗಿತ್ತು.

ರಿಲಯನ್ಸ್ ಡಿಜಿಟಲ್: ಸ್ವಾತಂತ್ರ್ಯೋತ್ಸವಕ್ಕೆ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಕಂಪನಿಯು ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ಹಲವು ವಿಶೇಷ ಕೊಡುಗೆಗಳನ್ನು ಘೋಷಿಸಿದೆ.

ಆಗಸ್ಟ್ 16ರವರೆಗೆ ಖರೀದಿ ಮಾಡಲು ಎಚ್‌ಡಿಎಫ್‌ಸಿ ಬ್ಯಾಂಕ್ ಕಾರ್ಡ್‌ಗಳು ಮತ್ತು ಇಎಂಐ ಬಳಸಿದರೆ ಶೇ 10ರಷ್ಟು (₹ 3 ಸಾವಿರದವರೆಗೆ) ತಕ್ಷಣದ ರಿಯಾಯಿತಿ ಸಿಗಲಿದೆ. ಅದೇ ರೀತಿ, ಪೇಟಿಎಂ ಮೂಲಕ ಕನಿಷ್ಠ ₹ 9,999ರ ಖರೀದಿ ನಡೆಸಿದರೆ ₹ 500ರ ವಾಲೆಟ್ ಕ್ಯಾಷ್‌ಬ್ಯಾಕ್ ಪಡೆಯಬಹುದಾಗಿದೆ. ಈ ಕೊಡುಗೆಯು ಆಗಸ್ಟ್ 31ರವರೆಗೂ ಇರಲಿದೆ. ಜೆಸ್ಟ್ ಮನಿ ಮೂಲಕ ₹ 10 ಸಾವಿರದವರೆಗೆ ಖರೀದಿ ನಡೆಸಿದರೆ ಇಎಂಐ ಮೇಲಿನ ವೆಚ್ಚ ಇರುವುದಿಲ್ಲ. ಜೊತೆಗೆ ಶೇ 10ರಷ್ಟು ಕ್ಯಾಷ್‌ಬ್ಯಾಕ್ (₹ 5 ಸಾವಿರದವರೆಗೆ) ಸಹ ಸಿಗಲಿದೆ. ಟಿವಿ, ಲ್ಯಾಪ್‌ಟಾಪ್, ಮೊಬೈಲ್‌ಗಳಿಗೆ ಈ ಕೊಡುಗೆಗಳು ಅನ್ವಯಿಸಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ರಿಲಯನ್ಸ್ ಡಿಜಿಟಲ್, ಮೈ ಜಿಯೊ ಸ್ಟೋರ್ ಹಾಗೂ www.reliancedegital.in ಮೂಲಕ ಗ್ರಾಹಕರು ಖರೀದಿ ನಡೆಸಬಹುದಾಗಿದೆ ಎಂದು ಅದು ಹೇಳಿದೆ.

ರಾಜ್ಯಗಳಲ್ಲಿ ಕೋವಿಡ್ ನಿರ್ಬಂಧ ಸಡಿಲಿಕೆ ಪರಿಣಾಮ

ಪ್ರಯಾಣಿಕ ವಾಹನಗಳ ಸಗಟು ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನ ಸಗಟು ಮಾರಾಟವು ಕಳೆದ ವರ್ಷದ ಜುಲೈಗೆ ಹೋಲಿಸಿದರೆ ಈ ವರ್ಷದ ಜುಲೈನಲ್ಲಿ ಶೇ 45ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಗುರುವಾರ ಹೇಳಿದೆ.

ರಾಜ್ಯಗಳು ಕೋವಿಡ್ ನಿರ್ಬಂಧಗಳನ್ನು ಸಡಿಲಿಸಿದ್ದರಿಂದ ಮಾರಾಟದಲ್ಲಿ ಹೆಚ್ಚಳ ಕಂಡುಬಂದಿದೆ. ಹಬ್ಬದ ಋತು ಹತ್ತಿರವಾಗುತ್ತಿರುವುದರಿಂದ ಕಂಪನಿಗಳು ತಯಾರಿಕೆಗೆ ಗಮನ ನೀಡುತ್ತಿವೆ ಎಂದೂ ಅದು ತಿಳಿಸಿದೆ.

ಕಾರು, ಯುಟಿಲಿಟಿ ವಾಹನಗಳು ಮತ್ತು ವ್ಯಾನ್‌ಗಳನ್ನೂ ಒಳಗೊಂಡು ಒಟ್ಟಾರೆಯಾಗಿ ಪ್ರಯಾಣಿಕ ವಾಹನಗಳ ಮಾರಾಟವು 2021ರ ಜುಲೈನಲ್ಲಿ 2.64 ಲಕ್ಷಕ್ಕೆ ತಲುಪಿದೆ. ಹಿಂದಿನ ವರ್ಷದ ಜುಲೈನಲ್ಲಿ 1.82 ಲಕ್ಷ ವಾಹನಗಳು ಮಾರಾಟ ಆಗಿದ್ದವು.

ದ್ವಿಚಕ್ರವಾಹನ ಮಾರಾಟ ಶೇ



2 ರಷ್ಟು ಇಳಿಕೆ ಆಗಿದ್ದು 12.53ಕ್ಕೆ ತಲುಪಿದೆ. ಹಿಂದಿನ ವರ್ಷದ ಜುಲೈನಲ್ಲಿ 12.81 ಲಕ್ಷ ವಾಹನಗಳು ಮಾರಾಟ ಆಗಿದ್ದವು.

ಮೋಟರ್‌ಸೈಕಲ್ ಮಾರಾಟವು 8.88 ಲಕ್ಷದಿಂದ 8.37 ಲಕ್ಷಕ್ಕೆ ಶೇ 6ರಷ್ಟು ಇಳಿಕೆ ಕಂಡಿದೆ. ಆದರೆ, ಸ್ಕೂಟರ್ ಮಾರಾಟ ಶೇ 10ರಷ್ಟು ಏರಿಕೆ ಆಗಿದೆ. ಅದೇ ರೀತಿ ತ್ರಿಚಕ್ರ ವಾಹನಗಳ ಮಾರಾಟ ಶೇ 41ರಷ್ಟು ಹೆಚ್ಚಾಗಿದೆ. ಎಲ್ಲಾ ಮಾದರಿಗಳನ್ನು ಒಳಗೊಂಡು ಒಟ್ಟಾರೆ ಮಾರಾಟವು 14.76 ಲಕ್ಷದಿಂದ 15.36 ಲಕ್ಷಕ್ಕೆ ಏರಿಕೆ ಆಗಿದೆ.

ಜಾಗತಿಕ ಮಟ್ಟದಲ್ಲಿ ಸೆಮಿ ಕಂಡಕ್ಟರ್‌ನ ಕೊರತೆ ಹಾಗೂ ಸರಕುಗಳ ದರ ಏರಿಕೆಯಿಂದಾಗಿ ದೇಶಿ ಉದ್ಯಮವು ಮುಂಬರುವ ದಿನಗಳಲ್ಲಿಯೂ ಹೆಚ್ಚಿನ ಸಮಸ್ಯೆಗಳನ್ನು ಎದುರಿಸಲಿದೆ ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ.

ಒಂದೆಡೆ ಕಂಪನಿಗಳು, ಜನರ ಸುರಕ್ಷತೆಯನ್ನು ಗಮನ ನೀಡುತ್ತಾ ಪೂರೈಕೆ ವ್ಯವಸ್ಥೆಯಲ್ಲಿನ ಸವಾಲುಗಳನ್ನು ನಿರ್ವಹಣೆ ಮಾಡುತ್ತಿದ್ದು, ಇನ್ನೊಂದೆಡೆ ಮೂರನೇ ಅಲೆಯ ಮೇಲೆ ಎಚ್ಚರಿಕೆಯ ಕಣ್ಣಿಟ್ಟಿದೆ. ಸದ್ಯದ ಸವಾಲಿನ ಮತ್ತು ಅನಿಶ್ಚಿತ ವ್ಯಾಪಾರ ಪರಿಸ್ಥಿತಿಯಲ್ಲಿ ತಯಾರಿಕೆ ಮತ್ತು ಮಾರಾಟವನ್ನು ಆದಷ್ಟೂ ಹೆಚ್ಚಿಸಲು ಉದ್ಯಮವು ಪ್ರಯತ್ನಿಸುತ್ತಿದೆ ಎಂದು ತಿಳಿಸಿದ್ದಾರೆ.

2021ರ ಏಪ್ರಿಲ್–ಜುಲೈ ಅವಧಿಯಲ್ಲಿ ಪ್ರಯಾಣಿಕ ವಾಹನ ಮಾರಾಟವು 2016–17ಕ್ಕೆ ಹೋಲಿಸಿದರೆ ಕಡಿಮೆ ಮಟ್ಟದಲ್ಲಿಯೇ ಇದೆ ಎಂದೂ ಅವರು ಹೇಳಿದ್ದಾರೆ.

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ



ಮುಂಬೈ: ವಿದ್ಯುತ್, ಐ.ಟಿ. ಮತ್ತು ಬ್ಯಾಂಕಿಂಗ್ ವಲಯದ ಷೇರುಗಳ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳು ಗುರುವಾರದ ವಹಿವಾಟಿನಲ್ಲಿ ಹೊಸ ಎತ್ತರಕ್ಕೆ ಏರಿಕೆ ಕಂಡು ವಹಿವಾಟು ಅಂತ್ಯಗೊಳಿಸಿದವು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 19 ಪೈಸೆ ವೃದ್ಧಿಯಾಗಿದ್ದು ಸಹ ಷೇರುಪೇಟೆ ವಹಿವಾಟಿಗೆ ಉತ್ತೇಜನ ನೀಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು ದಿನದ ವಹಿವಾಟಿನಲ್ಲಿ 318 ಅಂಶ ಏರಿಕೆ ಕಂಡು ಹೊಸ ಎತ್ತರವಾದ 54,843 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಹೆಚ್ಚಾಗಿ 16,364 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಪವರ್‌ಗ್ರಿಡ್ ಷೇರು ಶೇ 6.22ರಷ್ಟು ಗರಿಷ್ಠ ಗಳಿಕೆ ಕಂಡಿತು. ಟೆಕ್ ಮಹೀಂದ್ರಾ, ಎಚ್‌ಸಿಎಲ್ ಟೆಕ್, ಟೈಟಾನ್, ಎಲ್‌ಆ್ಯಂಡ್‌ಟಿ, ಎನ್‌ಟಿಪಿಸಿ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳು ಸಹ ಗಳಿಕೆ ಕಂಡಿವೆ.

ಕಳೆದ ಕೆಲವು ದಿನಗಳಿಂದ ಮಾರಾಟದ ಒತ್ತಡಕ್ಕೆ ಒಳಗಾಗಿದ್ದ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಷೇರುಗಳು ಗುರುವಾರ ಉತ್ತಮ ಖರೀದಿ ವಹಿವಾಟಿಗೆ ಒಳಗಾದವು. ಬಿಎಸ್‌ಇ ಮಿಡ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಶೇ 1.97ರವರೆಗೂ ಏರಿಕೆ ಕಂಡಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.17ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 71.56 ಡಾಲರ್‌ಗಳಿಗೆ ತಲುಪಿತು.

ಎಟಿಎಂನಲ್ಲಿ ಹಣ ಇಲ್ಲದಿದ್ದರೆ ಬ್ಯಾಂಕ್‌ಗೆ ದಂಡ: ಆರ್‌ಬಿಐ

ಮುಂಬೈ (ಪಿಟಿಐ): ಎಟಿಎಂಗಳಲ್ಲಿ ನಗದು ಇಲ್ಲದೇ ಇದ್ದರೆ ಅಕ್ಟೋಬರ್ 1ರಿಂದ ಬ್ಯಾಂಕ್‌ಗಳು ದಂಡ ಕಟ್ಟಬೇಕಾಗುತ್ತದೆ. ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಯೋಜನೆಯೊಂದನ್ನು ರೂಪಿಸಿದೆ.

ಎಟಿಎಂಗಳಲ್ಲಿ ನಗದು ಇಲ್ಲದೇ ಸಾರ್ವಜನಿಕರು ತೊಂದರೆ ಎದುರಿಸುತ್ತಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಆರ್‌ಬಿಐ ಈ ನಿರ್ಧಾರಕ್ಕೆ ಬಂದಿದೆ. ಒಂದು ತಿಂಗಳಿನಲ್ಲಿ ಒಟ್ಟಾರೆ 10 ಗಂಟೆಗಳ ಕಾಲ ಎಟಿಎಂನಲ್ಲಿ ಹಣ ಇಲ್ಲದೇ ಇದ್ದರೆ ಪ್ರತಿ ಎಟಿಎಂಗೆ ₹ 10 ಸಾವಿರ ದಂಡ ವಿಧಿಸಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

ಎಟಿಎಂಗಳಲ್ಲಿ ನಗದು ಲಭ್ಯತೆಯನ್ನು ಬ್ಯಾಂಕ್‌ಗಳು ಖಾತರಿಪಡಿಸಿಕೊಳ್ಳಬೇಕು. ಸ್ವತಂತ್ರವಾಗಿ ಎಟಿಎಂ ನಿರ್ವಹಣೆ ಮಾಡುತ್ತಿರುವ (ವೈಟ್ ಲೇಬಲ್ ಎಟಿಎಂ) ಕಂಪನಿಗಳ



ಎಟಿಎಂಗೆ ಬ್ಯಾಂಕ್‌ಗಳು ಹಣ ಭರ್ತಿ ಮಾಡುತ್ತಿದ್ದರೆ ಆ ಕಂಪನಿಗಳಿಂದಲೂ ನಗದು ಲಭ್ಯತೆಯ ಮಾಹಿತಿ ಸಂಗ್ರಹಿಸುತ್ತಿರಬೇಕು. ವೈಟ್ ಲೇಬಲ್ ಎಟಿಎಂಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳಿಗೆ ದಂಡ ವಿಧಿಸಲಾಗುತ್ತದೆ. ಆ ದಂಡವನ್ನು ಎಟಿಎಂ ನಿರ್ವಹಣೆ ಮಾಡುತ್ತಿರುವ ಕಂಪನಿಯಿಂದ ವಸೂಲಿ ಮಾಡಬೇಕೋ ಬೇಡವೋ ಎನ್ನುವುದು ಆಯಾ ಬ್ಯಾಂಕ್‌ನ ವಿವೇಚನೆಗೆ ಬಿಟ್ಟಿದೆ ಎಂದು ಆರ್‌ಬಿಐ ಹೇಳಿದೆ.

ಎಟಿಎಂಗಳಲ್ಲಿ ಹಣ ಇಲ್ಲದೇ ಇರುವ

ಮುಖ್ಯಾಂಶಗಳು

- ಅಕ್ಟೋಬರ್ 1ರಿಂದ ನಿಯಮ ಜಾರಿಗೆ
- ಪ್ರತಿ ಎಟಿಎಂಗೆ ₹ 10 ಸಾವಿರ ದಂಡ ಬೀಳಲಿದೆ

ಸಂದರ್ಭದಲ್ಲಿ ನಗದು ಭರ್ತಿ ಮಾಡಲು ಸಾಧ್ಯವಾಗದೇ ಇರುವ ಕುರಿತು ಕಾರಣದೊಂದಿಗೆ ಸಿಸ್ಟಂನಲ್ಲಿ ಜನರೇಟ್ ಆಗಿರುವ ಮಾಹಿತಿಯನ್ನು ಆರ್‌ಬಿಐನ ವಿತರಣಾ ವಿಭಾಗಕ್ಕೆ ಸಲ್ಲಿಸಬೇಕು.

ಆರ್‌ಬಿಐನ ಪ್ರಾದೇಶಿಕ ಕಚೇರಿಗಳ ವಿತರಣಾ ವಿಭಾಗವು ದಂಡ ವಿಧಿಸಬಹುದಾಗಿದೆ. ದಂಡ ವಿಧಿಸಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಲು ಬ್ಯಾಂಕ್‌ಗಳಿಗೆ ಅವಕಾಶ ಇರಲಿದೆ ಎಂದು ಆರ್‌ಬಿಐ ತಿಳಿಸಿದೆ.

ಎಂಜಿ ಹೆಕ್ಟರ್ ಶೈನ್ ಮಾರುಕಟ್ಟೆಗೆ

ನವದೆಹಲಿ (ಪಿಟಿಐ): ಎಂಜಿ ಮೋಟರ್ ಇಂಡಿಯಾ ಕಂಪನಿಯು ತನ್ನ ಜನಪ್ರಿಯ ಎಸ್‌ಯುವಿ ಹೆಕ್ಟರ್‌ನ ಹೊಸ ಆವೃತ್ತಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 14.51 ಲಕ್ಷದಿಂದ ಆರಂಭವಾಗುತ್ತದೆ.

'ಹೆಕ್ಟರ್ ಶೈನ್' ಆವೃತ್ತಿಯು ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿದೆ. ಪೆಟ್ರೋಲ್ ಎಂಜಿನ್ ಮಾದರಿಯು ಮ್ಯಾನುಯಲ್ ಮತ್ತು ಸಿವಿಟಿ ಟ್ರಾನ್ಸ್‌ಮಿಷನ್‌ನಲ್ಲಿ ಲಭ್ಯವಿದ್ದರೆ, ಡೀಸೆಲ್ ಮಾದರಿಯು ಕೇವಲ ಮ್ಯಾನುಯಲ್ 6 ಸ್ಪೀಡ್ ಟ್ರಾನ್ಸ್‌ಮಿಷನ್ ಅಲ್ಲಿ ಮಾತ್ರವೇ ಲಭ್ಯವಿದೆ.

ಎಲೆಕ್ಟ್ರಿಕ್ ಸನ್‌ರೂಫ್, 17 ಇಂಚು ಅಲಾಯ್ ವೀಲ್ಸ್, ಆ್ಯಪಲ್ ಕಾರ್‌ಪ್ಲೇ ಮತ್ತು ಆಂಡ್ರಾಯ್ಡ್ ಆಟೊ ಇರುವ 26.4 ಸಿ.ಎಂ. ಎಚ್‌ಡಿ ಟಚ್‌ಸ್ಕ್ರೀನ್ ಎವಿಎನ್ ಸಿಸ್ಟಂನಂತಹ ವೈಶಿಷ್ಟ್ಯಗಳನ್ನು ಒಳಗೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

'ಹೆಕ್ಟರ್‌ನ ಎರಡನೇ ವರ್ಷಾಚರಣೆಯ ಸಂದರ್ಭದಲ್ಲಿ ಎಂಜಿ ಕುಟುಂಬಕ್ಕೆ ಹೊಸ ಸದಸ್ಯನನ್ನು ಸ್ವಾಗತಿಸಲು ಇದು ಒಂದು ಉತ್ತಮ ಅವಕಾಶ. ಇದರ ಸೇರ್ಪಡೆಯಿಂದಾಗಿ ನಮ್ಮ ಗ್ರಾಹಕರ ಆಯ್ಕೆ ಮಾಡಿಕೊಳ್ಳುವ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿದಂತಾಗಿದೆ' ಎಂದು ಕಂಪನಿಯ ಭಾರತದ ಸಿಒಒ ಗೌರವ್ ಗುಪ್ತಾ ಹೇಳಿದ್ದಾರೆ.

ಚಿನ್ನ: ₹ 422ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 422 ರಷ್ಟು ಹೆಚ್ಚಾಗಿ ₹ 45,560ರಂತೆ ಮಾರಾಟವಾಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹ 113ರಷ್ಟು ಹೆಚ್ಚಾಗಿದ್ದು ₹ 61,314ಕ್ಕೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಕುಮಟ	
ಚಿಪ್ಪು	31069-35309
ಕೋಕ	21119-31869
ಹಳೆಚಾಲಿ	41269-44099
ಹೊಸಚಾಲಿ	35600-40699
ಪುತ್ತೂರು	
ಕೋಕ	10500-26000
ಹೊಸತು	31000-45000
ಸಿದ್ದಾಪುರ	
ಬಿಳಿಗೋಟು	28691-35139
ಚಾಲಿ	35999-40899
ಕೋಕ	24980-32912
ಕೆಂಪುಗೋಟು	28899-31300
ರಾಶಿ	38699-42499
ತಟ್ಟಿಬೆಟ್ಟೆ	30099-37811
ಶಿವಮೊಗ್ಗ	
ಬೆಟ್ಟೆ	45019-47589
ಗೊರಬಲು	18300-36129
ರಾಶಿ	36899-44299
ಸರಕು	48089-76996
ಸಾಗರ	
ಬಿಳಿಗೋಟು	22899-33989
ಚಾಲಿ	33299-40011
ಕೋಕ	20786-34899
ಕೆಂಪುಗೋಟು	30199-39009
ರಾಶಿ	34009-44419
ಸಿಪ್ಪೆಗೋಟು	17669-23800
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	299-438
ದ್ವಿತಳಿ	313-546

ಮುಂಬೈ ಧಾರಣೆ

ಶೇಂಗಾ

12-8-2021

ಜಾವಾ 70/80(ಹೊಸ)	10000-10050
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9600-9650
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1485)
ಒಂದು ವಾರದ ಡೆಲಿವರಿ	1595 (1480)
ಸೋಯಾ ಕಚ್ಚಾ	1355 (1345)
ಪಾಮ್ ವಾರದ ಡೆಲಿವರಿ	1273(1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,400 (46,100)
ಬೆಳ್ಳಿ ಕೆ.ಜಿ 62,750 (62,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೂರ್ವ ನಿಗದಿಯಂತೆ ಕೆಲಸ ಮಾಡದ ಕ್ರಯೋಜೆನಿಕ್ ಎಂಜಿನ್

ಜಿಎಸ್‌ಎಲ್‌ವಿ ಉಡ್ಡಯನ ವಿಫಲ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಭೂ ಸರ್ವೇಕ್ಷಣೆ ಉಪಗ್ರಹ-03 ಅನ್ನು ಹೊತ್ತು ಗುರುವಾರ ಬೆಳಿಗ್ಗೆ 5.43ರಲ್ಲಿ ನಭಕ್ಕೆ ಜಿಗಿದಿದ್ದ ಜಿಎಸ್‌ಎಲ್‌ವಿ-ಎಫ್‌10 ನೌಕೆಯು, ಉಪಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿದೆ. ನೌಕೆಯ ಕ್ರಯೋಜೆನಿಕ್ ಹಂತವು ಪೂರ್ವನಿಗದಿಯಂತೆ ಕೆಲಸ ಮಾಡದೇ ಇದ್ದ ಕಾರಣ, ಕಾರ್ಯಾಚರಣೆ ವಿಫಲವಾಗಿದೆ ಎಂದು ಇಸ್ರೊ ಹೇಳಿದೆ.

ಈ ಕಾರ್ಯಾಚರಣೆ ವಿಫಲವಾದುದ್ದರ ಬಗ್ಗೆ ವೈಜ್ಞಾನಿಕ ಮತ್ತು ರಾಜಕೀಯ ವಲಯದಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

‘ಪೂರ್ವನಿಗದಿಯಂತೆ ಜಿಎಸ್‌ಎಲ್‌ವಿ ನೌಕೆಯು 5.43ಕ್ಕೆ ನಭದತ್ತ ಜಿಗಿಯಿತು. ನೌಕೆಯ ಮೊದಲ ಹಂತದ ಬೂಸ್ಟರ್ ರಾಕೆಟ್‌ಗಳು ಮತ್ತು ಎರಡನೇ ಹಂತದ ರಾಕೆಟ್‌ಗಳು ಕರಾರುವಕ್ಕಾಗಿ ಕಾರ್ಯನಿರ್ವಹಿಸಿದವು. ನೌಕೆಯು ನಭಕ್ಕೆ ಜಿಗಿದ ನಂತರದ 4.56 ನಿಮಿಷದಲ್ಲಿ ಮೂರನೇ ಹಂತವು ಚಾಲೂ ಆಗಬೇಕಿತ್ತು. ಆದರೆ ಮೂರನೇ ಹಂತದ ಕ್ರಯೋಜೆನಿಕ್ ಹಂತವು ಕಾರ್ಯನಿರ್ವಹಿಸುವಲ್ಲಿ ವಿಫಲವಾಯಿತು. ತಾಂತ್ರಿಕ ಸಮಸ್ಯೆಯಿಂದ ಕಾರ್ಯಾಚರಣೆ ವಿಫಲವಾಯಿತು’ ಎಂದು ಇಸ್ರೊ ಘೋಷಿಸಿತು.

2,268 ಕೆ.ಜಿ. ತೂಕದ ಉಪಗ್ರಹವನ್ನು ಹೊತ್ತ ಜಿಎಸ್‌ಎಲ್‌ವಿ-ಎಫ್‌10 ಅನ್ನು ಈ ಮೊದಲು 2020ರ ಮಾರ್ಚ್ 5ರಂದು ಉಡ್ಡಯನ ಮಾಡಬೇಕಿತ್ತು. ತಾಂತ್ರಿಕ ತೊಂದರೆಯ ಕಾರಣ ಕಾರ್ಯಾಚರಣೆಯನ್ನು ಮುಂದೂಡಲಾಗಿತ್ತು. ನಂತರ 2021ರ ಮಾರ್ಚ್ 28ರಂದು ಉಡ್ಡಯನವನ್ನು ನಿಗದಿ ಮಾಡಲಾಗಿತ್ತು. ಮತ್ತೆ ತಾಂತ್ರಿಕ ಕಾರಣದಿಂದ ಕಾರ್ಯಾಚರಣೆಯನ್ನು ಮುಂದೂಡಲಾಗಿತ್ತು. ಮೂರನೇ ಬಾರಿ ನಿಗದಿ ಮಾಡಿದ ಉಡ್ಡಯನವೂ ಉಪಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿದೆ.


ಕ್ರಯೋಜೆನಿಕ್ ಹಂತವು ವಿಫಲವಾದ ನಂತರ ಜಿಎಸ್‌ಎಲ್‌ವಿಎಫ್‌10 ನೌಕೆಯು ನಿಗದಿತ ಹಾದಿಯನ್ನು ಬಿಟ್ಟು ಅಡ್ಡಾದಿಡ್ಡಿಯಾಗಿ ಚಲಿಸಿತು–ಪಿಟಿಐ ಚಿತ್ರ

‘ಆಘಾತವಾಗಿದೆ, ಧೃತಿಗೆಡಬೇಕಿಲ್ಲ’

‘ಜಿಎಸ್‌ಎಲ್‌ವಿ-ಎಫ್‌10 ಕಾರ್ಯಾಚರಣೆಯ ವೈಫಲ್ಯದಿಂದ ಆಘಾತವಾಗಿದೆ. ಆದರೆ ಇದರಿಂದ ಧೃತಿಗೆಡಬೇಕಿಲ್ಲ. ಇಸ್ರೊ ಮರಳಿ ಯಶಸ್ಸು ಗಳಿಸಲಿದೆ’ ಎಂದು ಇಸ್ರೊ ಮಾಜಿ ಅಧ್ಯಕ್ಷ ಜಿ.ಮಾಧವನ್ ನಾಯರ್ ಹೇಳಿದ್ದಾರೆ.

‘ಕ್ರಯೋಜೆನಿಕ್ ತಂತ್ರಜ್ಞಾನವು ಅತ್ಯಂತ ಸಂಕೀರ್ಣವಾದುದು. ಭಾರತವು ಈ ತಂತ್ರಜ್ಞಾನದಲ್ಲಿ ಪರಿಣತಿ ಸಾಧಿಸಿದೆ. ಕ್ರಯೋಜೆನಿಕ್ ತಂತ್ರಜ್ಞಾನದಲ್ಲಿ ಐರೋಪ್ಯ ಒಕ್ಕೂಟದ ಬಾಹ್ಯಾಕಾಶ ಸಂಸ್ಥೆಗಿಂತ ಹೆಚ್ಚು ಪರಿಣತಿ ಸಾಧಿಸಿದೆ. ಕ್ರಯೋಜೆನಿಕ್ ತಂತ್ರಜ್ಞಾನದಲ್ಲಿ ರಷ್ಯಾದ ವೈಫಲ್ಯದ ಪ್ರಮಾಣ ಶೇ 20ಕ್ಕಿಂತಲೂ ಹೆಚ್ಚು. ಭಾರತದ ವೈಫಲ್ಯದ ಪ್ರಮಾಣ ಅದಕ್ಕಿಂತಲೂ ಕಡಿಮೆ ಇದೆ’ ಎಂದು ಮಾಧವನ್ ಹೇಳಿದ್ದಾರೆ.

ವೈಫಲ್ಯದ ಹಿಂದೆ ವೈಫಲ್ಯ

ಚಂದ್ರನ ದಕ್ಷಿಣ ತುದಿಯಲ್ಲಿ ಲ್ಯಾಂಡರ್ ನೌಕೆಯನ್ನು ಇಳಿಸುವ ಚಂದ್ರಯಾನ-2 ಯೋಜನೆಯು ವಿಫಲವಾಗಿತ್ತು. 2019ರ ಜುಲೈ 22ರಂದು ಚಂದ್ರಯಾನ-2 ಯೋಜನೆಯ ಭಾಗವಾಗಿ ಚಂದ್ರನ ಪರಿಭ್ರಮಣ ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಗಿತ್ತು. ಆದರೆ ಲ್ಯಾಂಡರ್ ಚಂದ್ರನ ನೆಲವನ್ನು ಮುಟ್ಟುವ ಬದಲು, ಅಪ್ಪಳಿಸಿತ್ತು.

ಲ್ಯಾಂಡರ್ ಇಳಿಸುವ ಕಾರ್ಯಾಚರಣೆ ಯಶಸ್ವಿಯಾಗಿದ್ದರೆ, ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ನೌಕೆ ಇಳಿಸಿದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗುತ್ತಿತ್ತು.

ಚಂದ್ರಯಾನ-2 ಭಾಗಶಃ ವಿಫಲವಾದ ನಂತರ, ಈಗ ಭೂ ಸರ್ವೇಕ್ಷಣೆ ಉಪಗ್ರಹವನ್ನು ಕಕ್ಷೆಗೆ ಸೇರಿಸುವ ಕಾರ್ಯಾಚರಣೆಯೂ ವಿಫಲವಾಗಿದೆ.

ಏಟು-ಎದಿರೇಟು

ಈ ವೈಫಲ್ಯದಿಂದ ಧೃತಿಗೆಡದೇ ಇರುವ ಶಕ್ತಿ ಇಸ್ರೊಗೆ ಇದೆ. ಇಸ್ರೊ ಮತ್ತೆ ಯಶಸ್ಸು ಗಳಿಸಲಿದೆ. ಆದರೆ, ವಿಕ್ರಂ ಸಾರಾಬಾಯ್ ಮತ್ತು ಸತೀಶ ಧವನ್ ಅವರು ರೂಪಿಸಿದ್ದ ವೈಜ್ಞಾನಿಕ ಮತ್ತು ತಾಂತ್ರಿಕ ಸಂಸ್ಥೆಯಂತೆ ಕೆಲಸ ಮಾಡಲು ಇಸ್ರೊಗೆ ಅವಕಾಶ ಮಾಡಿಕೊಡಬೇಕು. ಆದರೆ ಈಗ ಆ ಸಂಸ್ಥೆಯಲ್ಲಿ ರಾಜಕೀಯ ಮೇಲಾಟವೇ ಹೆಚ್ಚಾಗುತ್ತಿದೆ

ಜೈರಾಂ ರಮೇಶ್, ಕಾಂಗ್ರೆಸ್ ನಾಯಕ ಮತ್ತು ವಿಜ್ಞಾನ-ತಂತ್ರಜ್ಞಾನ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ

ಜೈರಾಂಜೀ, ಬಾಹ್ಯಾಕಾಶ ಸಂಶೋಧನೆಯ ಬಹುತೇಕ ಎಲ್ಲಾ ವೈಫಲ್ಯಗಳು, ವಿಕ್ರಂ ಸಾರಾಬಾಯ್ ಅವರ ಅನುಮಾನಾಸ್ಪದ ಸಾವು ಕಾಂಗ್ರೆಸ್ ಆಳ್ವಿಕೆಯಲ್ಲಿಯೇ ಸಂಭವಿಸಿತ್ತು ಎಂಬುದನ್ನು ಮರೆಯಬೇಡಿ. ಇವನ್ನೆಲ್ಲಾ ಪರಿಗಣಿಸಿ ಹೇಳುವುದಾದರೆ, ಕಾಂಗ್ರೆಸ್ ರಾಜಕಾರಣ ಮಾಡದೇ ಇದ್ದರೆ ವಿಕ್ರಂ ಸಾರಾಬಾಯ್ ಅವರು ಮತ್ತಷ್ಟು ಕೊಡುಗೆ ನೀಡುತ್ತಿದ್ದರು

ಜಿತೇಂದ್ರ ಸಿಂಗ್, ಕೇಂದ್ರ ಸಚಿವ

ರಾಹುಲ್ ಶತಕ ವೈಭವ

ಲಂಡನ್ (ಪಿಟಿಐ): ಲಾರ್ಡ್ಸ್ ಮೈದಾನದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಗುರುವಾರ ಸುಂದರ ಶತಕ ದಾಖಲಿಸಿದರು. ಎರಡನೇ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಶತಕ ದಾಖಲಿಸಿದ ಭಾರತದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ರಾಹುಲ್ ಪಾತ್ರರಾದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ರೋಹಿತ್ ಅವರೊಂದಿಗೆ 126 ರನ್ ಸೇರಿಸಿದರು. ಅದರಿಂದಾಗಿ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 276 ರನ್ ಗಳಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೋಹಿತ್ ಶರ್ಮಾ (83; 145ಎ) ಔಟಾದ ನಂತರ ರಾಹುಲ್ ಇನಿಂಗ್ಸ್ ಬೆಳೆಸುವ ಹೊಣೆಹೊತ್ತುಕೊಂಡರು. ರೋಹಿತ್ ಔಟಾದಾಗ ರಾಹುಲ್ 118 ಎಸೆತಗಳನ್ನು ಎದುರಿಸಿ 33 ರನ್ ಗಳಿಸಿದ್ದರು.

ನಂತರ ತಮ್ಮ ಬ್ಯಾಟಿಂಗ್ ವೇಗವನ್ನು ತುಸು ಹೆಚ್ಚು ಮಾಡಿದರು. ಟೆಸ್ಟ್ ಪರಿಣತ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ (9; 23ಎ) ಲಯ ಕಂಡುಕೊಳ್ಳುವಲ್ಲಿ ಮತ್ತೊಮ್ಮೆ ವಿಫಲರಾದರು.

ನಾಯಕ ವಿರಾಟ್ ಕೊಹ್ಲಿಯೊಂದಿಗೂ ರಾಹುಲ್ ಅವರು ಸುಂದರ ಜೊತೆಯಾಟವಾಡಿದರು. ಆಕರ್ಷಕ ಡ್ರೈವ್‌ಗಳು ಮತ್ತು ನೇರ ಹೊಡೆತಗಳ ಮೂಲಕ ರಾಹುಲ್ ಗಮನ ಸೆಳೆದರು. 78ನೇ ಓವರ್‌ನಲ್ಲಿ ಮಾರ್ಕ್‌ವುಡ್ ಎಸೆತವನ್ನು ಬೌಂಡರಿಗೆ ಕಳಿಸಿದ ರಾಹುಲ್ ಶತಕ ಪೂರೈಸಿದರು. 213 ಎಸೆತಗಳಲ್ಲಿ ಶತಕ ಒಡಮೂಡಿತು. ವಿರಾಟ್ ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 117 ರನ್ ಸೇರಿಸಿದರು. 2018ರಲ್ಲಿ ಇಂಗ್ಲೆಂಡ್‌ನ ದ ಓವೆಲ್‌ನಲ್ಲಿ ಶತಕ ಬಾರಿಸಿದ ನಂತರ ರಾಹುಲ್ 100ರ ಗಡಿ ದಾಟಿದ್ದು ಇದೇ ಮೊದಲು.

ಸಂಕ್ಷಿಪ್ತ ಸ್ಕೋರು: ಭಾರತ (ಮೊದಲ ಇನಿಂಗ್ಸ್): 90 ಓವರ್‌ಗಳಲ್ಲಿ 3ಕ್ಕೆ 276 (ರೋಹಿತ್ ಶರ್ಮಾ 83, ಕೆ.ಎಲ್. ರಾಹುಲ್ ಬ್ಯಾಟಿಂಗ್ 127, ವಿರಾಟ್ ಕೊಹ್ಲಿ 42, ಅಜಿಂಕ್ಯ ರಹಾನೆ ಬ್ಯಾಟಿಂಗ್ 1; ಜೇಮ್ಸ್ ಆ್ಯಂಡರ್ಸನ್ 52ಕ್ಕೆ2, ಒಲಿ ರಾಬಿನ್ಸನ್ 47ಕ್ಕೆ1).



ಕೆ.ಎಲ್. ರಾಹುಲ್ ಶತಕ ಸಂಭ್ರಮ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಶತಕ ಬಾರಿಸಿದ ಮೊದಲ ಭಾರತೀಯ
- ಲಾರ್ಡ್ಸ್‌ನಲ್ಲಿ ಟೆಸ್ಟ್ ಶತಕ ಗಳಿಸಿದ 10ನೇ ಭಾರತೀಯ ಬ್ಯಾಟ್ಸ್‌ಮನ್

ಬಳ್ಳಾರಿ ಪ್ರವೇಶ ನಿರ್ಬಂಧ ತೆರವಿಗೆ ಆಕ್ಷೇಪ

ನವದೆಹಲಿ: ಬಳ್ಳಾರಿಗೆ ಪ್ರವೇಶ ನಿರ್ಬಂಧದ ಷರತ್ತನ್ನು ಸಡಿಲಗೊಳಿಸುವಂತೆ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮನವಿಗೆ ಸಿಬಿಐ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಗುರುವಾರ ಜನಾರ್ದನ ರೆಡ್ಡಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿನೀತ್ ಶರಣ್ ಹಾಗೂ ದಿನೇಶ್ ಮಾಹೇಶ್ವರಿ ಅವರಿದ್ದ ಪೀಠದೆದುರು ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಧವಿ ದಿವಾನ್, ಆರೋಪಿಗೆ ಬಳ್ಳಾರಿ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ ಎಂಬ ವಿಚಾರವೇ ಸಾಕ್ಷಿಗಳ ಮನಸ್ಸಿನಲ್ಲಿ ಭಯವನ್ನು ಉಂಟುಮಾಡುತ್ತದೆ ಎಂದರು.

ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಅಂದಾಜು 300 ಸಾಕ್ಷಿಗಳ ಪೈಕಿ 47 ಜನ ಬಳ್ಳಾರಿ ಜಿಲ್ಲೆಗೇ ಸೇರಿದ್ದಾರೆ. ಒಂದೊಮ್ಮೆ ಆರೋಪಿಗೆ ಬಳ್ಳಾರಿ ಪ್ರವೇಶದ ಅವಕಾಶ ನೀಡಿದಲ್ಲಿ ಆ ಸಾಕ್ಷಿದಾರರಲ್ಲಿ ಭಯ ಹುಟ್ಟಿಸಿದಂತಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಕಳೆದ 11 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣ • 1,857 ಮಂದಿಗೆ ಸೋಂಕು ದೃಢ

ಕೋವಿಡ್: ಸೋಂಕಿತರ ಸಂಖ್ಯೆ ಏರುಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, 1,857 ಮಂದಿ ಸೋಂಕಿತರಾಗಿರುವುದು ಗುರುವಾರ ದೃಢಪಟ್ಟಿದೆ.

ಕಳೆದ 11 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ಆ.1ರಂದು 1,875 ಪ್ರಕರಣಗಳು ವರದಿಯಾಗಿದ್ದವು. ಒಂದು ದಿನದಲ್ಲಿ 1.61 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.15ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ರಾಜ್ಯದ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಕೊಪ್ಪಳ ಹಾಗೂ ಯಾದಗಿರಿಯಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದ್ದು, ದಕ್ಷಿಣ ಕನ್ನಡದಲ್ಲಿ 475, ಮೈಸೂರಿನಲ್ಲಿ 116 ಹಾಗೂ ಕೊಡಗಿನಲ್ಲಿ 93 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 321, ಉಡುಪಿಯಲ್ಲಿ 191 ಹಾಸನದಲ್ಲಿ 123 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.24 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 30 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 15 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 5, ಕೋಲಾರದಲ್ಲಿ 3, ತುಮಕೂರು, ಶಿವಮೊಗ್ಗ, ಹಾಸನ, ಚಿತ್ರದುರ್ಗ ಹಾಗೂ ಬೆಳಗಾವಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಡುಪಿ ಸೇರಿದಂತೆ ಏಳು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.61 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,911 ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 1,950 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.65 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,728ಕ್ಕೆ ಇಳಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ-ಅಂಶ

29,24,732 ▲	ಒಟ್ಟು ಸೋಂಕಿತರು (29,22,875 ನಿನ್ನೆಯ ವಿವರ)
22,728 ▼	ಸಕ್ರಿಯ ಪ್ರಕರಣಗಳು
28,65,067 ▲	ಗುಣಮುಖರಾದವರು
36,911 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,857	▲
ಗುಣಮುಖ	1,950	▲
ಸಾವು	30	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಝಿಕಾ: ಗಡಿ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆಗೆ ಸೂಚನೆ

ಬೆಂಗಳೂರು: ಕೇರಳ, ಮಹಾರಾಷ್ಟ್ರ ರಾಜ್ಯಗಳು ಹಾಗೂ ಬೆಂಗಳೂರಿಗೆ ಗಡಿ ಹಂಚಿಕೊಂಡಿರುವ ಜಿಲ್ಲೆಗಳಲ್ಲಿ ಝಿಕಾ ವೈರಾಣುವಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೀವ್ರಗೊಳಿಸಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ ಅವರು ಸಂಬಂಧಪಟ್ಟ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಅವರು, ‘ಈ ವೈರಾಣು ಈಡಿಸ್ ಸೊಳ್ಳೆಗಳ ಮೂಲಕ ಹರಡುತ್ತದೆ. ಮಳೆಗಾಲದಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಮುನ್ನೆಚ್ಚರಿಕೆ ವಹಿಸಬೇಕಿದೆ. ಇದೇ ಸೊಳ್ಳೆಯು ಡೆಂಗಿ ಹಾಗೂ ಚಿಕೂನ್‌ಗುನ್ಯಾವನ್ನೂ ಹರಡುತ್ತದೆ. ಕೇರಳದಲ್ಲಿ ಈಗಾಗಲೇ ಹಲವಾರು ಝಿಕಾ ಪ್ರಕರಣಗಳು ವರದಿಯಾಗಿವೆ. ಮಹಾರಾಷ್ಟ್ರದಲ್ಲಿ ಒಂದು ಪ್ರಕರಣ ಪತ್ತೆಯಾಗಿದೆ. ಹಾಗಾಗಿ, ರಾಜ್ಯದಲ್ಲಿ ಕಟ್ಟೆಚ್ಚರ ವಹಿಸಬೇಕು’ ಎಂದು ಹೇಳಿದ್ದಾರೆ.

‘ಸೋಂಕಿಗೆ ಒಳಗಾದವರಿಗೆ ಜ್ವರ, ದದ್ದು, ಕೀಲು ನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸೋಂಕು ಶಂಕಿತ ವ್ಯಕ್ತಿಯ ಮಾದರಿ ಸಂಗ್ರಹಿಸಿ, ಬೆಂಗಳೂರಿನ ಎನ್‌ಐವಿ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಅವರ ಪ್ರಯಾಣದ ಇತಿಹಾಸ ಹಾಗೂ ಸಂಪರ್ಕಿತರ ಮಾಹಿತಿ ಸಂಗ್ರಹಿಸಬೇಕು. ಈಡಿಸ್ ಸೊಳ್ಳೆಯ ಸಂತಾನೋತ್ಪತ್ತಿ ತಡೆಗಟ್ಟಲು ಘನತ್ಯಾಜ್ಯವನ್ನು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಬೇಕು. ಈ ಜ್ವರದ ಬಗ್ಗೆಆಶಾ ಕಾರ್ಯಕರ್ತೆಯರು ಜನರಲ್ಲಿ ಜಾಗೃತಿ ಮೂಡಿಸಬೇಕು’ ಎಂದು ತಿಳಿಸಿದ್ದಾರೆ.

3ನೇ ಅಲೆ ತಡೆಗೆ ಸನ್ನದ್ಧ: ಸಿಎಂ

ಮಂಗಳೂರು: ಕೋವಿಡ್-19 ಮೂರನೇ ಅಲೆಯಿಂದ ರಾಜ್ಯದಲ್ಲಿ 240 ಮಕ್ಕಳು ಬಾಧಿತರಾಗಿದ್ದು, ಇದರ ತಡೆಗೆ ಆರೋಗ್ಯ ಹಾಗೂ ಇತರ ಇಲಾಖೆಗಳು ಕಾರ್ಯಪ್ರವೃತ್ತವಾಗಿವೆ. ಮೂರನೇ ಅಲೆ ಎದುರಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಬೇಕು, ಸಿದ್ಧತೆಯು ದೇಶಕ್ಕೇ ಮಾದರಿಯಾಗುವಂತಿರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಜತೆ ಮಾತನಾಡಿದ ಅವರು, ಮಕ್ಕಳ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಈಗಾಗಲೇ ಉಡುಪಿ ಜಿಲ್ಲೆಯಲ್ಲಿ ‘ವಾತ್ಸಲ್ಯ’ ಹೆಸರಿನ ಸಮೀಕ್ಷೆ ಮೂಲಕ ದಾಖಲಿಸುವ ಕಾರ್ಯ ಆಗಿದೆ. ಈ ಸಮೀಕ್ಷೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗುವುದು. ಆರೋಗ್ಯ ಶಿಬಿರಗಳ ಮೂಲಕ ಮಕ್ಕಳ ಇತರ ಕಾಯಿಲೆಗಳನ್ನು ಗುರುತಿಸುವುದು ಮತ್ತು ಅಪೌಷ್ಟಿಕತೆಯ ಸಮೀಕ್ಷೆ ನಡೆಯಲಿದೆ ಎಂದರು.

ಶೋಷಿತರಿಗೆ ಸಂಪುಟದಲ್ಲಿ ಅವಕಾಶ: ದೇವೇಗೌಡ ಸ್ವಾಗತ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಸಂಪುಟ ಪುನರ್‌ರಚನೆ ವೇಳೆ ಮಹಿಳೆಯರು ಮತ್ತು ಶೋಷಿತ ಸಮುದಾಯದವರಿಗೆ ಅವಕಾಶ ನೀಡಿರುವ ಕ್ರಮ ಸ್ವಾಗತಾರ್ಹ ಎಂದು ಮಾಜಿ ಪ್ರಧಾನಿ, ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಕೇಂದ್ರ ಸಂಪುಟದಲ್ಲಿ 12 ಜನ ಮಹಿಳೆಯರಿಗೆ, 8 ಜನ ಪರಿಶಿಷ್ಟ ಜಾತಿಯವರಿಗೆ, 12 ಜನ ಪರಿಶಿಷ್ಟ ಪಂಗಡದವರಿಗೆ ಮೋದಿ ಅವರು ಅವಕಾಶ ನೀಡಿರುವುದು ಸಾಮಾಜಿಕ ನ್ಯಾಯ ಇರಬಹುದು ಅಥವಾ ಚುನಾವಣೆ ತಂತ್ರವೂ ಇರಬಹುದು. ಆದರೆ ಆ ನಿರ್ಧಾರ ಸ್ವಾಗತಾರ್ಹ. ನಾನು ಪ್ರಧಾನಿಯಾಗಿದ್ದಾಗಲೂ ಇದೇ ರೀತಿಯ ಅವಕಾಶ ನೀಡಿದ್ದೆ’ ಎಂದರು.

ಆಯಾ ರಾಜ್ಯಗಳು ಪ್ರತ್ಯೇಕವಾಗಿ ತಮ್ಮದೇ ಆದ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಅವಕಾಶ ನೀಡಿರುವ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನೂ ಅವರು ಸ್ವಾಗತಿಸಿದರು.

ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಯಾವುದೇ ವಿಷಯಗಳ ಚರ್ಚೆಗೆ ವಿರೋಧ ಪಕ್ಷಗಳು ಹಾಗೂ ಆಡಳಿತ ಪಕ್ಷ ಅವಕಾಶ ನೀಡದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಎಂದು ಅವರು ಅಭಿಪ್ರಾಯಪಟ್ಟರು.

ಕಳೆದ 60 ವರ್ಷಗಳ ಅವಧಿಯಲ್ಲಿ ಸಂಸತ್‌ನ ಕಲಾಪಕ್ಕೆ ಸ್ವಲ್ಪವೂ ಅವಕಾಶ ದೊರೆಯದೇ ಇರುವುದು ಇದೇ ಮೊದಲು. ಎಲ್ಲ ಪಕ್ಷಗಳ ಮುಖಂಡರೂ ಒಂದೆಡೆ ಸೇರಿ ಚರ್ಚಿಸುವ ಮೂಲಕ ಮುಂದಿನ ದಿನಗಳಲ್ಲಿ ಸುಗಮ ಕಲಾಪಕ್ಕೆ ಅವಕಾಶ ಕಲ್ಪಿಸಬೇಕು ಎಂದು ಅವರು ಸಲಹೆ ನೀಡಿದರು.

ಅಧಿವೇಶನ ಮುಗಿದರೂ ಮುಗಿಯದ ಜಟಾಪಟಿ

ಒಂದನೇ ಪುಟದಿಂದ

ಸರ್ಕಾರದ ನಡವಳಿಕೆಯು ಸರ್ವಾಧಿಕಾರಿ ಧೋರಣೆ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದ್ದು, ಹೊರಗಿನಿಂದ ಬಂದ ವ್ಯಕ್ತಿಗಳು ಮಹಿಳಾ ಸದಸ್ಯರ ಜತೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಯಿತು.

‘ಸರ್ಕಾರವು ಪ್ರತಿಪಕ್ಷಗಳ ಚರ್ಚೆಯ ಬೇಡಿಕೆಯನ್ನು ತಿರಸ್ಕರಿಸಿದೆ. ಸಂಸತ್ತಿನ ಹೊಣೆಗಾರಿಕೆಯಿಂದ ವಿಮುಖವಾಗುತ್ತಿದೆ. ಪೆಗಾಸಸ್ ಕುತಂತ್ರಾಂಶ ಬಳಸಿ ನಡೆಸಿದೆ ಎನ್ನಲಾದ ಬೇಹುಗಾರಿಕೆ ಬಗೆಗಿನ ಚರ್ಚೆಯಿಂದ ದೂರ ಸರಿಯುತ್ತಿದೆ. ಇದು ಸಂಸತ್ತಿನ ಮುಂಗಾರು ಅಧಿವೇಶನವನ್ನು ಉದ್ದೇಶಪೂರ್ವಕವಾಗಿ ಹಳಿ ತಪ್ಪಿಸಿತು. ಇದು ಸಂಸದೀಯ ಪ್ರಜಾಪ್ರಭುತ್ವಕ್ಕೆ ಸರ್ಕಾರ ನೀಡುತ್ತಿರುವ ಗೌರವ’ ಎಂದು ಜಂಟಿ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಅಧೀರ್ ರಂಜನ್ ಚೌಧರಿ, ಆನಂದ್ ಶರ್ಮಾ, ಶರದ್ ಪವಾರ್, ಟಿ.ಆರ್. ಬಾಲು, ಟಿ. ಶಿವ, ರಾಮಗೋಪಾಲ್ ಯಾದವ್, ಸಂಜಯ್ ರಾವುತ್, ಮನೋಜ್, ಎಳಮರಂ ಕರೀಂ, ಇ.ಟಿ. ಮೊಹ್ಮದ್, ಬಶೀರ್, ಬಿನೋಯ್ ವಿಶ್ವಂ, ಎನ್.ಕೆ. ಪ್ರೇಮಚಂದ್ರನ್, ಥಾಮಸ್ ಚಾರಿಕಾಡನ್ ಮೊದಲಾದವರು ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

‘ಉಭಯ ಸದನಗಳಲ್ಲಿ ಕಲಾಪ ನಡೆಯದಿರುವುದಕ್ಕೆ ಸರ್ಕಾರವೂ ಜವಾಬ್ದಾರ. ಪೆಗಾಸಸ್ ಚರ್ಚೆ ಕೈಗೆತ್ತಿಕೊಳ್ಳಲು ಇಟ್ಟಿದ್ದ ಪ್ರತಿಪಕ್ಷಗಳ ಬೇಡಿಕೆಯನ್ನು ಒಪ್ಪಿಕೊಳ್ಳಲು ಸರ್ಕಾರ ನಿರಾಕರಿಸಿತು. ಸರ್ಕಾರವು ತನ್ನ ಬಹುಮತವನ್ನು ವಿವೇಚನಾರಹಿತವಾಗಿ ಬಳಸಿಕೊಳ್ಳುತ್ತಿದ್ದು, ಸ್ಥಾಪಿತ ಕಾರ್ಯವಿಧಾನಗಳು ಹಾಗೂ ಸಂಪ್ರದಾಯಗಳನ್ನು ಉಲ್ಲಂಘಿಸುತ್ತಿದೆ’ ಎಂದು ಆರೋಪಿಸಲಾಗಿದೆ.

ತನ್ನದೇ ನಡವಳಿಕೆ ಮತ್ತು ಕಾರ್ಯಗಳಿಂದ ಗಮನವನ್ನು ಬೇರೆಡೆಗೆ ಸೆಳೆಯಲು, ಪ್ರತಿಪಕ್ಷವನ್ನು ದೂಷಿಸುವ ದುರುದ್ದೇಶಪೂರಿತ ಮತ್ತು ದಾರಿತಪ್ಪಿಸುವ ಅಭಿಯಾನವನ್ನು ಸರ್ಕಾರ ಆರಂಭಿಸಿದೆ ಎಂದು ಪ್ರತಿಪಕ್ಷಗಳು ಆರೋಪಿಸಿದವು.

ಕ್ಷಮೆಗೆ ಆಡಳಿತ ಪಕ್ಷ ಒತ್ತಾಯ

ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಪೀಯೂಷ್ ಗೋಯಲ್ ಮತ್ತು ಸಚಿವರ ತಂಡವು, ಪ್ರತಿಪಕ್ಷಗಳ ಮುಖಂಡರು ಮಾರ್ಷಲ್‌ಗಳ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿತು. ಪ್ರತಿಪಕ್ಷಗಳು ತಾವು ನಡೆದಿದ್ದೇ ಹಾದಿ ಎಂದುಕೊಂಡಿರುವುದು ಖಂಡನೀಯ ಎಂದು ಪ್ರತಿಪಾದಿಸಿತು.

‘ರಾಜ್ಯಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಅವರ ಮೇಜು ಇರುವುದು ಮೇಲೆ ಹತ್ತಿ ನೃತ್ಯ ಮಾಡಲು ಅಥವಾ ಪ್ರತಿಭಟನೆ ಮಾಡಲು ಅಲ್ಲ’ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಅಧಿವೇಶನದಲ್ಲಿ ಅರಾಜಕತೆ ಸೃಷ್ಟಿಸುವುದೇ ಪ್ರತಿಪಕ್ಷಗಳ ಏಕೈಕ ಕಾರ್ಯಸೂಚಿಯಾಗಿತ್ತು ಎಂದು ಅವರು ದೂರಿದ್ದಾರೆ. ತಮ್ಮ ವರ್ತನೆಗೆ ಪ್ರತಿಪಕ್ಷಗಳು ದೇಶದ ಕ್ಷಮೆ ಕೇಳಬೇಕು ಎಂದು ಅವರು ಒತ್ತಾಯಿಸಿದರು.

ನಿಯಮ ಉಲ್ಲಂಘಿಸಿದ ವಿರೋಧ ಪಕ್ಷದ ಸಂಸದರ ವಿರುದ್ಧ ರಾಜ್ಯಸಭಾ ಸಭಾಪತಿಗಳು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತೇವೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

ನಾಯ್ಡುಗೆ ಎರಡೂ ಕಡೆಯಿಂದ ದೂರು: ಪ್ರಲ್ಹಾದ ಜೋಶಿ, ಪೀಯೂಷ್ ಗೋಯಲ್, ಮುಕ್ತಾರ್ ಅಬ್ಬಾಸ್ ನಖ್ವಿ ಸೇರಿದಂತೆ ಕೇಂದ್ರ ಸಚಿವರ ತಂಡವು ಸಭಾಪತಿ ವೆಂಕಯ್ಯ ನಾಯ್ಡು ಅವರನ್ನು ಭೇಟಿ ಮಾಡಿತು. ಮಾರ್ಷಲ್‌ಗಳ ಮೇಲೆ ಹಲ್ಲೆ ಮಾಡಿದ ವಿರೋಧ ಪಕ್ಷಗಳ ಸಂಸದರ ನಡವಳಿಕೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿತು. ಪ್ರತಿಪಕ್ಷಗಳ ಸದಸ್ಯರು ನಾಯ್ಡು ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಆಡಳಿತ ಪಕ್ಷದ ವಿರುದ್ಧ ಪ್ರತಿದೂರು ಸಲ್ಲಿಸಿದರು.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ರಾಜ್ಯಸಭೆ ಉಪಸಭಾಪತಿ ವೆಂಕಯ್ಯ ನಾಯ್ಡು ಅವರನ್ನು ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಸಂಸದರ ವರ್ತನೆ, ಕೋಲಾಹಲ ಕುರಿತಂತೆ ಚರ್ಚಿಸಿದರು. ಕೂಲಂಕಷ ವರದಿ ಪಡೆದ ಬಳಿಕ ಮುಂದಿನ ಕ್ರಮಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಮಂಗಳವಾರ ಕಲಾಪದಲ್ಲಿ ಉಂಟಾದ ಭಾರಿ ಕೋಲಾಹಲದಿಂದ ಬೇಸರಗೊಂಡ ನಾಯ್ಡು ಅವರು, ‘ಪ್ರಜಾಪ್ರಭುತ್ವದ ದೇಗುಲದಲ್ಲಿ ನಡೆದ ಅಪಚಾರ’ ಎಂದು ಹೇಳಿದ್ದರು.

ಭೂಕುಸಿತ: ಮೃತರ ಸಂಖ್ಯೆ 14ಕ್ಕೆ ಏರಿಕೆ

ಶಿಮ್ಲಾ: ‘ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಗುರುವಾರ ಮತ್ತೆ ನಾಲ್ಕು ಶವಗಳು ಪತ್ತೆಯಾಗಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ’ ಎಂದು ರಾಜ್ಯ ವಿಪತ್ತು ನಿರ್ವಹಣಾ ಘಟಕದ ನಿರ್ದೇಶಕ ಸುದೇಶ್ ಕುಮಾರ್ ಮೊಕ್ತಾ ಅವರು ಮಾಹಿತಿ ನೀಡಿದರು..

‘ಮಣ್ಣಿನಡಿಯಲ್ಲಿ ಸಿಲುಕಿದ್ದ ಹಿಮಾಚಲ ರಸ್ತೆ ಸಾರಿಗೆ ನಿಗಮದ(ಎಚ್‌ಆರ್‌ಟಿಸಿ) ಬಸ್‌ನಲ್ಲಿ 3 ಶವಗಳು ಸಿಕ್ಕಿವೆ.

ಕಾಬೂಲ್ ವಶಪಡಿಸಿಕೊಳ್ಳಲು ಉಗ್ರರ ಯತ್ನ

ಘಜ್ನಿ ಪ್ರಾಂತ್ಯ ತಾಲಿಬಾನ್ ವಶ

ಕಾಬೂಲ್ (ಎಪಿ): ಅಫ್ಗಾನಿಸ್ತಾನ ನೆಲದಿಂದ ಸೇನೆಗಳನ್ನು ಹಿಂಪಡೆಯಲು ಅಮೆರಿಕ ಮತ್ತು ನ್ಯಾಟೊ ಸಿದ್ಧತೆ ನಡೆಸಿರುವಂತೆಯೇ ಇತ್ತ ಅತಿಕ್ರಮಣ ಮುಂದುವರಿಸಿರುವ ತಾಲಿಬಾನ್, ಘಜ್ನಿ ಪ್ರಾಂತ್ಯವನ್ನು ತನ್ನ ವಶಕ್ಕೆ ಪಡೆದಿದೆ.

ಕಾಬೂಲ್‌ನ ನೈರುತ್ಯದಲ್ಲಿ 130 ಕಿ.ಮೀ.ದೂರದಲ್ಲಿರುವ ಘಜ್ನಿ, ತಾಲಿಬಾನ್ ವಶಕ್ಕೆ ಪಡೆದಿರುವ 10ನೇ ಪ್ರಾಂತ್ಯ. ಘಜ್ನಿ ಹೊರವಲಯದಲ್ಲಿ ಗುಪ್ತದಳ, ಸೇನಾನೆಲೆಯ ಆಸುಪಾಸಿನಲ್ಲಿ ಸಂಘರ್ಷ ಮುಂದುವರಿದಿದೆ ಎಂದೂ ವರದಿ ತಿಳಿಸಿದೆ.

ಘಜ್ನಿ ಪ್ರಾಂತ್ಯದ ಇದೇ ಹೆಸರಿನ ರಾಜಧಾನಿಯಲ್ಲಿ ತಾಲಿಬಾನಿಗಳು ಇರುವ ಚಿತ್ರ, ವಿಡಿಯೊಗಳನ್ನು ತಾಲಿಬಾನ್ ಪ್ರಕಟಿಸಿದೆ. ಅಫ್ಗಾನಿಸ್ತಾನ ಭದ್ರತಾ ಪಡೆ ಮತ್ತು ಸರ್ಕಾರ ಈ ಕುರಿತು ಇನ್ನೂ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಅಧ್ಯಕ್ಷ ಅಶ್ರಫ್ ಘನಿ ಅವರು ದೇಶದ ಭದ್ರತಾ ಪಡೆ ಮತ್ತು ಸೇನೆ ಮತ್ತು ಅಮೆರಿಕದ ವಾಯುಪಡೆ ಬಲವನ್ನು ನಂಬಿದ್ದು, ಪ್ರತಿದಾಳಿ ನಡೆಸಲು ಯತ್ನ ಮುಂದುವರಿಸಿದ್ದಾರೆ. ಕಾಬೂಲ್‌ಗೆ ಸದ್ಯ ಅತಿಕ್ರಮಣದ ಭೀತಿ ಇಲ್ಲವಾದರೂ ಆ ನಿಟ್ಟಿನಲ್ಲಿ ತಾಲಿಬಾನ್ ವೇಗವಾಗಿ ಮುನ್ನಡೆದಿದೆ. ಅಫ್ಗಾನಿಸ್ತಾನ ಎಷ್ಟು ಕಾಲ ಇದಕ್ಕೆ ಪ್ರತಿರೋಧ ಒಡ್ಡಲಿದೆ ಎಂಬ ಪ್ರಶ್ನೆ ಉಳಿದಿದೆ.

ತಾಲಿಬಾನ್‌ನ ಅತಿಕ್ರಮಣ ದಾಳಿಯ ಹಿಂದೆಯೇ ಅನೇಕ ನಿವಾಸಿಗಳು ವಿವಿಧೆಡೆಯಿಂದ ಸ್ಥಳಾಂತರಗೊಂಡಿದ್ದಾರೆ. ಈ ಮಧ್ಯೆ, ರಾಜಧಾನಿ ರಕ್ಷಿಸುವ ಉದ್ದೇಶದಿಂದ ವಿವಿಧೆಡೆ ಇರುವ ಸೇನೆ, ಭದ್ರತಾ ಪಡೆಯನ್ನು ಕರೆಸಿಕೊಳ್ಳುವ ಸಂಭವವಿದೆ.

ಘಜ್ನಿ ನಗರ ಅತಿಕ್ರಮಣಗೊಳ್ಳುವ ಹಾದಿಯಲ್ಲಿದೆ ಎಂದು ಅಲ್ಲಿನ ಜನಪ್ರತಿನಿಧಿಗಳಾಧ ಮೊಹಮ್ಮದ್ ಅರಿಫ್ ರೆಹಮಾನಿ, ಅಮಾನುಲ್ಲಾ ಕಮ್ರಾನಿ ಹೇಳಿದ್ದಾರೆ. ‘ಘಜ್ನಿಯ ಮಸೀದಿಯೊಂದರ ಬಳಿ ತಮ್ಮ ರೈಫಲ್‌ಗಳನ್ನು ತೋರಿಸುತ್ತಾ ‘ದೇವರು ದೊಡ್ಡವನು’ ಎಂದು ತಾಲಿಬಾನಿಗಳು ಉದ್ಗರಿಸಿದ್ದಾರೆ. ಒಬ್ಬ ಉಗ್ರ ರಾಕೆಟ್ ಜೋಡಿಸಿದ್ದ ಉಡಾವಣಾ ವಾಹಕವನ್ನು ಹಿಡಿದಿದ್ದ’ ಎಂದು ವರದಿ ತಿಳಿಸಿದೆ.


ಅಫ್ಗಾನಿಸ್ತಾನದಲ್ಲಿ ಹೊಸದಾಗಿ ವಶಕ್ಕೆಪಡೆದ ನಂತರ ಘಜ್ನಿ ನಗರದಲ್ಲಿ ತಾಲಿಬಾನಿಗಳು ಬೀಡುಬಿಟ್ಟಿರುವುದು ಎಎಫ್‌ಪಿ ಚಿತ್ರ

ರಾಜಕೀಯ ಇಚ್ಛಾಶಕ್ತಿ ಅಗತ್ಯ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಅಫ್ಗಾನಿಸ್ತಾನದ ನಾಯಕತ್ವಕ್ಕೆ ರಾಜಕೀಯ ಇಚ್ಛಾಶಕ್ತಿ ಇದ್ದಲ್ಲಿ ತಾಲಿಬಾನ್ ಅತಿಕ್ರಮಣದ ವಿರುದ್ಧ ಪ್ರತಿರೋಧ ತೋರಬಹುದು ಎಂದು ಅಮೆರಿಕ ಪ್ರತಿಕ್ರಿಯಿಸಿದೆ.

ಅಫ್ಗಾನಿಸ್ತಾನದ ರಾಷ್ಟ್ರೀಯ ಭದ್ರತಾ ಪಡೆಗೆ ಅಮೆರಿಕ ಎರಡು ದಶಕ ತರಬೇತಿ ನೀಡಿದೆ. ಪ್ರತಿರೋಧ ತೋರಲು ಶಕ್ತವಾಗಿದ್ದು, ಅಗತ್ಯ ಬಲ, ಶಸ್ತ್ರಾಸ್ತ್ರಗಳಿವೆ. ಬೇಕಿರುವುದು ರಾಜಕೀಯ ಇಚ್ಛಾಶಕ್ತಿ ಎಂದು ಈ ಸಂಬಂಧ ಶ್ವೇತಭವನವು ಪ್ರತಿಕ್ರಿಯಿಸಿದೆ.

ಭಿನ್ನ ದೃಷ್ಟಿಕೋನ:ಇಮ್ರಾನ್ ಟೀಕೆ

ಇಸ್ಲಾಮಾಬಾದ್ (ಪಿಟಿಐ): ‘ಅಫ್ಗಾನಿಸ್ತಾನದಲ್ಲಿ ತನ್ನಿಂದ ಮೂಡಿರುವ ಗೊಂದಲವನ್ನು ಪಾಕಿಸ್ತಾನ ಬಗೆಹರಿಸಬಹುದು ಎಂದು ಅಮೆರಿಕ ಭಾವಿಸಿದೆ ಎಂದು ಪಾಕಿಸ್ತಾನದ ಪ್ರಧಾನಮಂತ್ರಿ ಇಮ್ರಾನ್ ಖಾನ್ ಹೇಳಿದ್ದಾರೆ. ಆದರೆ, ಕಾರ್ಯತಂತ್ರ ಪಾಲುದಾರಿಕೆ ವಿಷಯ ಬಂದಾಗ ಮಾತ್ರ ಅಮೆರಿಕ ದೃಷ್ಟಿ ಭಾರತದತ್ತ ಇರುತ್ತದೆ ಎಂದು ಟೀಕಿಸಿದ್ದಾರೆ.

ಅಮೆರಿಕ ಎಂದಿಗೂ ಪಾಕಿಸ್ತಾನವನ್ನು ವಿಭಿನ್ನ ದೃಷ್ಟಿಕೋನದಿಂದಲೇ ಗಮನಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ವಿಶ್ವ ಅಥ್ಲೆಟಿಕ್ಸ್ ರ‍್ಯಾಂಕಿಂಗ್: ಅಗ್ರಸ್ಥಾನ ಗಳಿಸಿದ ಜರ್ಮನಿಯ ಜೋನಾಸ್ ವೆಟರ್

ನೀರಜ್ ಚೋಪ್ರಾಗೆ 2ನೇ ರ‍್ಯಾಂಕ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸಿದ ನೀರಜ್ ಚೋಪ್ರಾ ವಿಶ್ವ ರ‍್ಯಾಂಕಿಂಗ್‌ನಲ್ಲಿ 14 ಸ್ಥಾನಗಳ ಬಡ್ತಿ ಗಳಿಸಿದ್ದಾರೆ. ಇದರೊಂದಿಗೆ ಎರಡನೇ ಸ್ಥಾನಕ್ಕೇರಿದ್ದಾರೆ.

23 ವರ್ಷದ ಚೋಪ್ರಾ 87.58 ಮೀಟರ್ಸ್ ದೂರ ಜಾವೆಲಿನ್ ಎಸೆದು ಚಿನ್ನ ಜಯಿಸಿದ್ದರು. ಈ ಸಾಧನೆಗಿಂತ ಮೊದಲು ಅವರು 16ನೇ ರ‍್ಯಾಂಕ್‌ನಲ್ಲಿದ್ದರು. ಟೋಕಿಯೊ ಸಾಧನೆಯಿಂದಾಗಿ ಅವರು ಸರಾಸರಿ 1224 ಪಾಯಿಂಟ್ ಗಳಿಸಿದ್ದಾರೆ.


ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ 1315 ಪಾಯಿಂಟ್ಸ್‌ಗಳೊಂದಿಗೆ ದ್ವಿತೀಯರಾಗಿದ್ದಾರೆ. ಮೊದಲ ಸ್ಥಾನದಲ್ಲಿ ಜರ್ಮನಿಯ ಜೋನಾಸ್ ವೆಟರ್ (1396) ಇದ್ದಾರೆ. ಒಲಿಂಪಿಕ್ಸ್‌ನಲ್ಲಿ ವೆಟರ್ ಒಂಬತ್ತನೇ ಸ್ಥಾನ ಪಡೆದಿದ್ದರು.

ಆಗಸ್ಟ್ 4ರಂದು ಒಲಿಂಪಿಕ್ ಜಾವೆಲಿನ್ ಥ್ರೋನ ಅರ್ಹತಾ ಸುತ್ತಿನಲ್ಲಿ ಪ್ರಥಮ ಸ್ಥಾನ ಪಡೆದಿದ್ದ ನೀರಜ್, 1296 ಅಂಕಗಳನ್ನು ಗಳಿಸಿದ್ದರು. ಫೈನಲ್‌ನಲ್ಲಿ ಚಿನ್ನ ಗೆದ್ದ ನಂತರ 1559 ಅಂಕಗಳನ್ನು ಕಲೆಹಾಕಿದ್ದರು.

ಕಳೆದೊಂದು ವರ್ಷದಲ್ಲಿ ನಡೆದಿದ್ದ ಫೆಡರೇಷನ್ ಕಪ್, ಇಂಡಿಯನ್ ಗ್ರ್ಯಾನ್ ಪ್ರೀ –3 ಮತ್ತು ಫಿನ್ಲೆಂಡ್‌ನಲ್ಲಿ ನಡೆದಿದ್ದ ಕೌರ್ಟೆನ್ ಗೇಮ್ಸ್‌ನಲ್ಲಿ ಅವರು ಮಾಡಿದ್ದ ಸಾಧನೆಯೂ ಅವರ ಅಂಕಗಳಿಗೆ ಸೇರಿವೆ. ಈ ಒಂದು ವರ್ಷದಲ್ಲಿ ವೆಟರ್ ಅವರು 90 ಮೀಟರ್ಸ್‌ಗೂ ಹೆಚ್ಚಿನ ಥ್ರೋಗಳನ್ನು ಮಾಡಿದ್ದರು. ಒಲಿಂಪಿಕ್ ಕೂಟಕ್ಕೂ ಮುನ್ನವೇ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದರು.

ಒಲಿಂಪಿಕ್ ಅರ್ಹತೆ ಗಿಟ್ಟಿಸುವಲ್ಲಿ ವಿಫಲರಾಗಿದ್ದ ಪೋಲೆಂಡ್‌ನ ಮಾರ್ಸಿನ್ ಕ್ರುಕೊವಸ್ಕಿ ಮೂರನೇ ಸ್ಥಾನದಲ್ಲಿದ್ದಾರೆ. ಅವರು ಈ ಋತುವಿನಲ್ಲಿ 89.55 ಮೀಟರ್ಸ್ ದೂರ ಥ್ರೋ ಸಾಧನೆ ಮಾಡಿದ್ದರು.

ಕಮಲ್‌ಪ್ರೀತ್‌ಗೆ ಹತ್ತನೇ ಸ್ಥಾನ: ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಡಿಸ್ಕಸ್ ಥ್ರೋ ಫೈನಲ್ ಪ್ರವೇಶಿಸಿದ್ದ ಭಾರತದ ಕಮಲ್‌ಪ್ರೀತ್ ಕೌರ್ ವಿಶ್ವ ಶ್ರೇಯಾಂಕದಲ್ಲಿ ಹತ್ತನೇ ಸ್ಥಾನ ಗಳಿಸಿದ್ದಾರೆ. ಅವರು ಟೋಕಿಯೊದಲ್ಲಿ ಫೈನಲ್‌ನಲ್ಲಿ ಆರನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದರು. 1221 ಪಾಯಿಂಟ್ಸ್‌ಗಳು ಅವರ ಖಾತೆಯಲ್ಲಿವೆ.



ನೀರಜ್ ಚೋಪ್ರಾ –ರಾಯಿಟರ್ಸ್ ಚಿತ್ರ

ವಿಶ್ವ ಅಥ್ಲೆಟಿಕ್ಸ್ ರ‍್ಯಾಂಕಿಂಗ್ (ಜಾವೆಲಿನ್ ಥ್ರೋ)

ರ‍್ಯಾಂಕ್	ಅಥ್ಲೀಟ್	ಪಾಯಿಂಟ್	ದೇಶ
1	ಜೊಹಾನ್ಸ್ ವೆಟರ್	1396	ಜರ್ಮನಿ
2	ನೀರಜ್ ಚೋಪ್ರಾ	1315	ಭಾರತ
3	ಮರ್ಸಿನ್ ಕ್ರುಕೊವಸ್ಕಿ	1302	ಪೋಲೆಂಡ್
4	ಜೇಕಬ್ ವಾಡ್ಲೆಚ್	1298	ಜೆಕ್ ಗಣರಾಜ್ಯ
5	ಜೂಲಿಯನ್ ವೆಬರ್	1291	ಜರ್ಮನಿ

* ಮೂಲ: ವಿಶ್ವ ಅಥ್ಲೆಟಿಕ್ಸ್ (ಡಬ್ಲುಎ)

ಮುಖ್ಯಾಂಶಗಳು

- ಒಲಿಂಪಿಕ್ಸ್‌ನ ಮಹಿಳಾ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದ ಕಮಲ್‌ಪ್ರೀತ್ ಕೌರ್‌ಗೆ 10ನೇ ಸ್ಥಾನ.
- ಒಲಿಂಪಕ್ಸ್‌ನಲ್ಲಿ ಚೋಪ್ರಾ 87.58 ಮೀಟರ್ಸ್ ದೂರ ಜಾವೆಲಿನ್ ಎಸೆದಿದ್ದರು.

ಪಿಎಸ್‌ಜಿನಲ್ಲಿ ಮೆಸ್ಸಿ ಅಭ್ಯಾಸ

ಪ್ಯಾರಿಸ್ (ಎಎಫ್‌ಪಿ): ಅದ್ದೂರಿ ಸ್ವಾಗತ ಮತ್ತು ಜೆರ್ಸಿ ಬಿಡುಗಡೆ ಸಮಾರಂಭದ ಬೆನ್ನಲ್ಲೇ ಲಯೊನೆಲ್ ಮೆಸ್ಸಿ ಅವರು ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ತಂಡದಲ್ಲಿ ಗುರುವಾರ ಅಭ್ಯಾಸ ಆರಂಭಿಸಿದ್ದಾರೆ.

ಬಾರ್ಸಿಲೋನಾ ತಂಡ ತೊರೆದ 34 ವರ್ಷದ ಮೆಸ್ಸಿ ಅವರಿಗೆ ಪಿಜಿಎಸ್‌ನಲ್ಲಿ ಬುಧವಾರ ಸ್ವಾಗತ ಕೋರಲಾಗಿತ್ತು. ಅನಂತರ ಅವರನ್ನು ಸಾರ್ವಜನಿಕವಾಗಿ ತಂಡದೊಂದಿಗೆ ಪ್ರದರ್ಶಿಸಲಾಗಿತ್ತು. ಗುರುವಾರ ತಂಡದ ಶಿಬಿರ ಪ್ರವೇಶಿಸಿದ ಅವರು ಕೆಲವು ದೈಹಿಕ ವ್ಯಾಯಾಮಗಳನ್ನಷ್ಟೇ ಮಾಡಿದರು.

‘ಒಂದು ತಿಂಗಳಿಂದ ಅಂಗಣದಿಂದ ದೂರ ಇದ್ದೆ. ಹೀಗಾಗಿ ಸದ್ಯ ದೇಹವನ್ನು ಸಿದ್ಧಗೊಳಿಸಬೇಕಾಗಿದೆ. ಫಿಟ್‌ನೆಸ್ ಗಳಿಸಿದ ನಂತರವಷ್ಟೇ ಆಟದ ಅಭ್ಯಾಸ ಮಾಡುವೆ. ಪಿಜಿಎಸ್ ಜೊತೆ ಫುಟ್‌ಬಾಲ್ ಆಡಲು ಕಾತರನಾಗಿದ್ದೇನೆ’ ಎಂದು ಮೆಸ್ಸಿ ತಿಳಿಸಿದರು.

ಮೌರಿಸಿಯೊ ಪೊಚೆಟಿನೊ ಅವರ ತಂಡ ಈ ವಾರಾಂತ್ಯದಲ್ಲಿ ಲೀಗ್–1ರಲ್ಲಿ ಕಣಕ್ಕೆ ಇಳಿಯಲಿದೆ. ಈ ಪಂದ್ಯದಲ್ಲಿ ಮೆಸ್ಸಿ ಆಡುವುದು ಸಂದೇಹ. ಈ ಹಿನ್ನೆಲೆಯಲ್ಲಿ ಮಾತನಾಡಿದ ಅವರು ನನ್ನ ಮುಂದಿನ ಪಂದ್ಯ ಯಾವುದು ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ಆಡಲು ಸಿದ್ಧನಾಗಿದ್ದೇನೆ ಎಂದಷ್ಟೇ ಹೇಳಬಲ್ಲೆ ಎಂದರು.

ಲಾಲಿಗಾ, ಇಪಿಎಲ್ ಸಂಭ್ರಮ

ಬಾರ್ಸಿಲೋನ/ಲಂಡನ್ (ರಾಯಿಟರ್ಸ್/ಎಪಿ): ಲಯೊನೆಲ್ ಮೆಸ್ಸಿ ಅವರ ಅನುಪಸ್ಥಿತಿ ಮತ್ತು ಬಾರ್ಸಿಲೋನ–ರಿಯಲ್ ಮ್ಯಾಡ್ರಿಡ್‌ನ ಶೀತಲ ಸಮರದ ನಡುವೆ ಲಾಲಿಗ ಫುಟ್‌ಬಾಲ್ ಟೂರ್ನಿಯ ಈ ಋತುವಿನ ಪಂದ್ಯಗಳು ಶನಿವಾರ (ಭಾರತೀಯ ಕಾಲಮಾನ ಶುಕ್ರವಾರ ತಡರಾತ್ರಿ) ಆರಂಭವಾಗಲಿವೆ. ಮೆಸ್ಸಿ ಅವರ ನಿರ್ಗಮನದಿಂದ ಬಾರ್ಸಿಲೋನ ತಂಡ ತಾರಾ ಆಟಗಾರನನ್ನು ಕಳೆದುಕೊಂಡಿದೆ.

ರಿಯಲ್ ಮ್ಯಾಡ್ರಿಡ್‌ನ ಕರೀಂ ಬೆನ್ಸೆಮಾ, ಅಟ್ಲೆಟಿಕೊ ಮ್ಯಾಡ್ರಿಡ್‌ನ ಲೂಯಿಸ್ ಸೌರೆಜ್ ಮತ್ತು ಬಾರ್ಸಿಲೋನಾದ ಆ್ಯಂಟೋನ್ ಗ್ರೀಜ್‌ಮನ್ ಅವರು ಈಗ ಉಳಿದಿರುವ ಪ್ರಮುಖ ಆಟಗಾರರು. ಆದರೆ ಇವರು ಯಾರೂ ಮೆಸ್ಸಿ ಮತ್ತು ರೊನಾಲ್ಡೊ ಅವರ ಮಟ್ಟಕ್ಕೆ ಬೆಳೆದವರಲ್ಲ. ಆದರೂ ಈ ಬಾರಿಯ ಟೂರ್ನಿಯಲ್ಲಿ ಯಾವ ರೀತಿಯ ಪ್ರದರ್ಶನ ನೀಡುತ್ತಾರೆ ಎಂಬ ಕುತೂಹಲ ಈಗ ಮೂಡಿದೆ.

ಮೊದಲ ಪಂದ್ಯ: ವೆಲೆನ್ಸಿಯಾ –ಗೆಟಾಫಿ
ಆರಂಭ: ಶುಕ್ರವಾರ ರಾತ್ರಿ 12.30.

ಮತ್ತೊಂದೆಡೆ ಇಂಗ್ಲಿಷ್ ಪ್ರೀಮಿಯರ್ ಲೀಗ್ ಟೂರ್ನಿ ಕೂಡ ಶನಿವಾರ ಆರಂಭವಾಗಲಿದೆ. ಬ್ರೆಂಟ್ ಫೋರ್ಡ್ ಕಮ್ಯುನಿಟಿ ಕ್ರೀಡಾಂಗಣದಲ್ಲಿ ಈ ಬಾರಿ ಪಂದ್ಯಗಳು ನಡೆಯಲಿರುವುದು ಫುಟ್‌ಬಾಲ್ ಪ್ರಿಯರ ಸಂಭ್ರಮ ಹೆಚ್ಚಿಸಿದೆ. ಯೂರೊ ಕಪ್‌ನಲ್ಲಿ ಮಿಂಚಿರುವ ಹ್ಯಾರಿ ಕೇನ್ ಟಾಟನ್ ಹ್ಯಾಮ್ ತಂಡದ ಪರವಾಗಿ ಕಣಕ್ಕೆ ಇಳಿಯಲಿದ್ದಾರೆ.

ಮೊದಲ ಪಂದ್ಯ: ಬ್ರೆಂಟ್‌ಫೋರ್ಡ್–ಆರ್ಸೆನಲ್
ಆರಂಭ: ರಾತ್ರಿ ಶುಕ್ರವಾರ 12.30
ನೇರ ಪ್ರಸಾರ: ಸ್ಟಾರ್ ನೆಟ್‌ವರ್ಕ್

ಅಥ್ಲೀಟ್‌ಗೆ ಬದಲಿ ಚಿನ್ನದ ಪದಕ!

ಟೋಕಿಯೊ (ರಾಯಿಟರ್ಸ್): ಸಾಫ್ಟ್‌ಬಾಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದ ಜಪಾನ್ ತಂಡದ ಆಟಗಾರ್ತಿಗೆ ಬದಲಿ ಪದಕ ನೀಡಲು ಟೋಕಿಯೊ ಒಲಿಂಪಿಕ್ಸ್ ಆಯೋಜಕರು ನಿರ್ಧರಿಸಿದ್ದಾರೆ.

ಕೇಂದ್ರ ಜಪಾನ್‌ನ ನಗೋಯ ನಗರದ ಮೇಯರ್ ಟಕಾಶಿ ಕವಮುರ ಅವರು ಸಂಭ್ರಮದಲ್ಲಿ ಸಾಫ್ಟ್‌ಬಾಲ್ ತಂಡದ ಆಟಗಾರ್ತಿ ಮಿಯು ಗೋತೊ ಅವರ ಪದಕ ಕೈಗೆತ್ತಿಕೊಂಡು ಮಾಸ್ಕ್ ಕೆಳಗಿಳಿಸಿ ಕಚ್ಚಿದ್ದರು. ಇದರಿಂದ ಪದಕಕ್ಕೆ ಹಾನಿಯಾಗಿತ್ತು. ಈ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಭಾರಿ ಚರ್ಚೆಯಾಗಿತ್ತು.

‘ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಗೋತೊ ಅವರ ಸ್ವಯಂ ಆಸಕ್ತಿಯಿಂದ ಪದಕವನ್ನು ಬದಲಿಸಲು ನಿರ್ಧರಿಸಲಾಗಿದೆ. ಅವರಿಗೆ ಹೊಸ ಪದಕ ನೀಡಲಾಗುವುದು’ ಎಂದು ಆಯೋಜಕರು ತಿಳಿಸಿದ್ದಾರೆ.



ಮಿಯು ಗೋತೊ –ಎಎಫ್‌ಪಿ ಚಿತ್ರ

ಪ್ಯಾರಾ ಅಥ್ಲೀಟ್ಸ್‌ಗೆ ಬೀಳ್ಕೊಡುಗೆ

ಪ್ಯಾರಾಲಿಂಪಿಕ್ ಸಮಿತಿಯ ವರ್ಚುವಲ್ ಕಾರ್ಯಕ್ರಮ

ನವದೆಹಲಿ (ಪಿಟಿಐ): ಟೋಕಿಯೊದಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳಿಗೆ ಗುರುವಾರ ಅದ್ದೂರಿ ಬೀಳ್ಕೊಡುಗೆ ನೀಡಲಾಯಿತು. 54 ಮಂದಿಯನ್ನೊಳಗೊಂಡ ತಂಡಕ್ಕೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧಿಕಾರಿಗಳು ಶುಭ ಹಾರೈಸಿದರು.

ಮೇಲೆ ಭಾರಿ ನಿರೀಕ್ಷೆಗಳಿವೆ. ಮೂರನೇ ಚಿನ್ನದ ಮೇಲೆ ಕಣ್ಣಿಟ್ಟಿರುವ ದೇವೇಂದ್ರ ಜಜಾರಿಯ ಜಾವೆಲಿನ್ ಎಸೆತದ ಎಫ್ 46 ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.


ಅವರು 2004 ಮತ್ತು 2016ರಲ್ಲಿ ಚಾಂಪಿಯನ್ ಆಗಿದ್ದರು. ಹೈಜಂಪ್‌ನ ಟಿ–63 ವಿಭಾಗದಲ್ಲಿ ಸ್ಪರ್ಧಿಸಲಿರುವ ಮರಿಯಪ್ಪನ್ ತಂಗವೇಲು ಮತ್ತು ಜಾವೆಲಿನ್‌ನ ಎಫ್–64 ವಿಭಾಗ ದಲ್ಲಿ ಸ್ಪರ್ಧಿಸಲಿರುವ ವಿಶ್ವ ಚಾಂಪಿಯನ್ ಸಂದೀಪ್ ಚೌಧರಿ ಅವರು ಕೂಡ ಚಿನ್ನ ಗೆಲ್ಲುವ ಭರವಸೆ ಇದೆ.

ಮರಿಯಪ್ಪನ್ ಕಳೆದ ಬಾರಿ ರಿಯೊದಲ್ಲಿ ಚಿನ್ನ ಗಳಿಸಿದ್ದರು. ಆಗಸ್ಟ್ 24ರಂದು ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಅವರು ಭಾರತದ ಧ್ವಜಧಾರಿಯಾಗಿರುವರು. ಸೆಪ್ಟೆಂಬರ್ ಐದರಂದು ಪ್ಯಾರಾಲಿಂಪಿಕ್ಸ್ ಮುಕ್ತಾಯಗೊಳ್ಳಲಿದೆ.

‘ಪ್ಯಾರಾ ಅಥ್ಲೀಟ್‌ಗಳ ಸ್ಥೈರ್ಯ ಮತ್ತು ಉನ್ನತ ಸಾಧನೆಯ ಛಲ ಎಲ್ಲ ಭಾರತೀಯರಿಗೂ ಪ್ರೇರಣೆಯಾಗಲಿದೆ. ಅವರ ಆತ್ಮವಿಶ್ವಾಸವು ಸವಾಲುಗಳನ್ನು ಎದುರಿಸುವ ಧೈರ್ಯವನ್ನು ನಮ್ಮಲ್ಲಿ ತುಂಬಲಿದೆ. ಈ ಕಾರಣದಿಂದ ಅವರಿಗೆ ಎಲ್ಲ ಬಗೆಯ ಗೌರವವೂ ಸಲ್ಲಬೇಕು’ ಎಂದು ವರ್ಚುವಲ್ ಸಮಾರಂಭದಲ್ಲಿ ಅನುರಾಗ್ ಠಾಕೂರ್ ಹೇಳಿದರು.

ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷೆ ದೀಪಾ ಮಲಿಕ್ ‘ಈ ಬಾರಿ ನಮ್ಮ ಕ್ರೀಡಾಪಟುಗಳು ಉತ್ತಮ ಸಾಮರ್ಥ್ಯ ತೋರುವ ಹುಮ್ಮಸ್ಸಿನಲ್ಲಿದ್ದು ದಾಖಲೆಯ ಪದಕಗಳು ಸಿಗಲಿವೆ’ ಎಂದು ಹೇಳಿದರು. ದೀಪಾ ಅವರು ರಿಯೊ ಪ್ಯಾರಾಲಿಂಪಿಕ್ಸ್‌ನ ಶಾಟ್‌ಪಟ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ರಿಯೊದಲ್ಲಿ ಭಾರತ ಎರಡು ಚಿನ್ನ, ತಲಾ ಒಂದು ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿತ್ತು.

ಭಾರತದ ಸ್ಪರ್ಧೆಗಳು ಆಗಸ್ಟ್ 27ರಂದು ಆರ್ಚರಿಯೊಂದಿಗೆ ಆರಂಭವಾಗಲಿವೆ. ಅಂದಿನಿಂದ ಯೂರೊ ಸ್ಪೋರ್ಟ್ ಚಾನಲ್ ಕ್ರೀಡಾಕೂಟದ ನೇರಪ್ರಸಾರ ಮಾಡಲಿದೆ.



ಪ್ಯಾರಾಲಿಂಪಿಕ್ಸ್ ಕೂಟದ ಲಾಂಛನ –ರಾಯಿಟರ್ಸ್ ಚಿತ್ರ

ಹಾಕಿಪಟು ವಿವೇಕ್ ಸಾಗರ್‌ಗೆ ₹ 1 ಕೋಟಿ

ಭೋಪಾಲ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡದಲ್ಲಿದ್ದ ಮಧ್ಯಪ್ರದೇಶದ ವಿವೇಕ್ ಸಾಗರ್ ಅವರನ್ನು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಗುರುವಾರ ಸನ್ಮಾನಿಸಿದರು. ಅವರಿಗೆ ₹ ಒಂದು ಕೋಟಿ ಮೊತ್ತದ ಚೆಕ್ ನೀಡಿ ಶಾಲು ಹೊದಿಸಿ ಗೌರವಿಸಲಾಯಿತು.

ಮಿಂಟೊ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮತನಾಡಿದ ಮುಖ್ಯಮಂತ್ರಿಗಳು ವಿವೇಕ್ ಸಾಗರ್ ಅವರನ್ನು ಉಪ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕ ಮಾಡಿರುವುದಾಗಿಯೂ ಘೋಷಿಸಿದರು. ‘ವಿವೇಕ್ ಸಾಗರ್ ಇಂದಿನಿಂದ ಡಿಎಸ್‌ಪಿ’ ಎಂದು ಮುಖ್ಯಮಂತ್ರಿಗಳು ಸಂಭ್ರಮದಿಂದ ಹೇಳಿದರು.



ಮಧ್ಯಪ್ರದೇಶ ಸ್ಪೋರ್ಟ್ಸ್ ಅಕಾಡೆಮಿ ಆಟಗಾರರು ವಿವೇಕ್ ಸಾಗರ್ ಅವರನ್ನು ಎತ್ತಿಹಿಡಿದು ಸಂಭ್ರಮಿಸಿದರು –ಪಿಟಿಐ ಚಿತ್ರ

ಭಾರತ ಬಾಕ್ಸಿಂಗ್ ಸಮಿತಿ ಸ್ಥಾಪನೆ

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಸಮಿತಿ ರಚಿಸಲು ವಿಶ್ವ ಬಾಕ್ಸಿಂಗ್ ಸಮಿತಿ (ಡಬ್ಲ್ಯುಬಿಸಿ) ಅಸ್ತು ನೀಡಿದೆ. ಈ ಕುರಿತು ಅಧಿಕೃತ ಘೋಷಣೆ ಗುರುವಾರ ಹೊರಬಿದ್ದಿದೆ.

ವೃತ್ತಿಪರ ಬಾಕ್ಸರ್‌ಗಳನ್ನು ಬೆಳೆಸುವ ಉದ್ದೇಶದಿಂದ ದೇಶಿ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ಗಳನ್ನು ಆಯೋಜಿಸುವ ಉದ್ದೇಶವನ್ನು ಸಮಿತಿ ಹೊಂದಿದ್ದು ಇದರಿಂದ ಭಾರತದ ಬಾಕ್ಸರ್‌ಗಳಿಗೆ ಹೆಚ್ಚು ಅವಕಾಶಗಳು ಲಭಿಸಲಿವೆ ಎಂದು ನಂಬಲಾಗಿದೆ. ಬಾಕ್ಸಿಂಗ್ ಅಭಿವೃದ್ಧಿ, ಉನ್ನತೀಕರಣ ಮತ್ತು ಅಳವಡಿಕೆಯ ಉದ್ದೇಶವೂ ಸಮಿತಿಗೆ ಇದೆ ಎಂದು ಹೇಳಲಾಗಿದೆ.

ಪುರುಷ ಮತ್ತು ಮಹಿಳಾ ಬಾಕ್ಸರ್‌ಗಳಿಗೆ ರ‍್ಯಾಂಕಿಂಗ್ ಪದ್ಧತಿ ಅಳವಡಿಸಲು ಮತ್ತು ಬಾಕ್ಸರ್‌ಗಳಿಗೆ ಭದ್ರತೆ ಒದಗಿಸಲು ಸಮಿತಿ ಮುಂದಾಗಲಿದೆ.

‘ಭಾರತದ ಬಾಕ್ಸರ್‌ಗಳು ಕಠಿಣ ಪರಿಶ್ರಮ ಮಾಡುತ್ತಿದ್ದು ವೃತ್ತಿಪರ ಬಾಕ್ಸಿಂಗ್‌ನಲ್ಲಿ ಈಗಾಗಲೇ ಮಿಂಚುತ್ತಿದ್ದಾರೆ. ಈಚಿನ ವರ್ಷಗಳಲ್ಲಿ ನಡೆದ ಬಾಕ್ಸಿಂಗ್ ಸರ್ಕಿಟ್‌ನಲ್ಲಿ ಅವರು ಉತ್ತಮ ಸಾಮರ್ಥ್ಯ ತೋರಿದ್ದಾರೆ. ಡಬ್ಲ್ಯುಬಿಸಿ ಇಂಡಿಯಾ ಚಾಂಪಿಯನ್‌ಷಿಪ್‌ಗಳು ದೇಶದಲ್ಲಿ ಬಾಕ್ಸಿಂಗ್ ಉತ್ತಮ ಹಾದಿಯಲ್ಲಿ ನಡೆಯಲು ನೆರವಾಗಲಿದೆ’ ಎಂದು ಭಾರತ ಬಾಕ್ಸಿಂಗ್ ಸಮಿತಿ ಅಧ್ಯಕ್ಷ ಪಿ.ಕೆ. ಮುರಳೀಧರನ್ ರಾಜಾ ಅಭಿಪ್ರಾಯಪಟ್ಟರು.

ಯೂತ್ ವಿಶ್ವ ಆರ್ಚರಿ: ಫೈನಲ್‌ಗೆ ಕೋಮಲಿಕಾ

ರಾಕ್ಲಾಫ್, ಪೋಲೆಂಡ್ (ಪಿಟಿಐ): ಭಾರತದ ಕೋಮಲಿಕಾ ಬಾರಿ ಇಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಆರ್ಚರಿ 21 ವರ್ಷದೊಳಗಿನವರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

18 ವರ್ಷದೊಳಗಿನವರ ರಿಕರ್ವ್ ವಿಶ್ವ ಚಾಂಪಿಯನ್ ಆಗಿರುವ ಕೊಮಲಿಕಾ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 6–4 (28-27, 25-28, 28-26, 25-30, 29-25) ರಿಂದ ಅಮೆರಿಕದ ಕ್ಯಾಸಿ ಕೌಫೋಲ್ಡ್ ಸವಾಲು ಮೀರಿ ನಿಂತರು.

ಆರನೇ ಶ್ರೇಯಾಂಕದ ಕೋಮಲಿಕಾ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಸ್ಪೇನ್ ದೇಶದ ನಾಲ್ಕನೇ ಶ್ರೇಯಾಂಕದ ಎಲಿಯಾ ಕ್ಯಾನಾಲೆಸ್ ಅವರನ್ನು ಎದುರಿಸುವರು. ಒಂದೊಮ್ಮೆ ಇಲ್ಲಿ ಅವರು ಪದಕ ಜಯಿಸಿದರೆ, ದೀಪಿಕಾ ಕುಮಾರಿ ಅವರ ದಾಖಲೆಯನ್ನು ಸರಿಗಟ್ಟುವರು.

2009 ರಿಂದ 2011ರ ಅವಧಿಯಲ್ಲಿ ದೀಪಿಕಾ ಜೂನಿಯರ್ ಮತ್ತು ಕೆಡೆಟ್ ವಿಭಾಗಗಳಲ್ಲಿ ವಿಶ್ವ ಚಾಂಪಿಯನ್ ಆಗಿದ್ದರು. ಈ ಸಾಧನೆ ಮಾಡಿದ ಭಾರತದ ಏಕೈಕ ಮಹಿಳಾ ಆರ್ಚರ್ ಅವರಾಗಿದ್ದಾರೆ.

‘ಫೈನಲ್‌ನಲ್ಲಿ ನನ್ನ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡುತ್ತೇನೆ. ನನ್ನ ಪದಕ ಸಂಗ್ರಹಕ್ಕೆ ಮತ್ತೊಂದು ಚಿನ್ನವನ್ನು ಸೇರಿಸುತ್ತೇನೆ’ ಎಂದು ಜೆಮ್‌ಷೆಡ್‌ಪುರದ ಕೋಮಲಿಕಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಫೈನಲ್‌ಗೆ ಸಾಕ್ಷಿ: ಜೂನಿಯರ್ ಬಾಲಕಿಯರ ವಿಭಾಗದ ಕೌಂಪೌಡ್ ವಿಭಾಗದ ಫೈನಲ್‌ಗೆ ಸಾಕ್ಷಿ ಚೌಧರಿ ಪ್ರವೇಶಿಸಿದ್ದಾರೆ.

ಸಾಕ್ಷಿ 144–142 ರಿಂದ ಅಮೆರಿಕದ ಅನಾ ಸ್ಕಾರ್‌ಬರೊ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿದರು. ಅವರು ಫೈನಲ್‌ನಲ್ಲಿ ಕ್ರೊವೇಷ್ಯಾದ ಅಮಂದಾ ಮ್ಲಿನಾರಿಚ್ ಅವರನ್ನು ಎದುರಿಸುವರು.

ಬಾಲಕರ ವಿಭಾಗದಲ್ಲಿ ರಿಷಭ್ ಯಾದವ್ ಕೂಡ ಕಂಚಿನ ಪದಕದ ಸುತ್ತಿಗೆ ಪ್ರವೇಶಿಸಿರುವರು.

ವೈಯಕ್ತಿಕ ವಿಭಾಗದ ಸೆಮಿಫೈನಲ್‌ನಲ್ಲಿ ರಿಷಭ್ 146–147 ರಿಂದ ಇಸ್ಟೊನಿಯಾದ ರಾಬಿನ್ ಜಾಮ್ಹಾ ಎದುರು ಸೋತರು. ಅವರು ಕಂಚಿನ ಪದಕದ ಸುತ್ತಿನಲ್ಲಿ ಮೆಕ್ಸಿಕೊದ ಸೆಬಾಸ್ಟಿಯನ್ ಗಾರ್ಸಿಯಾ ವಿರುದ್ಧ ಸ್ಪರ್ಧಿಸುವರು.